Member's Representation.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಈಗ ತಮ್ಮ ಬಲಭಾಗದಲ್ಲಿರತಕ್ಕ ಫೋಟೋಕ್ಕೆ ಏನು ಅಲಂಕಾರ ಮಾಡಿದ್ದೀರೋ ಹಾಗೇ ಆ ಎಡಭಾಗದಲ್ಲಿರತಕ್ಕ ಫೋಟೋಕ್ಕೂ ಅಲಂಕಾರ ಮಾಡಬೇಕಾಗಿತ್ತು ಎಂದು ನಾನು ತಮ್ಮಲ್ಲಿ ಒಂದು ಸೂಚನೆ ಮಾಡಲಿಚ್ಛಿಸುತ್ತೇನೆ.

Mr. SPEAKER—Yes, all right. I have heard the Hon'ble Member.

VOTING OF DEMANDS FOR ADDITIONAL AND SUPPLEMENTARY GRANTS FOR THE YEAR 1963-64 (FIRST INSTALMENT).

DEMAND NO. 9—LAND REVENUE.

Sri M. V. KRISHNAPPA (Minister for Revenue).—Sir, on the recommendation of the Governor of Mysore, I beg to move :

> "That a further sum not exceeding Rs. 24,92,300 be granted to the Government to defray the charges which will come in course of payment during the financial year for the period ending 31st day of March 1964, in respect of 'Land Revenue'."

Mr. SPEAKER.—Motion moved :

> "That a further sum not exceeding Rs. 24,92,300 be granted to the Government to defray the charges which will come in course of payment during the financial year for the period ending 31st day of March 1964, in respect of Land Revenue."

Including the Appropriation Bill, all the other Demands, *viz.*, Demands Nos. 3 to 5, 7 to 27, 29 to 32, 37 to 39, 41A, 44 to 48, 50 and 54 are also before the House.

What is the time allotted for the discussion of these Supplementary Demands ?

Sri B. D. JATTI.—The time allotted is five hours including the Appropriation Bill as per the decision of the Business Advisory Committee.

Sri G. V. GOWDA (Palya).—How can the time allotted for the Snpplementary Demands be clubbed with the Appropriation Bill ?

Sri B. D. JATTI.—It is as per the decision of the Business Advisory Committee and the Report of the Business Advisory Committee was passed just now by the House.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಅಪ್ರೋಪ್ರಿಯೇಷನ್ ಬಿಲ್ಲಿನ ಚರ್ಚೆಯನ್ನೂ ಇದರಲ್ಲೇ ಹೇಗೆ ಸೇರಿಸುತ್ತೀರಿ ? ಅಧ್ಯಕ್ಷರು ತಮಗಿರತಕ್ಕ ಅಧಿಕಾರ ಉಪಯೋಗಿಸಿ ನಮಗೆ ಸ್ವಲ್ಪ ಹೆಚ್ಚಿನ ಕಾಲಾವಕಾಶ ಮಾಡಿಕೊಡಬೇಕು.

Sri B. D. JATTI.—The Appropriation Bill can be taken up to-morrow.

Sri G. V. GOWDA.—We have only 4½ hours for this. I suggest that the replay to the Supplementary Demands may kindly be had to-morrow.

Mr. SPEAKER.—Sri Gowda may kindly consider what he is saying. Supplementary Demand is not a regular Budget. The Hon'ble Member ought to be as brief as possible. It would be better if the Whips meet and help me in the matter.

ಶ್ರೀ ಸಿ.ಜೆ. ಮುಕ್ಕಣ್ಣಪ್ಪ.—ನಾನಾಗಲೇ ಹೇಳಿದಂತೆ ಅಧ್ಯಕ್ಷರು ನಮಗೆ ಸ್ವಲ್ಪ ಹೆಚ್ಚಿನ ಕಾಲಾವಕಾಶ ಮಾಡಿಕೊಟ್ಟರೆ ಸಾಕು.

Mr. SPEAKER.—There is not much time for anything else other than what is included in the Agenda.

Sri C. J. MUCKANNAPPA.—After passing of the Budget, if we came forward for more money for the expenditure.

Mr. SPEAKER.—If the members are willing to sit up a little late I am prepared to extend the time.

HON'BLE MEMBERS.—That can be done, Sir.

† ಶ್ರೀ ಕೆ. ಹೆಚ್. ರಂಗನಾಥ್ (ಮೂಡಿಗೆರೆ).—ಸ್ವಾಮಿ, ನಾನೀಗ ಸಭೆಯ ಮುಂದೆ ಮಂಡಿಸಿರತಕ್ಕ ಅಡಿಷನಲ್ ಸಪ್ಲಿಮೆಂಟರಿ ಗ್ರಾಂಟುಗಳ ಮೇಲೆ ಮಾತನಾಡಲು ಇಷ್ಟ ಪಡುತ್ತೇನೆ. ನಮ್ಮ ರಾಜ್ಯಾಂಗದಲ್ಲಿರತಕ್ಕ ಆರ್ಟಿಕಲ್ 205ರ ಪ್ರಕಾರ ಇಂಥ ಒಂದು ಸೂಚನೆಯನ್ನು ಸಭೆಯ ಮುಂದೆ ಮಂಡಿಸಲು ಅವಕಾಶವಿದೆ. ಆದರೆ ಈ ಒಂದು ಅವಕಾಶವನ್ನು ನಮ್ಮ ಸರ್ಕಾರ ದುರುಪಯೋಗಪಡಿಸಿಕೊಂಡು ಪ್ರತಿ ವರ್ಷವೂ ಹೀಗೇ ಇದನ್ನು ತರುತ್ತಿರುವುದನ್ನು ನೋಡಿದರೆ, ವರ್ಷಾರಂಭದಲ್ಲಿ ಬಡ್ಜೆಟ್ಟನ್ನು ತಯಾರಿಸತಕ್ಕ ಕಾಲದಲ್ಲಿ ಈ ಸಂಬಂಧಪಟ್ಟ ಕಛೇರಿಯಲ್ಲಿ ಕೆಲಸ ಮಾಡತಕ್ಕವರು ಸರಿಯಾಗಿ ವಿವೇಚನೆಯನ್ನು ಉಪಯೋಗಿಸದೆ ಇರುವುದರಿಂದ ಹೀಗಾಗುತ್ತಿದೆ, ಇದು ನಮ್ಮ ದೇಶದ ಒಂದು ದುರ್ದೈವ ಎಂದು ಹೇಳದೇ ವಿಧಿಯಿಲ್ಲ. ಇನ್ನು ಈ ಸಭೆಗೆ ಒದಗಿಸಿರತಕ್ಕ 1963ನೆಯ ಆಡಿಟ್ ವರದಿಯನ್ನು ನೋಡಿದರೆ ಈ ಒಂದು ಆಯವ್ಯಯವನ್ನು ತಯಾರು ಮಾಡುವ ಕಾರ್ಯಾಲಯ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂಬುದಕ್ಕೆ ಇಲ್ಲಿ ಬೇಕಾದಷ್ಟು ಆಧಾರಗಳು ಸಿಕ್ಕುತ್ತವೆ. 1963ನೆಯ ಆಡಿಟ್ ರಿಪೋರ್ಟ್ ಪ್ರಕಾರ ನಮ್ಮ ಬಡ್ಜೆಟ್ಟಿನಲ್ಲಿ 15.8) ಕೋಟಿ ರೂಪಾಯಿಗಳ ಉಳಿತಾಯವಾಗಿದೆ. ಇದನ್ನು ನಾವು ಸ್ವಲ್ಪ ದೀರ್ಘವಾಗಿ ಆಲೋಚನೆ ಮಾಡಿ ನೋಡಿದರೆ ಈ ಮಾನ್ಯ ಸಭೆ ಸರ್ಕಾರಕ್ಕೆ ಒಂದು ವರ್ಷ ಕಾಲದಲ್ಲಿ ಏನೊಂದು ಹಣವನ್ನು ಖರ್ಚುಮಾಡಬೇಕೆಂದು ಕೊಟ್ಟಿರುತ್ತದೋ ಆ ಹಣವನ್ನು ಸರ್ಕಾರ ಸರಿಯಾಗಿ ಖರ್ಚುಮಾಡದೆ ಇರುವುದರಿಂದ ನಮ್ಮ ಪ್ಲಾನಿನಲ್ಲಿ ಕಂಡ ಕೆಲಸಕಾರ್ಯಗಳು ನಿಯಮಿತ ಕಾಲಕ್ಕೆ ಸರಿಯಾಗಿ ಆಗದೆ ಅವು ಹಿಂದೆ ಬೀಳಲು ಕಾರಣವಾಗಿರುತ್ತೆ ಎಂಬುದು ಇದರಿಂದ ಚೆನ್ನಾಗಿ ವೇದ್ಯವಾಗುತ್ತದೆ. ಇದರಿಂದ ನಮ್ಮ ಎಕಾನಮಿಗೆ ಧಕ್ಕೆ ಬರುತ್ತಿದೆ. ನಾವು ಯಾವ ಕೆಲಸಗಳನ್ನು ಎಷ್ಟು ಕಾಲದಲ್ಲಿ ಮುಗಿಸಬೇಕೆಂದು ಒಂದು ಆದೇಶವನ್ನು ಕೊಟ್ಟಿರುತ್ತೇವೋ ಅದು ಆ ಕಾಲಕ್ಕೆ ಆಗುತ್ತಿಲ್ಲ. ಇದರಿಂದ ದೇಶದ ಉತ್ಪತ್ತಿಗೆ ಕುಂದಕ ಉಂಟಾಗಿದೆ. ಹೀಗೆ ಬಡ್ಜೆಟ್ಟಿನಲ್ಲಿ ಒದಗಿಸಿರತಕ್ಕ ಹಣವೇ ಲ್ಯಾಪ್ಸಾಗುತ್ತಿರುವಾಗ ಮತ್ತೆ 61-62ನೇ ಆಡಿಟ್ ವರದಿಯಲ್ಲಿ ಹೇಳಿರುವಂತೆ ಆ ಸಾಲಿನಲ್ಲಿ ಪುನಃ ಸಪ್ಲಿಮೆಂಟರಿ ಗ್ರಾಂಟ್ ರೂಪದಲ್ಲಿ ಒದಗಿಸಿರತಕ್ಕ 27.78 ಕೋಟಿ ರೂಪಾಯಿಗಳು ಅನವಶ್ಯಕವಾಗುತ್ತಿತ್ತು ಎಂಬುದಾಗಿ ಆಡಿಟರ್ ಜನರಲ್ಲರು ಹೇಳಿದ್ದಾರೆ: ಹೀಗೆ ಸಪ್ಲಿಮೆಂಟರಿ ಗ್ರಾಂಟು ಬೇಕಾಗದೆ ಇದ್ದರೂ ಅದನ್ನು ಮಂಜೂರು ಮಾಡಿಸಿಕೊಳ್ಳುತ್ತಿದ್ದಾರೆ. ಇದರಿಂದ ಆ ವರ್ಷದ ನಮ್ಮ ಖೋತಾ ಇನ್ನೂ ಕಡಮೆಯಾಗುತ್ತಿತ್ತು ಎಂದು ಅವರು ಹೇಳಿದ್ದಾರೆ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ; ನಮ್ಮ ಸರ್ಕಾರದವರಿಗೆ ಒಂದು ವರ್ಷಕ್ಕೆ ಅವರಿಗೆ ನಿಖರವಾಗಿ ಎಷ್ಟು ಹಣ ಬೇಕು ಎಂಬುದೇ ಅವರಿಗೆ ಗೊತ್ತಿರುವುದಿಲ್ಲ ಎಂಬ ಅಂಶವನ್ನು ನಾನು ಬಹಳ ವ್ಯಸನದಿಂದ ಹೇಳಬೇಕಾಗಿದೆ. ಇವರು ಹಣವನ್ನು ಖರ್ಚು ಮಾಡುತ್ತಿರುವ ವಿಧಾನವಾದರೋ ತುಂಬಾ ವ್ಯಸನಕರವಾಗಿದೆ. ಈ ಡಿಮಾಂಡಿನಲ್ಲಿ ಅದನ್ನು ಸಮರ್ಥಿಸಲು ಬೇಕಾದಷ್ಟು ನಿದರ್ಶನಗಳಿವೆ.

ಡಿಮ್ಯಾಂಡು ೨೦ ರಲ್ಲಿ ವ್ಯವಸಾಯದ ಇಲಾಖೆಗಾಗಿ ಸುಮಾರು ೩೨,೧೧,೩೦೦ ರೂಪಾಯಿಗಳು ಬೇಕೆಂದು ಕೇಳಿದ್ದಾರೆ. ವ್ಯವಸಾಯ ಇಲಾಖೆ ಯಾವ ರೀತಿ ಕೆಲಸ ಮಾಡುತ್ತಿದೆ ಎನ್ನುವುದನ್ನು ಹೇಳಲು ಇವೊತ್ತು ಬಹಳ ವ್ಯಸನವಾಗುತ್ತದೆ. ವ್ಯವಸಾಯದ ಇಲಾಖೆ ಅತಿ ಮುಖ್ಯವಾದ ಇಲಾಖೆ. ಅದು ತನ್ನ ಕೆಲಸವನ್ನರಿತು ಕೆಲಸ ಮಾಡುವುದಾದರೆ ಬಹಳ ಒಳ್ಳೆಯದಾಗುತ್ತಿತ್ತು. ಆದರೆ ಅದಕ್ಕಾಗಿ ಈ ಸಭೆಯ ಮುಂದೆ ಹಣವನ್ನು ಒದಗಿಸಿ ಕೊಟ್ಟಿದ್ದರೂ ಆ ಇಲಾಖೆ ತನ್ನ ಕಾರ್ಯವನ್ನು ಸರಿಯಾಗಿ ಮಾಡುತ್ತಿಲ್ಲ. ಇಲಾಖೆಯ ಅಧಿಕಾರಿಗಳು ಅವರ ಕಾರ್ಯದ ಬಗ್ಗೆ ಹೆಚ್ಚು ನಿಗಾವಹಿಸದೇ ಬಹಳ ಲಘುವಾಗಿ ತೆಗೆದುಕೊಂಡಿದ್ದಾರೆ. ಅಗ್ರಿಕಲ್‌ಚರಿನ ಬಗ್ಗೆ ಆಡಿಟ್ಟು ರಿಪೋರ್ಟಿನಲ್ಲಿ ಹೇಳಿರುವಂತೆ ೨೪ ಲಕ್ಷ ರೂಪಾಯಿಗಳಷ್ಟು ಉಳಿತಾಯವನ್ನು ತೋರಿಸಿದ್ದಾರೆ. ಸರಿಯಾಗಿ ಅಲ್ಲಿನ ಕೆಲಸಗಳನ್ನು ಕಾರ್ಯಗತ ಮಾಡದೆ, ಸಾಯಿಲ್ ಕನ್‌ಸರ್‌ವೇಷನ್ನಿಗಾಗಿ ಏನೂ ಪ್ರಾಮುಖ್ಯತೆ ಕೊಡದೇ

ಇರುವುದೇ ಇದಕ್ಕೆ ಕಾರಣವಾಗಿದೆ. ಹಿಂದೆ ನಾವು ಕೊಟ್ಟ ಹಣವನ್ನೇ ಸರಿಯಾಗಿ ಉಪಯೋಗಿಸಿದ್ದ ಪಕ್ಷದಲ್ಲಿ ಈ ಹಿಂದೆ ನಾವು ಬರಗಾಲದ ಪರಿಸ್ಥಿತಿ ಬಗ್ಗೆ ಇಲ್ಲಿ ಹೆಚ್ಚು ಮಾತನಾಡುವ ಅವಶ್ಯಕತೆಯೇ ಇರುತ್ತಿರಲಿಲ್ಲ.

Sri B. D. JATTI.—The point is, if the Hon'ble Member is speaking about any specific item, we can reply. If it is generally about the framing of the Budget or if you go on talking about the audit report of 1961, what is the use of it?

Sri K. H. RANGANATH—I have said that I am speaking with reference to Demand No. 20.

Mr. SPEAKER.—I have not fixed any time limit. I have not been helped with the list of names of members except four names which have been given on behalf of one party. If one member goes on like this, we will not be able to close at 6 P.M.

Sri V. S. PATIL (Belgaum I).—As many Members want to participate a time limit may be imposed from now onwards. Otherwise, at the end of the day, there will be grumbling.

Mr. SPEAKER.-That is why I have always appealed to the whips to give me names. May I request the whips to retire to the lounge for a few minutes and give me the time break-up. Let it be remembered that there are also members who do not belong to any Party.

What time does he take?

Sri K. H. RAGANATH.—I want half-an-hour.

Mr. SPEAKER.—Les him kindly get into touch with the whips and make some adjustment of the time.

ಶ್ರೀ ಕೆ. ಎಚ್. ರಂಗನಾಥ್.—ಈ ಸಪ್ಲಿಮೆಂಟರಿ ಬಡ್ಜೆಟ್ಟಿನಲ್ಲಿ ಅಗ್ರಿಕಲ್‌ಚರ್‌ಗಾಗಿ ಇಷ್ಟು ದುಡ್ಡು ಬೇಕೆಂದು ಕೇಳಿದ್ದಾರೆ. ಅದರ ಬಗ್ಗೆ ಮಾತ್ರ ಇಲ್ಲಿ ಹೇಳುತ್ತಿದ್ದೇನೆ. ಅಗ್ರಿಕಲ್‌ಚರಿನ ವಿಷಯವಾಗಿ ದುಡ್ಡು ಕೇಳಿದ್ದಾರೆ. ಈ ಇಲಾಖೆಯ ಮೇಲೆ ಮಾತನಾಡಬೇಕಾದರೆ ಎರಡು ದಿವಸಗಳಾದರೂ ಸಾಲುವುದಿಲ್ಲ. ನಾನು ಈ ಇಲಾಖೆಯು ಸರಿಯಾಗಿ ಕೆಲಸ ಮಾಡುತ್ತಿಲ್ಲ ಸೇವಿಂಗ್ಸನ್ನು ತೋರಿಸುತ್ತಿದೆ ಎಂದು ಅದರ ಉದಾಹರಣೆ ತೋರಿಸಲು ಇದರಲ್ಲಿ Item No. 4ನಲ್ಲಿ ಇಪ್ಪತ್ತು ಲಕ್ಷ ರೂಪಾಯಿಗಳ ವೆಚ್ಚದಲ್ಲಿ U.S.S.R. Machinery ತರುವುದಕ್ಕಾಗಿ ಎಂದಿದೆ. ಈ ಬಗ್ಗೆ ಹೇಳುವುದಾದರೆ, ವ್ಯವಸಾಯ ಇಲಾಖೆಯಲ್ಲಿರತಕ್ಕ ಟ್ರಾಕ್ಟರುಗಳು, ಬುಲ್‌ಡೋಜರುಗಳಿಗಾಗಿ ಸರಕಾರಕ್ಕೆ 22.20 ಲಕ್ಷ ರೂಪಾಯಿಗಳಷ್ಟು ನಷ್ಟವಾಗಿದೆ. ಲಕ್ಷಾಂತರ ರೂಪಾಯಿಗಳಷ್ಟು ವೆಚ್ಚ ಮಾಡಿ, ಈಗ 33 ಟ್ರಾಕ್ಟರುಗಳು, 13 ಬುಲ್ ಡೋಜರುಗಳು 1951 ರಿಂದ 1961ನೇ ಇಸವಿಯವರೆಗೆ ಕೆಲಸ ಮಾಡದೇ ರಿಪೇರಿಗಾಗಿ ಹಾಗೆ ನಿಂತಿವೆ. ಇದರಿಂದಾಗಿ ಸುಮಾರು ಇಪ್ಪತ್ತೆರಡು ಲಕ್ಷ ರೂಪಾಯಿಗಳಷ್ಟು ನಷ್ಟವಾಗಿದೆ. ನಾನು ಹೇಳುವುದಾದರೂ ಬುಲ್ ಡೋಜರುಗಳಿಗಾಗಿ ಮತ್ತು ಟ್ರಾಕ್ಟರುಗಳಿಗಾಗಿ ಈಗಾಗಲೇ ಸಾಧಾರಣವಾಗಿ 63.26 ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡುತ್ತಿದ್ದೇವೆ. ಹಾಗೂ ಪ್ರತಿಯೊಂದು ಟ್ರಾಕ್ಟರಿನಿಂದಲೂ 500 ಎಕರೆಯಷ್ಟು ಭೂಮಿಯ ಕೆಲಸ ಮಾಡಬೇಕು, ಒಂದು ವರ್ಷಕ್ಕೆ ನೂರು ಗಂಟೆಗಳಷ್ಟಾದರೂ ಕೆಲಸ ಮಾಡಬೇಕೆಂದು ಟಾರ್ಜೆಟ್ಟನ್ನು ಇಟ್ಟುಕೊಳ್ಳಬೇಕು ಎನ್ನುವ ಉದ್ದೇಶಕ್ಕೇ ಧಕ್ಕೆ ತಗಲಿದೆ. ಇಲ್ಲಿ ಕೊಟ್ಟಿರುವ ಅಂಕೆ ಅಂಶಗಳಂತೆ ನೋಡಿದರೆ 88 ಗಂಟೆಗಳಷ್ಟು ಕೆಲಸ ಮಾಡಿ 292 ಎಕರೆಯಷ್ಟು ಮಾಡಿದೆ ಎಂದರೆ ನಿಗದಿಯಾದುದನ್ನೂ ಪೂರ್ತಿ ಮಾಡಲಾಗಲಿಲ್ಲ. ಅಲ್ಲದೆ 33 ಟ್ರಾಕ್ಟರುಗಳು ಮತ್ತು 13 ಬುಲ್ ಡೋಜರುಗಳು 51 ರಿಂದ 61 ರವರೆಗೆ ರಿಪೇರಿ ಆಗದೇ ಹಾಗೇ ನಿಂತಿವೆ. ಇದರ ಬಗ್ಗೆ ಸ್ಟೇಟಿನ ವ್ಯವಸಾಯ ಇಲಾಖೆಯವರು ನಿಗಾವಹಿಸಿದ್ದಿದ್ದರೆ ಇನ್ನೂ ಹೆಚ್ಚಿನ ಉಪಯೋಗ ಪಡೆಯ ಬಹುದಾಗಿತ್ತು. ಈ ಒಂದು ಉದಾಹರಣೆಯಿಂದಲೇ ನೋಡಿದರೆ ಇಲಾಖೆ ಎಷ್ಟು ಮಟ್ಟಿಗೆ ಕೆಲಸ ಮಾಡುತ್ತಿದೆ, ಇಲಾಖೆಯ ಅಧಿಕಾರಿಗಳು ಸಾರ್ವಜನಿಕ ಕ್ಷೇತ್ರದಲ್ಲಿ ಸರಿಯಾದ ಕೆಲಸವನ್ನು ನಿರ್ವಹಿಸುತ್ತಿಲ್ಲ ಎಂದು ಮತ್ತೆ ಒತ್ತಿ ಹೇಳಬೇಕಾಗಿದೆ. ಅಲ್ಲದೆ ನಮಗೆ ಹೈರ್ ಚಾರ್ಜಸ್‌ಗಾಗಿ ಸುಮಾರು 4.5 ಲಕ್ಷ ರೂಪಾಯಿಗಳಷ್ಟು ಬರಬೇಕಾಗಿದೆ; ಪ್ರೈವೇಟ್ ಪಾರ್ಟಿಗಳಿಂದ ಸುಮಾರು 83,690 ರೂಪಾಯಿಗಳಷ್ಟು ಬಾಕಿ ಬರಬೇಕಾಗಿದೆ.

(ಶ್ರೀ ಕೆ. ಎಚ್. ರಂಗನಾಥ್)

[MR. DEPUTY SPEAKER in the Chair.]

ಈ ರೀತಿ ಬಾಕಿ ಬೀಳಲು ಕಾರಣವೇನು, ಸರಕಾರದವರು ಕೇಳಬೇಡವೇ ? ಇದು ಸರಕಾರಕ್ಕೆ ಬರಬೇಕಾದ ಆದಾಯವಲ್ಲವೇ ? ಇವೊತ್ತಿನ ದಿವಸ ನಾವು ವಿಚಕ್ಷಣೆಯಿಲ್ಲದಂತಹ ಕರದ ಭಾರವನ್ನು ಹೊರಿಸಿರುವುದರಿಂದ ಅದು ವಿಪರೀತವಾಗಿ ಬರ ತ್ತಿದ್ದರೂ ಅಂತಹ ಹಣವನ್ನು ಯಾವ ರೀತಿ ಖರ್ಚು ಮಾಡುತ್ತಿದ್ದೇವೆಂದು ತೋರಿಸುತ್ತಿಲ್ಲ. ಟ್ರಾಕ್ಟರುಗಳು ಮತ್ತು ಬುಲ್ ಡೋಜರುಗಳಿಂದ ಸುಮಾರು ಇಪ್ಪತ್ತೆರಡು ಲಕ್ಷ ರೂಪಾಯಿಗಳಷ್ಟು ಬರಬೇಕಾಗಿದೆ. ಅದರ ಬಗ್ಗೆ ಸರಕಾರ ಯಾವ ಕಾರ್ಯ ಕ್ರಮವನ್ನೂ ತೆಗೆದುಕೊಂಡಿಲ್ಲ. 1957-58 ರಿಂದಲೂ ಯಾವ ವಿಧವಾದ ಕಾರ್ಯಕ್ರಮವನ್ನೂ ತೆಗೆದು ಕೊಂಡಿಲ್ಲ ಎಂದು ನಮಗೆ ಕೊಟ್ಟಿರುವ ಆಡಿಟ್ ರಿಪೋರ್ಟಿನಲ್ಲಿ ಪದೇ ಪದೇ ಇದನ್ನು ಹೇಳಲಾಗಿದೆ.

ಮೊನ್ನೆತಾನೇ ಹೇಳಿದ ಹಾಗೆ, ಸುಮಾರು 1,17,000 ರೂಪಾಯಿಗಳಷ್ಟು ಬೆಲೆಯ ವರ್ಕ್ ಶಾಪ್ ಮೆಷಿನರಿಯು ರಾಯಚೂರಿನಲ್ಲಿ ಐಡಲ್ ಆಗಿ 1957, 1958-59 ರಿಂದಲ್ಲೂ ಇದ್ದದ್ದೂ ಇಲ್ಲಿಯ ವರೆಗೂ ಹಾಗೇ ಇದೆ ಎಂದು ಆಡಿಟ್ ರಿಪೋರ್ಟಿನಲ್ಲಿಯೂ ಬಂದಿದೆ. ಇದಕ್ಕೆ ಇನ್ನೂ ಯಾವ ಒಂದು ಪ್ಲಾನನ್ನಾಗಲೀ, ಎಸ್ಟಿಮೇಟನ್ನಾಗಲೀ ತಯಾರುಮಾಡಿಲ್ಲ. ಇದು ಬಹು ವಿಷಾದಕರವಾದ ಸಂಗತಿ. ಈ ಒಂದು ಇಲಾಖೆಯಲ್ಲಿ ಅಧಿಕಾರಿಗಳೇನಿದ್ದಾರೆ ಅವರು ಪಾರ್ಟಿ ಮಾಡುತ್ತಿದ್ದಾರೆಂದು ಕೇಳುತ್ತೇನೆ. ಯಾವ ವಿಧವಾದ ಕೆಲಸವನ್ನೂ ಮಾಡುತ್ತಿಲ್ಲ. ಸಾಯಿಲ್ ಕನ್‌ಸರ್‌ವೇಷನ್ನು ಮಾಡುವ ಬಗ್ಗೆ ಈ ಸಭೆಯ ಸದಸ್ಯರು ಎಷ್ಟೋ ಸಲಹೆಗಳನ್ನು ಕೊಟ್ಟಿದ್ದರೂ ಕೂಡ ಅದರ ಬಗ್ಗೆ ಹೆಚ್ಚು ಅನುಕೂಲವಾಗುವಂತಹ ಯಾವ ಕೆಲಸವನ್ನೂ ಮಾಡಲಿಲ್ಲ. ಇದರ ಬಗ್ಗೆ ಸೂಕ್ತವಾದ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಿದ್ದರೆ ನಮಗೆ ಈ ಕೆಲಸ ಸುಲಭವಾಗುತ್ತಿತ್ತು. ಇದರಲ್ಲೂ ಕೂಡ ಹಣ ಉಳಿತಾಯ ಮಾಡಿ ಮಂಜೂರು ಮಾಡಿದ್ದ ಹಣವನ್ನು ಖರ್ಚು ಮಾಡದಿರುವುದು ಇಲಾಖೆಯ ದೂರ ದರ್ಶಿತ್ವ ತೋರಿಸುತ್ತದೆ. ಅಲ್ಲದೆ ಹಣವನ್ನು ಕೂಡ ವಿಚಕ್ಷಣೆಯಿಂದ ಖರ್ಚು ಮಾಡುತ್ತಿಲ್ಲ. ನಮ್ಮ ಫೈನಾನ್ಸ್ ಮಿನಿಸ್ಟರು ಈ ವಿಚಾರದಲ್ಲಿ ಉಸ್ತುವಾರಿ ವಹಿಸಿ ಹೆಚ್ಚು ನಿಗಾ ಕೊಟ್ಟಿಲ್ಲ ಎಂದು ಅವರೇ ಹೇಳುತ್ತಾರೆ.

Non-implementation of schemes relating to cotton cultivation, soil conservation, etc.

ಹೀಗೆ ಸ್ಕೀಮುಗಳೂ ಹಾಗೇ ಉಳಿದಿವೆ.

ರೂರಲ್ ಡೆವಲಪ್‌ಮೆಂಟಿನ ವಿಚಾರವಾಗಿಯೂ ಹೇಳುತ್ತ ವ್ಯವಸಾಯದ ಬಾಕಿಯಲ್ಲಿ ಆ ಇಲಾಖೆಯ ಅಧಿಕಾರಿಗಳು ಹೆಚ್ಚು ನಿಗಾವಹಿಸಿ ಹೆಚ್ಚು ಉಪಯೋಗವಾಗುವಂತೆ ಮಾಡುತ್ತಿಲ್ಲ. ಈ ವಿಷಯವನ್ನೇ ನಾವು ತೆಗೆದುಕೊಂಡರೆ ಈ ವ್ಯವಸಾಯ ಇಲಾಖೆಯ ಮುಖ್ಯ ಅಧಿಕಾರಿಗಳು ಮೂರು ಕಾಸಿನ ಕೆಲಸವನ್ನೂ ಮಾಡುತ್ತಿಲ್ಲ. ಅವರು ಬೇರೆ ಅಧಿಕಾರಿಗಳೊಂದಿಗೆ ಕೂಡಿಕೊಂಡು ರಾಜಕೀಯ ಮಾಡುತ್ತಾರೆ. ಅಲ್ಲಿ ಯಾವ ಅಧಿಕಾರಿಗಳಿದ್ದಾರೆ ಎನ್ನುವುದನ್ನು ನಾನು ಇವೊತ್ತಿನವರೆಗೂ ಅವರ ಮುಖವನ್ನೂ ನೋಡಿಲ್ಲ. ನಾನು ಕೇಳಿರತಕ್ಕದ್ದು ಅವರ ಕೈಕೆಳಗಿರುವ ಅಧಿಕಾರಿಗಳಲ್ಲೇ ಭಿನ್ನ ಭೇದಗಳನ್ನುಂಟು ಮಾಡಿ ಒಬ್ಬ ಅಧಿಕಾರಿಯನ್ನು ಇನ್ನೊಬ್ಬ ಅಧಿಕಾರಿಯ ಮೇಲೆ ಎತ್ತಿಕ್ಕಿ ಅವರ ಪ್ರಮೋಷನ್ನು ಇನ್ನಿತರ ವಿಚಾರಗಳಿಗಾಗಿ ಪ್ರೋತ್ಸಾಹ ಕೊಟ್ಟು ಹೈ ಕೋರ್ಟಿನಲ್ಲಿ ರಿಟ್ಟುಗಳನ್ನು ಫೈಲು ಮಾಡಿಸುತ್ತಿದ್ದಾರೆಂದು ಕೇಳಿದ್ದೇನೆ.

ಈ ಇಲಾಖೆಯಲ್ಲಿ ಯಾವ ವಿಧವಾದಂಥ ಆಸಕ್ತಿಯೂ ಇಲ್ಲ. ಒಂದು ವಿಷಯ ಹೇಳುವುದಾದರೆ 1957-58ರಿಂದ ರಾಯಚೂರು ಜಿಲ್ಲೆಗೆ 1.17 ಲಕ್ಷಕ್ಕೆ ಖರೀದಿಯಾಗಿರುವ ಮೆಶಿನರಿ ಇವತ್ತಿನವರೆಗೆ ಉಪಯೋಗವಿಲ್ಲದೆ ಹಾಗೆಯೇ ಬಿದ್ದಿದೆ. ಹೀಗಾದರೆ ಇದರ ಬಡ್ಡಿ ಎಷ್ಟು ಆಯಿತು ? ಒಂದು ರಿಪೋರ್ಟನ್ನೂ ಇಲಾಖೆಯ ಮುಖ್ಯಾಧಿಕಾರಿ ಸರಕಾರಕ್ಕೆ ಕೊಟ್ಟಿಲ್ಲ. ಇದು ಸರಕಾರದ ಬೇಜವಾಬ್ದಾರಿಯನ್ನೂ ಅಸಾಮರ್ಥ್ಯತೆಯನ್ನೂ ತೋರಿಸುವುದಿಲ್ಲವೆ ? ಬುಲ್‌ಡೋಜರುಗಳು ಮತ್ತು ಟ್ರಾಕ್ಟರುಗಳಲ್ಲಿ 22 ಲಕ್ಷ ರೂಪಾಯಿ ಲಾಸ್ ಮಾಡಿಕೊಂಡಿದ್ದೇವೆಂದು ಹೇಳುವುದು ಬಹಳ ವಿಷಾದದ ಸಂಗತಿ. ಇವತ್ತಿನ ದಿವಸ ನಾವು ಕಷ್ಟ ಪರಿಸ್ಥಿತಿಯಲ್ಲಿದ್ದೇವೆ. ದೇಶದ ಉದ್ಧಾರದ ಬಗ್ಗೆ ತಮಗೆ ಎಷ್ಟು ಕಳಕಳಿ ಇದೆಯೋ ನಮಗೂ ಅಷ್ಟೇ ಕಳಕಳಿ ಇದೆ. ಇವತ್ತಿನ ದಿವಸ ಮಂತ್ರಿಗಳು ಅಧಿಕಾರಿಗಳ ವರ್ತನೆಗೆ ಸೋಲುವುದಾದರೆ, ಅಧಿಕಾರಿಗಳು ರಾಜ್ಯಭಾರ ಮಾಡುವುದಾದರೆ, ಸಾಮಾನ್ಯವಾಗಿ ನಾವು ಹಾಕತಕ್ಕ ಯಾವ ಕಾರ್ಯಕ್ರಮವೂ ಮೂರನೆಯ ಯೋಜನೆಯಲ್ಲಿ ಕಾರ್ಯಗತವಾಗಲಾರದು ಎಂದು ನಾನು ಹೇಳಬಯಸುತ್ತೇನೆ.

2-30 P.M.

ಇನ್ನು ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್ ಬಗ್ಗೆ ಸ್ವಲ್ಪ ಹೇಳಬೇಕು ಎಂದು ಮನಸ್ಸು ಇದೆ. ಇವತ್ತಿನ ದಿವಸ ಡಿಮ್ಯಾಂಡ್ ನಂಬರ್ 44ರಲ್ಲಿ–ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಇಲಾಖೆಗೆ ರೂ. 1,39,10,250 ಕೇಳಿದ್ದೀರಿ. ಅದರಲ್ಲಿ ರೂ. 1,25,00,000 ಗವರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿಯನ್ನು ಬಡಾವಣೆ ಮಾಡುವುದಕ್ಕೆ ಕೇಳುತ್ತಾ ಇದ್ದೀರಿ. ನೀವು ಎಕ್ಸ್‌ಪ್ಯಾನ್‌ಶನ್ನಿಗೆ ಈ ಹಣ ಕೇಳುತ್ತೀರಿ ಎಂದು ನಾನು ಒಪ್ಪಿಕೊಳ್ಳುವುದಾದರೂ, ಈ ಇಲಾಖೆಯಲ್ಲಿ ಎಷ್ಟರಮಟ್ಟಿಗೆ ಕೆಲಸ ಕಾರ್ಯಗಳಾಗಿಲ್ಲವೆನ್ನುವುದನ್ನು ಹೇಳುತ್ತೇನೆ. ನೀವು ಕೊಂಡಂಥ ಮೆಶಿನರಿಗಳು ಇಷ್ಟು ದಿವಸದ ವರೆಗೂ ಉಪಯೋಗವಾಗದೆ ಹಾಗೆಯೇ ಇವೆ. ಪವರ್‌ಲೂಮ್ಸ್ ತೆಗೆದುಕೊಂಡಿದ್ದೀರ; ಸುಮಾರು 2,000 ಲೂಮುಗಳು ಖರೀದಿ ಆಗಿವೆ. ಇವುಗಳಲ್ಲಿ ಸಾಧಾರಣವಾಗಿ ಅರ್ಧಕ್ಕೆ ಕೇಂದ್ರ ಸರಕಾರದಿಂದ ದುಡ್ಡು ಬರುತ್ತದೆ, ನಾವು ಅರ್ಧ ಕೊಡುತ್ತೇವೆ.

> "A further sum of Rs. 125.00 lakhs is required during the current year for expenditure on construction of buildings, purchase of machinery, equipment......"

ಎಂದು ರಿಪೋರ್ಟಿನಲ್ಲಿ ಹೇಳುತ್ತಾರೆ. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ನಾವು ಬರೀ ಖರೀದಿ ಮಾಡತಕ್ಕಂತಾದ್ದು, ಅವನ್ನು ವರ್ಷಾನುಗಟ್ಲೆ ಉಪಯೋಗ ಮಾಡದೆ ಇರತಕ್ಕಂಥಾದ್ದು. ಇದರಿಂದ ಯಾವ ವಿಧವಾದ ಪ್ರಗತಿಯನ್ನೂ ಸಾಧನೆ ಮಾಡಲಿಕ್ಕೆ ಸಾಧ್ಯವಿಲ್ಲ. ಇವತ್ತಿನ ದಿವಸ ಎಲೆಕ್ಟ್ರಿಸಿಟಿ ಸಪ್ಲೈ ಇಲ್ಲದೆ ಮಿಶಿನರಿ ಎರೆಕ್ಷನ್ ಕೂಡ ಆಗಿಲ್ಲ. ಎರಡು ಸಾವಿರ ಲೂಮುಗಳಲ್ಲಿ 1,256 ಲೂಮುಗಳು ಕೆಲಸ ಮಾಡುವುದಿಲ್ಲ ಎಂದು ಹೇಳುವುದಾದರೆ, ಅದರ ಮೇಲೆ ಹಾಕಿದಂಥ ಹಣ ಎಷ್ಟು ಲುಕ್ಸಾನು ಆಯಿತು? ಇಂಡಸ್ಟ್ರಿಯಲ್ ಎಸ್ಟೇಟುಗಳ ಬಗ್ಗೆ ಹೇಳುವುದಾದರೆ, ನಿಮ್ಮ ಟಾರ್ಗೆಟ್ ಏನಿತ್ತೋ ಅದನ್ನು ಮುಟ್ಟಿಲ್ಲ. ಮೂರನೆ ಯೋಜನೆ ಅವಧಿಯೊಳಗೆ 50 ಇಂಡಸ್ಟ್ರಿಯಲ್ ಎಸ್ಟೇಟುಗಳೂ ಆಗುವುದಿಲ್ಲ. ನಮಗೆ ಅವುಗಳಿಂದ ಬರತಕ್ಕಂಥದ್ದು ರೂ. 1 ಲಕ್ಷ ಚಿಲ್ಲರೆ. ನಾವು 4.7 ಲಕ್ಷ ಚಿಲ್ಲರೆ ಬಡ್ಡಿ ಸೆಂಟ್ರಲ್ ಗವರ್ನ್‌ಮೆಂಟಿಗೆ ಕೊಡುತ್ತಾ ಇದ್ದೇವೆ. ಕೆಲವು ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಕಟ್ಟಿ 156 ಶೆಡ್ಡುಗಳನ್ನು ಅಲಾಟ್ ಮಾಡಿದ್ದಾರೆ. ಅವುಗಳಲ್ಲಿ ಬಹುಭಾಗಕ್ಕೆ ಎಲೆಕ್ಟ್ರಿಸಿಟಿ ಸಪ್ಲೈ ಮಾಡಲಿಲ್ಲ. ಎಲೆಕ್ಟ್ರಿಸಿಟಿ ಸಪ್ಲೈ ಮಾಡಿದನಂತರವೆ ಬಡ್ಡಿ ಕೊಡಬೇಕು ಎಂದು ನಿಯಮವಿದೆ ಎಂದು ಹೇಳುತ್ತಾರೆ. ಅಂದರೆ ಎಲೆಕ್ಟ್ರಿಸಿಟಿ ಒದಗಿಸುವವರೆಗೆ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ಲುಕ್ಸಾನು ಆಗುತ್ತದೆ. ನಮಗೆ ಬರತಕ್ಕಂಥ ಬಡ್ಡಿ 1 ಲಕ್ಷ ಚಿಲ್ಲರೆ, ನಾವು ಕೇಂದ್ರ ಸರಕಾರಕ್ಕೆ ಕೊಡತಕ್ಕಂಥ ಬಡ್ಡಿ 4 ಲಕ್ಷ ಚಿಲ್ಲರೆ. ಇಂಥ ವ್ಯವಹಾರ ಮಾಡುವುದಾದರೆ, ಸರಕಾರವೆ ನೋಡದೆ ಬರೀ ಅಧಿಕಾರಿಗಳ ಸೂಪರ್‌ವಿಶನ್ನಿಗೇ ಎಲ್ಲವನ್ನೂ ಬಿಡುವುದಾದರೆ ಸರಕಾರ ದಿವಾಳಿಯಾಗುವುದರಲ್ಲಿ ಏನೂ ಸಂಶಯವಿಲ್ಲ.

ರೂರಲ್ ಡೆವಲಪ್‌ಮೆಂಟಿಗೆ ಈ ಸಾರಿ 11 ಲಕ್ಷ ರೂಪಾಯಿ ಚಿಲ್ಲರೆ ಕೇಳಿದ್ದೀರಿ. ನ್ಯಾಶನಲ್ ರೂರಲ್ ವಾಟರ್ ಸಪ್ಲೈ ಸ್ಕೀಮಿಗೆ 1961-62ರಲ್ಲಿ ಸುಮಾರು 62 ಲಕ್ಷ ರೂಪಾಯಿ ಒದಗಿಸಿತ್ತು. ಅದರಲ್ಲಿ 39.4 ಲಕ್ಷ ಖರ್ಚು ಮಾಡಿದ್ದೀರ, ಅಂದರೆ ಸಾಧಾರಣವಾಗಿ 37 ಲಕ್ಷ ರೂಪಾಯಿ ಉಳಿತಾಯವಾಗಿದೆ. ಹೀಗೆ ಆಯಾ ಕಾಲಕ್ಕೆ ಮಾಡಬೇಕಾದಂಥ ಕಾರ್ಯವನ್ನು ಮಾಡದೆ, ಅದನ್ನು ಮುಂದೂಡಿ, ಹಣವನ್ನು ಉಳಿಸಿದ್ದೀರ.

Non-implementation of water supply schemes due to paucity of contractors. The amount spent is Rs. 39,41,000.

ಒದಗಿಸಿದ ಹಣ ಖರ್ಚು ಮಾಡದೆ ಇರತಕ್ಕಂಥ ಪರಿಸ್ಥಿತಿ ನೀವು ತಂದುಕೊಳ್ಳುವುದಾದರೆ, ಸರಕಾರ ಹಣದ ಬಗ್ಗೆ ನಿಗ ವಹಿಸುತ್ತಾ ಇಲ್ಲ ಅಂತ ಹೇಳಬೇಕೆ ವಿನಃ ಮತ್ತೆ ಇನ್ನು ಬೇರೆ ಮಾತೇ ಇಲ್ಲ.

ನಾನು ಇಷ್ಟು ಮಾತ್ರ ಹೇಳಿ ಮಾನ್ಯ ಅರ್ಥಿಕ ಮಂತ್ರಿಗಳನ್ನು ಕೇಳಿಕೊಳ್ಳುವುದು ಇಷ್ಟೆ. ಫಾರೆಸ್ಟ್ ಇಲಾಖೆಯಲ್ಲೂ ಸೇವಿಂಗ್ಸ್ ಇದೆ. ಕೆಲವು ಸ್ಕೀಮುಗಳು ಆಗಿಲ್ಲ. ಅನಿಮಲ್ ಹಸ್ಬೆಂಡರಿ ಇಲಾಖೆಯಲ್ಲಿಯೂ ಹಾಗೆಯೆ ಇದೆ. ಕಾಲಕಾಲಕ್ಕೆ ಕೆಲಸವನ್ನು ಮಾಡದ ಪಕ್ಷದಲ್ಲಿ, ಆ ಕಾರ್ಯ ಮುಂದೆ ಹೋಗುತ್ತಾ ಇರಲಿಲ್ಲ. ಹೆಚ್ಚು ಹಣದ ಕೊರತೆಯೂ ಆಗುತ್ತಾ ಇರಲಿಲ್ಲ. ನಾವು ಒಂದು ಯೋಜನೆಯನ್ನು ಮಾಡತಕ್ಕಂಥ ಕಾಲದಲ್ಲಿ, ಆ ಯೋಜನೆಯನ್ನು ಕಾರ್ಯಗತ ಮಾಡಲು ಬರೀ ಅಧಿಕಾರಿಗಳಿಗೇ ಬಿಡದೆ, ಮಂತ್ರಿಗಳು ಸ್ವತಃ ಆಸಕ್ತಿಯನ್ನು ವಹಿಸಬೇಕು; ಹೆಚ್ಚು ನಿಗ ವಹಿಸಬೇಕು. ಅದರಲ್ಲಿಯೂ ಆರ್ಥಿಕ ಮಂತ್ರಿಗಳು ಹೆಚ್ಚು ನಿಗ ವಹಿಸಬೇಕು.

(ಶ್ರೀ ಕೆ. ಎಚ್. ರಂಗನಾಥ್)

ವ್ಯವಸಾಯದ ಇಲಾಖೆ ಇನ್ನೂ ಒಂದು ಮಾತು ಹೇಳಬೇಕೆಂದು ಬಯಸುತ್ತೇನೆ. ಕೇಂದ್ರ ಸರಕಾರದ ಮಂತ್ರಿಗಳು ಹೇಳುತ್ತಾರೆ: ಆಹಾರ ಉತ್ಪಾದನೆ ಕೆಲಸ ನನ್ನದಲ್ಲ, ರಾಜ್ಯ ಸರಕಾರದ್ದು ಅಂತ. ರಾಜ್ಯ ಸರಕಾರದಲ್ಲರತಕ್ಕಂಥ ಈ ಹೊಣೆಗಾರಿಕೆಯನ್ನು ಕೇಂದ್ರದ ಮೇಲೆ ಹಾಕುವುದಕ್ಕೆ ಸಾಧ್ಯವಿಲ್ಲ. ಅದನ್ನು ಈ ಸರಕಾರವೇ ನಿರ್ವಹಿಸಬೇಕು. ಲಕ್ಷಾಂತರ ರೂಪಾಯಿ ದುರ್ವಿನಿಯೋಗವಾಗುತ್ತಿದೆ, ಕೊಟ್ಟಿರತಕ್ಕಂಥ ಹಣ ಖರ್ಚಾಗದೆ ಉಳಿಯುತ್ತದೆ. ಹೀಗಾಗದಿರಲು ಸರಕಾರ ಹೆಚ್ಚು ನಿಗ ವಹಿಸತಕ್ಕಂಥ ಅವಶ್ಯಕತೆ ಇದೆ. ವ್ಯವಸಾಯ ಇಲಾಖೆ ದಕ್ಷತೆಯಿಂದ ಯೋಜನೆಗಳನ್ನು ಕಾರ್ಯಗತ ಮಾಡಬೇಕಾದರೆ, ಮಾನ್ಯ ಮಂತ್ರಿಗಳು ಅದಕ್ಕೆ ಏನಾದರೂ ಚಿಕಿತ್ಸೆ ಮಾಡಬೇಕು. ಆ ಇಲಾಖೆಯ ಮುಖ್ಯಾಧಿಕಾರಿಗಳಿಗೆ ಏನಾದರೂ ಚಿಕಿತ್ಸೆ ಮಾಡದೆಹೋದರೆ ಇನ್‌ಎಫಿಶಿಯನ್ಸಿ ಹೀಗೆಯೇ ಮುಂದುವರಿಯುತ್ತದೆ.

This itself is quite sufficient to prove that he is inefficient to hold the post.

† Sri G. V. GOWDA (Palya).—Mr. Speaker, Sir, it would have been better if the Finance Minister had given some explanation as to convince how he is able to justify all the demands that he has placed before this House. He could have given some statistics in view of the additional demand for 3 crores 70 lakhs and 1½ crores in respect outside the revenue account and also public debts, advances and loans. Sir, for 1963-64 it is anticipated that there would be a revenue deficit of Rs. 40 lakhs. From the budget speech of the Finance Minister it could be seen that the closing balance for 1963-64 is Rs. 5.87 crores. So, at the end of 63-64 there would be a closing balance of minus 5.87 crores. If you take into consideration the additional demand that has been placed before us and the additional demands for which this House gave concurrence in March 1963, it would be more than 10 crores. Even if part of this could be met by way of savings and by way of reappropriation, still, there would be a big gap so far as revenue deficit is concerned. I do not know what steps Government propose to take to cover this revenue deficit. If this for investment on capital that is something, because it gives yield. But, unless steps are taken to cover the revenue deficit, I should say that the financial picture of the State is very gloomy, anything but satisfactory.

Sir, I can show how some of these items could have been foreseen even at the time when the annual financial statement is prepared for 1963-64. Most of this amount is due to the increase of D.A. to Government servants from 1st April 1963. The Government has taken the decision to enhance the D.A. even before March 1963. They anticipated that this should be given and there was no difficulty for the Government to add this and include this in the 1963-64 budget itself. This comes to 1½ crores. Knowing this will show larger deficit on the revenue side, this Government has purposely avoided its inclusion in the budget for 1963-64. This would mean that this Government is not willing to show to this House the clear picture of the financial position of the State. Similarly, the triple benefit scheme to the teachers and some extra allowance to be given to them. This was also contemplated and a decision taken even before the budget for 1963-64 was presented. So, we cannot say that those two items are New Service. These items could

not be justified under article 205 of the Constitution because the Government had foreseen these items and so they cannot be brought under the category of New Services. Therefore, I say that the provision of the Constitution does not, on the face of it, give approval for sanction of this expenditure in respect of D.A. and the triple benefit scheme.

Sri S. R. KANTHI (Minister for Education).—Do you not like this to be given to them?

Sri G. V. GOWDA.—No, not that. I welcome if you still further increase their emoluments. But, my point is, as to why it was not included in the regular budget estimate though Government did foresee this expenditure; that is my objection. This finds a place in the budget speech of the Finance Minister.

Sri S. R. KANTHI.—That was an announcement of the policy.

Sri G. V. GOWDA.—Then, Sir, when the budget estimates were presented there were 9 crores outstanding to be paid to the Reserve Bank of India and I do not know how much of that has been paid or borrowed further. Sir, another funny thing is, advances authorised from contingency even before March 1963 is sought to be placed before the House now and the censent of the House is sought for. I do not know how it could be justified now. They have spent this amount before March 1963. In February 1963 they had placed a Supplementary Demand (second instalment) and obtained the concurrence of this House.
Is it justifiable after the expiry of the particular financial year tocome before the Legislature and ask for the approval of the House for the money spent during 1962-63? It could have been easily included in the original budget estimates. This is the first time I am hearing that this House is asked to give such approval.

I will now deal with Demand No. 39, Irrecoverable temporary loans and advances Written off. Government in their Order of 1961 have delegated powers to the officers of the Revenue Department in Gulbarga to write off arrears of taccavi loan during the years 1948-56. This Government Order was issued in 1961. I fail to understand why no provision was made in any of the budget estimates beginning from 1962. Even in 1963-64 budget this has not been included. To come in the middle, in the month of October and say Government had to write off arrears, is to take an untenable position. Item No. 2 relates to Grant-in-aid to District Local Boards on account of Forest Revenue. It is stated that the District Local Boards of North Kanara were entitled to 2 % grant-in-aid based on the gross forest revenue as per a Resolution of the former Bombay Government. The Board seems to have represented that 75% of their area is under forests and that areav is backward in other respects. I am not objecting to the payment of 2% forest revenue, but I cannot understand why a discrimination should be made in favour of North Kanara alone. Why not other districts similarly placed get the same benefit? Now that the Mysore Local Boards Act is uniformly applicable to the entire State, this discrimination should stop. Can this item be permitted as a new service? Where is the povision to pay 2% under the Village Panchayat Act?

(SRI G. V. GOWDA)

It is also said under the same item that pending a decision on the report of the the Committee on Panchayati Raj, Rs. 1.50 lakhs were sanctioned for distribution of grant-in-aid to the Taluk Development Boards in North Kanara district during 1962-63 and that no provision was made in the budget. Apart from the 2% of forest revenue paid, this additional sum of Rs. 1½ lakhs is being paid because it is a backward border area. If that was the intention of Government, it would have been desirable if they had applied the formula to the entire State. In all divisions, there are border areas. I want to ask the Government why this sort of discrimination should be practised between one area and the other. In fact, last year we were told that the Government has constituted a committee or that the Divisional Commissioners have been asked to send proposals for the development of backward border areas. Due consideration should have been given to the recommendations and the grants-in-aid should have been placed at their disposal for development of backward border areas. But the Government exercising power in this manner is arbitrary and does not stand to reason.

Regarding item 4, Government was committed to finance the loss incurred in the Bangalore-Mangalore air service. I am not going into the decision of the Government whether it was good or bad, but my question at this stage is whether having taken a decision and having known the defecit, they could not have brought this item in the additional demands for 1962-63 or included it in the financial statement of 1963-64. Simply because they forgot to include it in the budget estimates, they call it a new service now.

Regarding the electric factory, I know that work is progressing. It should have been completed by this time. The Finance Minister is coming up with this demand without foresight.

Coming back to the investigation circle, I understand the anxiety of Government in creating this body so as to take minor, medium and other irrigation projects and to have special works done. They must be given certain periods within which they have to execute the work. In 1959, two investigation circles or sub divisions were sanctioned to my taluk and one is in existence now. In 1961 one sub-division was closed and the other is there. The period within which they should investigate and present the project report was 31st March 1961. Even by the end of March 1963, they are not able to present the report. I do not know why such sub-divisions should be created.

3-00 P.M.

From 1959 to 1963, they have not been able to give the project report. I do not understand the use of having an Investigation Sub-Division in such a case. We have been anxious to see that at least medium projects are taken up. When you constitute sub-division or Investigation Circles, they must prove worthy of their responsibilities and duties; otherwise the money that is spent would be useless. As I said earlier, 50 per cent of the money asked by way of this additional demand

could be met by reappropriation. There is still a minus deficit left over. I do not know how the Minister has taken measures to cover this revenue deficit. I am reminded about the assurances that he has given that he would take steps to claim more shares of the Central revenue, *i.e.*, our shares due from out of the Government of India's excise and other duties. How far he has been able to achieve this, I do not know. Even assuming that he is able to get something, I feel that it is practically impossible to make the financial position of the State, at least to some extent, good. As I have submitted already, if proper care had been taken, so many of the demands could have been included in the original Budget, which would have left the Hon'ble Finance Minister to justify why there would have been more revenue deficit So far as some of the items are concerned, there is no justification, because it does not fulfil the conditions provided in the Constitution. Such being the case, I fail to understand how we should extend our support to the Supplementary Demands, because it is contrary to the Constitution. Regarding some items, I fail to understand how they can convince the House and how they are able to make the financial position of the State strong and sound. If I could lay my hands on some items, it is apparent how these things could have been thought of. I do not know the intention with which they have been omitted. As I have already submitted, the ways and means position is also not known. Also the Finance Minister's assurances given in the budget speech to cover the revenue deficit to claim more shares of the central revenue have not been carried out.

With these observations, I conclude.

ಶ್ರೀ ಬಿ. ಭಾಸ್ಕರಶೆಟ್ಟಿ (ಕಾಪು).—ಸ್ವಾಮಿ ಅಧ್ಯಕ್ಷರೇ, ಈ ದಿನ ನಮ್ಮ ಮಾನ್ಯ ಘನ ಸರ್ಕಾರದವರು 1963-64ನೇ ಇಸವಿಗೆಅಡೀಷನಲ್ ಡಿಮ್ಯಾಂಡ್ ಆಗಿ 3,70,44,713 ರೂಪಾಯಿಗಳ ಡಿಮ್ಯಾಂಡನ್ನು ತಂದಿದ್ದಾರೆ. ಸ್ವಾಮಿ ಇಷ್ಟು ಮೊತ್ತದ ಹಣವನ್ನು ಜನರು ಇಲ್ಲವೇ ನಾವು ಅವರ ಕೈಗೆ ಕೊಡಬೇಕಾಗಿದ್ದರೆ ಈತನಕ ಅವರಿಗೆ ಕೊಟ್ಟ ಹಣವನ್ನು ಯಾವ ರೀತಿಯಲ್ಲಿ ಉಪಯೋಗ ಮಾಡಿಕೊಂಡಿದ್ದಾರೆ ಅದರ ಪ್ರತಿಫಲ ಏನು ಎಂದು ಹೇಳಿ ನಾವು ಮಾತ್ರವಲ್ಲದೇ ದೇಶದ ಜನತೆಯೂಕೂಡ ಕೂಲಂಕಷವಾಗಿ ವಿಮರ್ಶೆ ಮಾಡಬೇಕಾಗಿದೆ. ಸ್ವಾಮಿ ತಾವು ಈ ತನಕವೂ ಏನನ್ನು ಮಾಡಿದ್ದೀರಿ? ಇಷ್ಟರವರೆಗೂ 11 ಕೋಟಿ 61 ಲಕ್ಷ ರೂಪಾಯಿಗಳನ್ನು ಬಾಕಿ ಇಟ್ಟುಕೊಂಡಿದ್ದೀರಿ. ಬೇರೆ ಬೇರೆ ರೆವಿನ್ಯೂ ಬಾಕಿಗಳು ಇವೆ, ತಮ್ಮ ಹತ್ತಿರ ಯಾರ್‍ಯಾರು ದೊಡ್ಡ ಭೂಮಾಲೀಕರು, ಸೇಲ್ಸ್‌ಟ್ಯಾಕ್ಸ್ ಕೊಡುವವರು, ಇನ್‌ಕಂಟ್ಯಾಕ್ಸ್ ಕೊಡುವವರು ಇದ್ದಾರೆ ಅವರಿಂದ ಯಾವಾಗ ಹಣವನ್ನು ವಸೂಲು ಮಾಡುವುದಕ್ಕೆ ತಮ್ಮಿಂದ ಆಗುವುದಿಲ್ಲವೂ ಆಗ ಇಷ್ಟು ದೊಡ್ಡ ಮೊತ್ತದ ಕೋಟ್ಯಾಂತರ ರೂಪಾಯಿಗಳನ್ನು ಬಡಜನತೆಯ ಮೇಲೆ ಹೇರಿ ಅವರು ಮಾಡುವ ಶ್ರಮದ ಒಂದೊಂದು ರಕ್ತದ ಕಣವೂ ಇದರಲ್ಲಿ ಸೇರಿದೆ ಎಂಬುದನ್ನು ಆಲೋಚನೆ ಮಾಡದೇ ಖರ್ಚು ಮಾಡುತ್ತಾ ಇದ್ದೀರಿ. ಸ್ವಾಮಿ 11 ಕೋಟಿ 61 ಲಕ್ಷ ರೂಪಾಯಿ ಎಷ್ಟು ಸಮಯದಿಂದ ಬಾಕಿ ಇದೆ? ಇದನ್ನು ಏಕೆ ಬಾಕಿ ಇಟ್ಟುಕೊಂಡಿದ್ದೀರಿ? ಈಗಾಗಲೇ ಮಾನ್ಯ ಕೃಷ್ಣಪ್ಪನವರು ಸರ್ಛಾರ್ಜ ಕಂದಾಯವನ್ನು ಬೇರೆ ವಸೂಲು ಮಾಡುತ್ತೇವೆ ಎಂದು ಹೇಳಿದ್ದಾರೆ. ದೇಶದಲ್ಲಿ ಶೇಕಡ 71.2 ಇರತಕ್ಕ ಬಡ ರೈತರ ಮೇಲೆ ಈಗಾಗಲೇ ನೂರಕ್ಕೆ ನೂರರಷ್ಟು ಕಂದಾಯ ಹಾಕಿದ್ದೀರಿ. ಈ ರೀತಿ ಕಂದಾಯವನ್ನು ಹಾಕಿ ಇಂದು ಬಡಜನತೆ ನಿಮ್ಮ ಕಾಂಗ್ರೆಸ್ ರಾಜ್ಯದಲ್ಲಿ ತಲೆಎತ್ತಿ ಬಾಳಬೇಕಾದರೆ ಬಹಳ ಕಷ್ಟವಾಗುತ್ತದೆ. ಅವರು ಅರೆ ಹೊಟ್ಟೆ ಊಟಮಾಡುತ್ತಾ ಇದ್ದಾರೆ. ಈಗಾಗಲೇ ನನ್ನ ಮಾನ್ಯ ಮಿತ್ರರಾದ ಶ್ರೀಮಾನ್ ವೆಂಕಟೇಗೌಡರು ಹೇಳಿದ ಹಾಗೆ ಗುಲ್ಬರ್ಗಾದಲ್ಲಿ ತಕಾವಿ ಸಾಲ 1948 ರಿಂದ 1950ರ ವರೆಗೂ ಬಾಕಿ ಇದೆ, 4ಲಕ್ಷದ 3ಸಾವಿರದ 972 ರೂಪಾಯಿ 61 ನಯೇ ಪೈಸೆ. ಅದನ್ನು ರೈಟ್ ಆಫ್ ಮಾಡುತ್ತೀರಿ? ಯಾರ ದುಡ್ಡನ್ನು ರೈಟ್ ಆಫ್ ಮಾಡುತ್ತೀರಿ ಅಂತ? ಅದು ಯಾವ ಕಾಂಗ್ರೆಸ್ ಲೀಡರ್‌ನ ಜೋಬಿಗೆ ಹೋಗಿದೆ?

ಶ್ರೀ ಬಿ. ಡಿ. ಜತ್ತಿ (ಹಣಕಾಸಿನ ಶಾಖೆಯ ಮಂತ್ರಿಗಳು). —ಜೋಬಿಗೆ ಹೋದರೆ ರೈಟ್ ಆಫ್ ಮಾಡುತ್ತಾರೆಯೇ?

ಶ್ರೀ ಬಿ. ಭಾಸ್ಕರ ಶೆಟ್ಟಿ.—ಜೋಬಿಗೆ ಹೋದಮೇಲೆಯೇ ಮಾಡುವುದು ಸ್ವಾಮಿ? ಏನು ಸ್ವಾಮಿ ಇದು ಅನ್ಯಾಯ! ಅದು ಇರಲಿ, ಈಗಾಗಲೇ ಬರುಬರುತ್ತಾ ಹಣ ಬಹಳ ಅನ್ಯಾಯವಾಗಿ ಖರ್ಚಾಗುತ್ತಾ ಇರುವುದನ್ನು ನಾವು ನೋಡಬಹುದು.

ಇನ್ನು ನಮ್ಮ ವಿದ್ಯಾಮಂತ್ರಿಗಳ ಖಾತೆಗೆ ಬರುತ್ತೇನೆ. ಈ ವಿದ್ಯಾ ಮಂತ್ರಿಗಳ ಖಾತೆ ಏನಾಗಿದೆ? ಡಿಮ್ಯಾಂಡ್ 17 ರಲ್ಲಿ 24 ಲಕ್ಷ ರೂಪಾಯಿ ತಾವು ಕೇಳಿದ್ದೀರಿ. ಸ್ವಾಮಿ ನಾನಾದರೂ ಹೇಳುತ್ತೇನೆ, ಈ ವಿದ್ಯಾ ಇಲಾಖೆಯಲ್ಲಿ ನಮ್ಮ ನಾಗರತ್ನಮ್ಮನವರು ಹೇಳಿದ ಹಾಗೆ ಏನೋ ಒಂದು ತರಹದ ಮ್ಯಾಜಿಕ್ ನಡೆಯುತ್ತಿದೆ. ಒಂದು ವಿಷಯವನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ, ಇಷ್ಟು ದುಡ್ಡು ಕೊಡಬೇಕಾದರೆ ಈ ದುಡ್ಡು ಸಮರ್ಪಕವಾಗಿ ಖರ್ಚಾಗುತ್ತದೆಯೋ ಎಂಬುದನ್ನು ಪರಿಶೀಲನೆ ಮಾಡಬೇಕು? ಏಕೆಂದರೆ ನಮ್ಮ ಜಿಲ್ಲೆಯಲ್ಲಿ ಕದಿಯೂರು ಎಂಬ ಕಡೆ ಒಂದು ಶಾಲೆ ಇದೆ. 1956ನೇ ಇಸವಿಯಲ್ಲಿ ಅಲ್ಲಿದ್ದ ಒಬ್ಬ ಮುಖ್ಯ ಉಪಾಧ್ಯಾಯರನ್ನು ಅಲ್ಲಿಂದ ಡಿ ಇ ಓ ಆರ್ಡ್ಡರ್ ಪ್ರಕಾರ ತೆಗೆಸಿದರು. ಅವರಿಗೆ ರಿಟೈರಾಗುವುದು ಇನ್ನು ಒಂದು ವರ್ಷ ಇತ್ತು. ಈ ಕಥೆ ಮಾನ್ಯ ಮಂತ್ರಿಗಳಿಗೂ ಗೊತ್ತಿರಬಹುದು.

ಶ್ರೀ ಬಿ. ಡಿ. ಜತ್ತಿ.—ಆ ಕಥೆ ನಮಗೂ ಗೊತ್ತಿದೆ. ಆದರೆ ನೀವು ಎಜುಕೇಷನ್ ಮೇಲೆ ಮಾತನಾಡುವಾಗ ಈಗ ನೀವು ಹೇಳುತ್ತಿರುವ ವಿಚಾರ ಇಲ್ಲಿ ಕೊಟ್ಟಿರತಕ್ಕ ಐಟಂ ನಂ (17) ರಲ್ಲಿ ಬರುವುದಿಲ್ಲ. ಆದುದರಿಂದ ತಾವು ಮಾತನಾಡುವಾಗ ಯಾವ ಐಟಂ ಮೇಲೆ ಮಾತನಾಡುತ್ತಿದ್ದೀರಿ ಎಂಬುದನ್ನು ಸ್ವಲ್ಪ ತಿಳಿಸಿದರೆ ನಮಗೂ ಅನುಕೂಲ ಎಂದು ಹೇಳುತ್ತೇನೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈಗ ಹಣ ಯಾವ ಯಾವ ಬಾಬಿನಲ್ಲಿ ಖರ್ಚಾಗುತ್ತಿದೆಯೋ ನಾನು ಹೇಳುತ್ತಿರುವುದು ಆ ಎಲ್ಲ ಬಾಬುಗಳಿಗೂ ಸೇರಿರುತ್ತದೆ ಎಂದು ತಿಳಿಸಲಿಚ್ಛಿಸುತ್ತೇನೆ. ಈಗ ಈ ವಿದ್ಯಾ ಇಲಾಖೆಯಲ್ಲಿ ಏನೇನಾಗಿದೆ ಎಂಬುದನ್ನು ನಾನು ತಿಳಿಸುತ್ತಿದ್ದೇನೆ. ಇದರಲ್ಲಿ ಒಬ್ಬ ಹೆಡ್ಮಾಸ್ಟರ ಸಂಬಳವನ್ನು ಕೊಡುವುದಕ್ಕಾಗಿ ನಮ್ಮ ವಿದ್ಯಾ ಇಲಾಖೆಯನ್ನು ವಹಿಸಿಕೊಂಡಿರತಕ್ಕ ಮಂತ್ರಿಗಳು, ಈ ಒಬ್ಬ ಉಪಾಧ್ಯಾಯರನ್ನು ಉಳಿಸುವುದಕ್ಕಾಗಿ, 5 ಸಾವಿರ ರೂಪಾಯಿಗಳಿಗಾಗಿ 17 ಜನ ಉಪಾಧ್ಯಾಯರನ್ನು ಕೆಲಸದಿಂದ ತೆಗೆದು ಹಾಕಿದ್ದಾರೆ. ಇದು ಕಾನೂನಿಗೆ ಬಹಳ ವಿರೋಧವಾದ ಕೆಲಸ, ಇದು ಈಗ ಕೋರ್ಟಿನ ಮುಂದೆ ಹೋಗಿದೆ. ಹೀಗೆ ಸ್ವಜನ ಪಕ್ಷಪಾತ ನಮ್ಮ ಸರ್ಕಾರದಲ್ಲಿ ನಡೆಯುತ್ತಿದೆ. ಹೀಗೇ ಇದು ಮುಂದುವರಿದಲ್ಲಿ ಇನ್ನು ಇದು ಯಾವ ಮಟ್ಟಕ್ಕೆ ಹೋಗಿ ನಿಲ್ಲುತ್ತದೋ ಅದು ನನಗೆ ಬಹಳ ಭಯವಾಗುತ್ತಿದೆ. ಇನ್ನು ನಮ್ಮಲ್ಲಿ ಈ ವಿದ್ಯೆಕ್ಕೆ ಹಣ ಹೆಚ್ಚು ಹೆಚ್ಚು ವೆಚ್ಚವಾದಂತೆಲ್ಲ ನಮ್ಮ ವಿದ್ಯಾಮಟ್ಟ ಕೆಳಗಿಳಿಯುತ್ತಿದೆ. ಈಗ ಸರ್ಕಾರದವರು ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರುತ್ತೇವೆಂದು ಹೇಳುತ್ತಿದ್ದಾರೆ. ಕೆಲವು ಕಡೆ ಇದನ್ನು ತರಲಾಗಿದೆ ಎಂದು ಈಗಾಗಲೆ ಸರ್ಕಾರದವರು ತಮ್ಮ ಬೆನ್ನನ್ನು ತಟ್ಟಿಕೊಳ್ಳುತ್ತಿದ್ದಾರೆ. ಈಗ ಒಂದೊಂದು ತರಗತಿಯಲ್ಲೂ 40 ಮಕ್ಕಳು ದಾಖಲಾಗಿರಬೇಕೆಂದೂ, ಅದರಲ್ಲಿ 30 ಹಾಜರಿ ಇರಬೇಕೆಂದೂ ಹೇಳಿದ್ದಾರೆ. ಈಗ ನನ್ನ ಮಗನೇ ಶಾಲೆಗೆ ಹೋಗುತ್ತಿದ್ದಾನೆ. ಅವನಿಗೆ ಈಗ 10 ವರ್ಷ ಪ್ರಾಯ. ಆರನೆಯ ಕ್ಲಾಸಿನಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ. ಆದರೆ ಅವನಿಗೆ (ವ) ಬರಿ ಎಂದರೆ ಮೇಲಿನಿಂದ ಕೆಳಕ್ಕೆ ಬರೆಯುತ್ತಾನೆ. ಗಂಗೆಯನ್ನು ಭಗೀರಥನು ಮೇಲಿನಿಂದ ಕೆಳಕ್ಕೆ ತಂದ ಹಾಗೆ ನಮ್ಮ ವಿದ್ಯಾ ಮಟ್ಟ ಕೆಳಗಿನಿಂದ ಮೇಲಕ್ಕೇರದೆ ಮೇಲಿನಿಂದ ಕೆಳಗಿಳಿಯುತ್ತಿದೆ.

ಸ್ವಾಮಿ ಇನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲಸಮಾಡುತ್ತಿರುವ ಜಿಲ್ಲಾ ಬೋರ್ಡು ಉಪಾಧ್ಯಾಯರುಗಳಿಗೆ ತಿಂಗಳಿಗೆ ಸರಿಯಾಗಿ ಎಂದೂ ಅವರಿಗೆ ಸಂಬಳ ಸಿಗಲಿಕ್ಕಿಲ್ಲ. ಅಲ್ಲಿಂದ ಬೆಂಗಳೂರಿಗೆ ಯಾರಾದರೂ ಒಂದು ಡೆಲಿಗೇಷನ್ ಬಂದರೇನೆ ಅವರಿಗೆ ಸಂಬಳ; ಇಲ್ಲದಿದ್ದರೆ ಇಲ್ಲ. ಹೀಗಾಗಿದೆ ಅವರ ಪರಿಸ್ಥಿತಿ. ಈಗ ಯಾರೋ ಒಬ್ಬರು ನನಗೆ ಒಂದು ಕಾಗದವನ್ನು ಬರೆದಿದ್ದಾರೆ. ಅದರಲ್ಲಿ ಯಾರ ಹೆಸರನ್ನೂ ಹಾಕಿಲ್ಲ. ಈ ಉಪಾಧ್ಯಾಯರುಗಳ ಕುಂದುಕೊರತೆಯನ್ನು ನಿವಾರಣೆ ಮಾಡದೆ ಅವರು ಈ ಜನ್ಮದಲ್ಲಿ ಮಡಿದರೆ ಮುಂದೆ ಅವರು ಈ ವಿದ್ಯಾರ್ಥಿಗಳಿಗೆ ಶತೃಗಳಾಗಿ ಹುಟ್ಟುತ್ತಾರೆ ಎಂದು ಅವರು ತಿಳಿಸಿದ್ದಾರೆ. ನಮ್ಮ ರಾಜ್ಯದಲ್ಲಿ ಈ ವಿದ್ಯಾಮಟ್ಟ ಹೀಗಿದೆ. ಸರ್ಕಾರದವರು 1961ರಲ್ಲಿ ಜಾರಿಗೆ ಕೊಟ್ಟ ಹೊಸ ಸ್ಕೇಲುಗಳಿನ್ನೂ ಆ ಉಪಾಧ್ಯಾಯರುಗಳಿಗೆ ಸಿಕ್ಕಿಲ್ಲ. ಅವರಿಗೆ ಇತ್ತೀಚಿಗೆ ಹೆಚ್ಚುವರಿಯಾದ ಡಿ. ಎ. ಸಹಾ ಸಿಕ್ಕಿರುವುದಿಲ್ಲ.

ಶ್ರೀ ಬಿ. ಡಿ. ಜತ್ತಿ.—ಇದು ಸರ್ಕಾರದವರ ತಪ್ಪಿಲ್ಲ. ಅವರು ಈ ಹೊಸ ಸ್ಕೇಲುಗಳಿಗೆ ಆಪ್ಟ್ ಮಾಡಿಕೊಳ್ಳದ ವಿನಾ ಇದು ಅವರಿಗೆ ಸಿಕ್ಕುವುದಿಲ್ಲ. ಅದರಿಂದ ಡಿಲೇ ಆಗಿದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸ್ವಾಮಿ ಇನ್ನು ಈ ಸಹಕಾರ ಸಂಸ್ಥೆಗಳ ವಿಚಾರಕ್ಕೆ ಬಂದರೆ 1961—62 ರಲ್ಲಿ 14.14ಲಕ್ಷ ರೂಪಾಯಿಗಳನ್ನು ಈ ಸಹಕಾರ ಸಂಸ್ಥೆಗಳಿಗೆ ಒದಗಿಸಿದ್ದುದರಲ್ಲಿ 1,05,953 ರೂಪಾಯಿಗಳನ್ನು ಬಳಸಿ ಬಾಕಿ ಹಣವೆಲ್ಲ ಲ್ಯಾಪ್ಸಾಗಿದೆ. ಮಾರ್ಚಿ ಆಖೈರಿನಲ್ಲಿ 3 ಲಕ್ಷ 64 ಸಾವಿರ ಚಿಲ್ಲರೆ ಔಟ್‌ಸ್ಟಾಂಡಿಂಗ್ ಬ್ಯಾಲೆನ್ಸ್ ನಿಂತಿದೆ. ಒಟ್ಟಿನಲ್ಲಿ ಹೇಳುವುದಾದರೆ ಈ ಸಹಕಾರ ಸಂಸ್ಥೆಗಳು ಕಾಂಗ್ರೆಸ್ಸಿನವರ ವ್ಯಾಪಾರ ಸಂಸ್ಥೆಗಳಾಗಿ ಪರಿವರ್ತನೆಯಾಗಿರುವಂತೆ ಕಂಡು ಬರುತ್ತಿದೆ.

ಶ್ರೀ ಬಿ. ಡಿ. ಜತ್ತಿ.—ಅದಕ್ಕೆ ನೀವು ಮೆಂಬರಾಗಿಬಿಡಿ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಆ ದಿವಾಳಿ ತೆಗೆಯುತಕ್ಕ ಸಂಸ್ಥೆಗಳಿಗೆ ನಾವೇಕೆ ಮೆಂಬರಾಗೋಣ ! ನನ್ನ ಗ್ರಾಮದಲ್ಲಿಯೂ ಒಂದು ಸಹಕಾರ ಸಂಸ್ಥೆ ಇದೆ. ಅದು ಪ್ರಾರಂಭವಾದಂದಿನಿಂದ ಈವರೆಗೆ ಕೇವಲ ಮೂರು ಜನರಿಗೆ ಮಾತ್ರ ಸಾಲ ದೊರತಿದೆ. ಆ ಮೂರು ಜನಗಳು ಯಾರೆಂದರೆ—ಆ ಸೊಸೈಟಿಯ ಪ್ರೆಸಿಡೆಂಟರು, ಆತನ ತಾಯಿ ಮತ್ತು ಆ ಪ್ರೆಸಿಡೆಂಟರ ಮನೆಯಲ್ಲಿರತಕ್ಕ ಕೆಲಸದವನು ಈ ಮೂವರಿಗೆ ಸಾಲ ಸಿಕ್ಕಿದೆ. ಆ ಸೊಸೈಟಿ ಆ ಮೂರು ಜನರನ್ನು ಬಿಟ್ಟರೆ ಬೇರೆ ಇನ್ನಾರಿಗೂ ಅದು ಪ್ರಯೋಜನವಿಲ್ಲ.

ಆ ಸೊಸೈಟಿಗೆ ಇನ್ನೂ ಒಂದು ಸದುಪಯೋಗವನ್ನು ಉಂಟುಮಾಡಿಕೊಟ್ಟಿದ್ದಾರೆ. ಅದೇನೆಂದರೆ ಕಂಟ್ರೋಲ್ ಕಮೂಡಿಟಿಯಾಗಿರತಕ್ಕ ಸಕ್ಕರೆ ಮಾರಾಟವನ್ನು ಆ ಸೊಸೈಟಿಗೇ ಕೊಟ್ಟಿದ್ದಾರೆ. ಅವರು ಆ ಸಕ್ಕರೆಯನ್ನೂ ಕೂಡ ಬ್ಲಾಕ್‌ಮಾರ್ಕೆಟ್ಟಿನಲ್ಲಿ ಮಾರಾಟ ಮಾಡುತ್ತಿದ್ದಾರೆ. ಇಂಥ ಪರಿಸ್ಥಿತಿ ಈ ಸಹಕಾರ ಸಂಘಗಗಳಲ್ಲಿ ಒದಗಿದೆ.

ಇನ್ನು ಬ್ಲಾಕ್ ಡೆವಲಪ್‌ಮೆಂಟಿನ ವಿಚಾರಕ್ಕೆ ಬಂದರೆ—ಈ ಬಾಬಿನಲ್ಲಿ ಬಾವಿಗಳಿಗೆ ಕೊಡತಕ್ಕ ಹಣ ಬಾವಿಗೇ ಹೋಗುತ್ತದೆ ಎಂದು ಜನ ಹೇಳುತ್ತಿದ್ದಾರೆ. ಅಂದರೆ ಈ ಹಣ ಸದುಪಯೋಗ ಆಗುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಇದನ್ನೂ ಸಹಾ ಬಹಳ ಜಾಗರೂಕತೆಯಿಂದ ನೋಡಿಕೊಳ್ಳಬೇಕೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಮಾನ್ಯ ಅಧ್ಯಕ್ಷರೇ, 1963-64ನೇ ಸಾಲಿಗಾಗಿ ನಾವು ಸರಕಾರಕ್ಕೆ ಹಣ ಕೊಟ್ಟಮೇಲೆ ಆ ಹಣ ನಿಮಗೆ 1964ನೇ ಮಾರ್ಚಿ 31ನೇ ತಾರೀಖಿನವರೆಗೆ ಸಾಕಾಗುವುದಿಲ್ಲ ಅದಕ್ಕಾಗಿ ಇಲ್ಲಿ ಸಪ್ಲಿಮೆಂಟರಿ ಗ್ರ್ಯಾಂಟುಗಳನ್ನು ಇಟ್ಟು ನಮಗೆ ದುಡ್ಡು ಕೊಡಿ ಎಂದು ಇಲ್ಲಿ ಈ ಉಪ ಬೇಡಿಕೆಗಳನ್ನು ಇಟ್ಟಿದ್ದಾರೆ. ಹಣವಿಲ್ಲದೇ ಇರುವಾಗ ನಾವು ಎಲ್ಲಿಂದ ಹಣ ಕೊಡುವುದು ? ನನಗಾದರೂ ಅನಿಸುವುದು ಇವರ ಹತ್ತಿರ ಹಣವಿದೆಯೇ ? ಇವರ ಟ್ರೆಜರಿಯಲ್ಲಿ ಅಥವಾ ಖಜಾನೆಯಲ್ಲಿ ಇಟ್ಟಿದ್ದ ಸೆಕ್ಯೂರಿಟಿಗಳೇನಾದರೂ ಉಳಿದಿವೆಯೇ ಎಂದರೆ ಅದೂ ಕೂಡ ಇಲ್ಲ, ಇದ್ದ ಸೆಕ್ಯೂರಿಟಿಗಳನ್ನೂ ಸಾಲಕ್ಕಾಗಿ ಕೊಡಬೇಕು. ಹೀಗೆ ಮಾಡಿಬಿಟ್ಟು ಈಗಾಗಲೇ ರಿಸರ್ವ್ ಬ್ಯಾಂಕಿನಿಂದ ಒಂಬತ್ತು ಕೋಟಿ ರೂಪಾಯಿಗಳಷ್ಟು ಹಣವನ್ನು ಓವರ್ ಡ್ರಾ ಮಾಡಿದ್ದಾರೆ, ಈ ರೀತಿ ಇರುವಾಗ ಈಗ ಕೊಡುವ ಹಣ ಯಾವುದು ಎನ್ನುವುದನ್ನು ಸ್ವಲ್ಪ ನಮ್ಮ ಅರ್ಥಿಕ ಮಂತ್ರಿಗಳು ಉತ್ತರ ಹೇಳಿದ ಮೇಲೆ ನೀವು ಕೇಳತಕ್ಕ ಬೆಡಿಕೆಗಳಿಗೆ ನಾವು ಇಲ್ಲಿ ಒಪ್ಪಿಗೆ ಕೊಡಬಹುದು. ಸರ್ಕಾರ ದಿವಾಳಿಯಾಗಿರುವಾಗ ಸರ್ಕಾರದ ಹತ್ತಿರ ಹಣವೆಲ್ಲಿಂದ ಬರಬೇಕು ? ಓವರ್ ಡ್ರಾಫ್ಟ್ ಮಾಡಿ ರಿಸರ್ವ್ ಬ್ಯಾಂಕು ಸೆಕ್ಯೂರಿಟಿಗಳೇನಿದ್ದುವು ಅದರ ಮೇಲೆ ಹಣ ತೆಗೆದುಕೊಂಡು ಬಂದು ಖರ್ಚು ಮಾಡಿಬಿಟ್ಟಿದ್ದಾರೆ. ಯಾವ ಮುಖದಲ್ಲಿ ಬಂದು ಇಲ್ಲಿಗೆ ಹಣ ಕೊಡಿ ಎಂದು ಕೇಳಿ ಆ ಹಣವನ್ನು ಖರ್ಚು ಮಾಡಬೇಕೆಂದಿದ್ದಾರೆ ? ಇಲ್ಲಿ ದೊಡ್ಡದಾದ ಒಂದು ಪಟ್ಟಿ ಕೊಟ್ಟು ಇಂತಿಂತಹ ಕೆಲಸಗಳಿಗಾಗಿ ಖರ್ಚುಮಾಡಲು ಹಣ ಬೇಕಾಗಿದೆ ಎಂದು ಇಲ್ಲಿ ಬೇಡಿಕೆಗಳನ್ನು ಇಟ್ಟು ನಮಗೆ ಡಿ. ಎ. ಕೊಡುವುದಕ್ಕೋಸ್ಕರ ಹಣ ಬೇಕು, ಅದಕ್ಕಾಗಿ ಈ ಬೇಡಿಕೆಗಳನ್ನು ತರಲಾಗಿದೆ ಎನ್ನುತ್ತಾರೆ. ರಿಸರ್ವ್ ಬ್ಯಾಂಕಿನಲ್ಲಿ ಹಣ ಇದ್ದರೆ ಅದನ್ನು ತೆಗೆದುಕೊಳ್ಳಬೇಕು ಎಂದು ಕೇಳಿದ್ದರೆ ಅದು ನ್ಯಾಯವಾಗಿದೆ. ಅದನ್ನು ತೆಗೆದುಕೊಂಡು ಡಿ. ಎ. ಗಾಗಿ ಕೊಡಬೇಕು ಎನ್ನುವುದು ನ್ಯಾಯವಾಗುತ್ತದೆ. ಸ್ವಾಮಿ, ಇವೊತ್ತು ಸರಕಾರ ದಿವಾಳಿಯಾಗಿ ಅದರ ಹತ್ತಿರ ಹಣವೇ ಇಲ್ಲ. ನೀವು ಹೋಗತಕ್ಕ ದಾರಿ ಸರಿಯಾಗಿಲ್ಲ, ಹಣ ಕಾಸಿನ ಪರಿಸ್ಥಿತಿ ಶೋಚನೀಯವಾಗಿದೆ, ಖರ್ಚು ಮಾಡಬೇಡಿ ಎಂದು, ಶರಾವತಿಯ ದುಡ್ಡು, ಖಾದೀ ಬೋರ್ಡಿನ ದುಡ್ಡು, ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಹಣ ದುರುಪಯೋಗವಾಗುತ್ತಿದೆ, ಹೀಗೆ ನಾನಾ ವಿಧವಾಗಿ ಖರ್ಚಾಗುತ್ತಿದೆ ಎಂದು ಹೇಳಿದರೂ ಸರ್ಕಾರ ಆ ಕಡೆ ನೋಡಲಿಲ್ಲ. ಸದಸ್ಯರೆಲ್ಲಾ ಹೇಳಿದರು ಇಲ್ಲಿ ಮಾತನಾಡಿದ ಭಾಷಣದಲ್ಲಿ ತಿರುಳಿಲ್ಲದ ವಿಷಯಗಳನ್ನು ಮಾತನಾಡಿದ್ದಾರೆ, ಅದಕ್ಕೋಸ್ಕರ ನೀವು 129 ಜನ ನಿಂತುಕೊಂಡು ನಾವು 47 ಜನ ಎಂದು ಇಲ್ಲಿ ಎಣಿಸಿಕೊಂಡೆವು. ಸರ್ಕಾರ ನಡೆಸತಕ್ಕ, ಆಡಳಿತ ವಹಿಸಿಕೊಂಡಿರುವ ಹಣಕಾಸಿನ ಮಂತ್ರಿಗಳಿಗೆ ಹಣ ಎಲ್ಲಿದೆ ಎನ್ನುವುದನ್ನು ಯಾರಾದರೂ ಒಬ್ಬ ಸದಸ್ಯರು ಹೇಳಿಕೊಟ್ಟಿದ್ದಾರೆಯೇ ? ಹಣಕಾಸಿನ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಮಂತ್ರಿಗಳು ಆ ಹಣವನ್ನು ತೆಗೆದುಕೊಂಡು ಖರ್ಚು ಮಾಡಿ ಎಂದು ಯಾರೂ ಇಲ್ಲಿ ಹೇಳಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ದಿವಾಳಿಯಾಗಿಲ್ಲವೇ? ಹೀಗೆ ಆಡಳಿತ ನಡೆಸುತ್ತಿರುವ ನಮ್ಮ ಸರ್ಕಾರ ಯಾವ ಮುಖ ಇಟ್ಟುಕೊಂಡು ನಮ್ಮ ಮುಂದೆ ಬಂದು ದುಡ್ಡು ಕೊಡಿ ಎಂದು ಕೇಳಿದರೆ ಹಣ ಎಲ್ಲಿದೆ? ಯಾರ ಜೋಬಿನಿಂದ ತೆಗೆದುಕೊಡುತ್ತಾರೆ? ಕೆನರಾ ಬ್ಯಾಂಕಿನಲ್ಲಿದೆಯೇ? ಕ್ಯಾನರಾ ಸಿಂಡಿಕೇಟು ಬ್ಯಾಂಕಿನಲ್ಲಿದೆಯೇ? ಅಲ್ಲಿಂದ ಸಾಲವನ್ನು 37 ಲಕ್ಷ ಎಂದು ತಂದರೆ ಅದಕ್ಕೆ 27 ಲಕ್ಷದಷ್ಟು ಬಡ್ಡಿಯಾಗಿ ಕೊಡುತ್ತೀರಿ. ಹೀಗೆ ಯಾವ ಬ್ಯಾಂಕಿನಲ್ಲೂ ಹಣವೇ ಇಲ್ಲ. ಎಂದು ನಾವು ಇಲ್ಲಿ ಹೇಳಿದರೆ ಇಲ್ಲ ತಿರುಳಿಲ್ಲದಂತೆ ವಾದ ಮಾಡುತ್ತಾರೆ. ನೀವು 139 ಜನರೇ ಆಗಲ ಸರ್ಕಾರದ ಹಣಕಾಸಿನ ಸ್ಥಿತಿ ಭದ್ರವಾಗಿರುತ್ತದೆ ಎಂದು ಹೇಳುತ್ತೀರಾ? ನಾವು ನಿಮ್ಮನ್ನು ಸರ್ಕಾರದಿಂದ ಕೆಳಗಿಳಿಸಬೇಕು ಎಂದು ಇಲ್ಲಿ ಹೇಳಲಿಲ್ಲ; ಎಲ್ಲಿ ದುಡ್ಡು ಹಾಳಾಗಿ ಹೋಗುತ್ತಿದೆ, ಎಲ್ಲಿ ಅನ್ಯಾಯಗಳು ನಡೆದಿವೆ ಅಂತಹ ದಾರಿಯಲ್ಲಿ ಹೋಗಬಾರದು ಎಂದು ಹೇಳುವುದಕ್ಕಾಗಿ ನಾವು ಹೇಳಿದೆವು. ಮಾನ್ಯ ಸದಸ್ಯರುಗಳಿಗೆ ಇಲ್ಲ ಮುಂದಾಗ್ರ ವ್ಯವಹಾರಗಳಾಗಬಾರದು ಎಂದು ಹೇಳುತ್ತಿದ್ದೇವೆ. ಇದರೊಳಗೆ ಏನು ಕೊಟ್ಟಿದ್ದಾರೆ ಎನ್ನುವುದನ್ನು ನೋಡಿದರೆ ನನಗಾದರೂ ನಾಚಿಕೆಯಾಗುತ್ತದೆ. ಈ ಹಿಂದೆ ಜತ್ತಿಯವರ ಮಂತ್ರಿ ಮಂಡಲವಿದ್ದಾಗ ಅವರ ಮೇಲೆ 29 ಚಾರ್ಜುಗಳನ್ನು ಹೊರಿಸಿ ಅದರೊಳಗೂ ಶರಾವತಿಯ ವಿಚಾರವನ್ನೂ ಹೇಳಿ ಆಗಿನ ಮಂತ್ರಿಮಂಡಲವನ್ನು ಇಳಿಸಬೇಕೆಂದು ಮಾಡಿದವರು. ಅಪೋಸಿಷನ್ನಿನವರಲ್ಲ ಎನ್ನುವುದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಮೂರೂವರೆ ವರ್ಷಗಳ ತನಕ ಶ್ರೀಮಾನ್ ಜತ್ತಿಯವರನ್ನು ಕೆಳಕ್ಕೆ ಇಳಿಸಬೇಕು ಎಂದು ಹೇಳಿದ ನಿಮ್ಮ ಅಂದಿನ ವಾದಗಳಲ್ಲಿ ತಿರುಳಿತ್ತೇನು? ಕಾಂಗ್ರೆಸ್ಸು ಟಿಕೆಟ್ಟನ್ನು ಪಡೆದಿರುವವರ ಕೆಳಗೆ ಅವರು ಬಂದು ಇಂದು ನಿಮ್ಮ ಪಕ್ಷದೊಳಗೆ ಇದ್ದುಕೊಂಡು 'ಎಸ್ ಮಾಸ್ತರ್' ಗಳಾಗಿದ್ದಾರೆ. ಇವೊತ್ತಿನ ದಿವಸ ನಮ್ಮ ಹಣಕಾಸಿನ ಮಂತ್ರಿಗಳಾದ ಶ್ರೀಮಾನ್ ಜತ್ತಿಯವರು ಕೈಯನ್ನು ಭದ್ರ ಮಾಡುವುದಕ್ಕೆ ಏನಾದರೂ ನೋಡಿಕೊಂಡು ಬಂದು ಹೇಳಿದ್ದರೆ ಆಗ ನೀವು ಕೇಳಿದಷ್ಟು ಹಣವನ್ನು ನಾವು ಕೊಡಬಹುದು ಎಂದರೆ ಅದಕ್ಕೆ ಹಣ ಎಲ್ಲಿದೆ? ತಾವು ವ್ಯವಹಾರ ಮಾಡುವಾಗ, ಬೇಡಿಕೆಗಳನ್ನು ಇಡುವಾಗ ಇವನ್ನೆಲ್ಲಾ ವಿವೇಚಿಸಿ ಇಡಬೇಡವೇ? ಈ ರೀತಿ ಮಾಡುವುದು ನ್ಯಾಯವಲ್ಲ.

ನಮ್ಮ ಹಣಕಾಸಿನ ಮಂತ್ರಿಗಳು ಇಲ್ಲಿಟ್ಟಿರುವ ಬೇಡಿಕೆಗಳನ್ನು ನೋಡಿದರೆ ಅದು ಲಗಾಧಸೆಟ್ಟಿ ಲೆಕ್ಕದಂತೆ ಕೋಟಿ ಕೋಟಿಗಟ್ಟಲೆ ಹಣ ಬೇಕೆಂದು ಕೇಳಿದರೆ ಹಣವನ್ನು ಎಲ್ಲಿ ಇಟ್ಟುಕೊಂಡಿದ್ದಾರೆ. ಬೇರೆ ರಾಜ್ಯದಲ್ಲಿರುವಂತೆ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿಯೂ ಭದ್ರವಾಗಿದೆ ಎಂದು ಹೇಳುತ್ತೀರಾ? ಇವೊತ್ತಿನ ದಿವಸ ಸರ್ಕಾರವೇ ದಿವಾಳಿಯಾಗಿರುವಾಗ ರಿಸರ್ವ್‌ಬ್ಯಾಂಕಿನಲ್ಲಿಟ್ಟಿರುವ ಸೆಕ್ಯೂರಿಟಿಗಳನ್ನು ಅಡವಿಟ್ಟು ನಮ್ಮ ಹಣಕಾಸಿನ ಪರಿಸ್ಥಿತಿ ಭದ್ರವಾಗಿದೆಯೇ, ಸಡಿಲವಾಗಿದೆಯೇ ಎಂದು ಸರ್ಕಾರವನ್ನು ನಾನು ಕೇಳುತ್ತೇನೆ. ಇವೊತ್ತು ಖಾದಿ ಬೋರ್ಡ್, ಎಲೆಕ್ಟ್ರಿಸಿಟಿ ಬೋರ್ಡು, ಶರಾವತಿ ಬೋರ್ಡುಗಳಂತೆ ಇನ್ನೊಂದು ಮುಂಧ್ರಾ ಕಂಪನಿಗೆ ಸರ್ಕಾರದವರು ಸಹಾಯ ಮಾಡುತ್ತಿದ್ದಾರೆ. ಮೈಸೂರು ಸ್ಟೇಟು ಸೆಂಟ್ರಲ್ ವುಲನ್ ಕೋ-ಆಪರೇಟೀವ್ ಸೊಸೈಟಿಗಾಗಿ ಖಾದಿ ಕಮಿಷನ್ನಿನವರು ಮತ್ತು ನಮ್ಮ ಮೈಸೂರು ಸರ್ಕಾರದವರು ಕೊಡುತ್ತಿರುವ ಹಣ ನೀರಾಗಿ ಹರಿದು ಹೋಗುತ್ತಿದೆ. ಅಲ್ಲಿ ಅದನ್ನು ಯಾರೂ ಹೇಳುವವರೂ ಇಲ್ಲ, ಕೇಳುವವರೂ ಇಲ್ಲ. ಅಲ್ಲಿ ಯಾವ ಲೆಕ್ಕವೂ ಇಲ್ಲ, ಆಡಿಟ್ಟು ಮೊದಲೇ ಇಲ್ಲ. ಯಾರೋ ಒಬ್ಬರು ಕಾಂಗ್ರೆಸ್ಸಿನವರು ಈ ಎಲ್ಲಾ ವ್ಯವಹಾರವನ್ನೂ ಮಾಡುತ್ತಿದ್ದಾರೆ. ಅವರು ಮಾಡತಕ್ಕ ವ್ಯವಹಾರಗಳಿಗೆ ಯಾವ ಲೆಕ್ಕ ಪತ್ರಗಳೂ ಇಲ್ಲ ಎಂದು ಕೇಳುತ್ತೇವೆ. ಅಲ್ಲದೆ ಇವರ ಮೇಲೆ ಸರಿಯಾದ ಕಂಟ್ರೋಲು ಹಾಕುವುದಕ್ಕೂ ನಿಮಗೆ ಶಕ್ತಿಯಿಲ್ಲ. ಆಲ್ ಇಂಡಿಯಾ ವುಲನ್ ಕೋ-ಆಪರೇಟೀವ್ ಸೊಸೈಟಿ ಕೇಂದ್ರ ಸರ್ಕಾರದ್ದು. ಅವರ ಮೂಲಕ ಇಲ್ಲಿರುವ ಸೆಂಟ್ರಲ್ ವುಲನ್ ಕೋ-ಆಪರೇಟಿವ್ ಸೊಸೈಟಿಗೆ ಲಕ್ಷಾಂತರ ರೂಪಾಯಿಗಳಷ್ಟು ಹಣವನ್ನು ವರ್ಗಾಯಿಸಿ ಅವರು ಮನಸ್ಸಿಗೆ ಬಂದಂತೆ ವ್ಯವಹಾರ ಮಾಡುತ್ತಿದ್ದಾರೆ. ಇದರ ಬಗ್ಗೆ ಯಾರಾದರೂ ಪರಿಶೀಲಿಸಿದ್ದೀರಾ? ಇವೊತ್ತು ಒಂದೊಂದು ಡಿಸ್ಟ್ರಿಕ್ಟಿನಲ್ಲಿಯೂ ಸೆಂಟ್ರಲ್ ಅಪೆಕ್ಸ್ ಬ್ಯಾಂಕುಗಳಿಗಾಗಿ ಎಂದು ರೂ. 30,000, ರೂ. 40,000 ಮತ್ತು ರೂ. 50,000 ಎಂದು ಹೀಗೆ ಕೊಡುತ್ತಿರುವುದಕ್ಕೆ ಆಡಿಟ್ಟು ರಿಪೋರ್ಟು, ಸದಸ್ಯರುಗಳಿಗೆ ಸಿಕ್ಕಿಲ್ಲ, ಅಲ್ಲದೆ ಜನರಲ್ ಬಾಡಿ ಮೀಟಿಂಗು ಕೂಡ ಮಾಡಿಲ್ಲ ಎನ್ನುವುದನ್ನು ಮಾನ್ಯ ಅರ್ಥಮಂತ್ರಿಗಳು ಅರ್ಥ ಮಾಡಿಕೊಂಡು ಇಂತಹ ಕಂಪನಿಗಳಿಗೆ ಮತ್ತು ಈ ರೀತಿ ವ್ಯವಹಾರ ಮಾಡುತ್ತಿರುವ ಜನಗಳಿಗೆ ರಕ್ಷಣೆ ಕೊಟ್ಟು, ಲಕ್ಷಾಂತರ ರೂಪಾಯಿಗಳಷ್ಟು ದುರುಪಯೋಗವಾಗುತ್ತಿರುವಾಗ ನಮ್ಮ ಮುಂದೆ ಇಟ್ಟಿರುವ ಈ ಬೇಡಿಕೆಗಳಿಗೆ ಒಪ್ಪಿಗೆ ಕೊಡಬೇಕೆಂದು ಕೇಳಿದರೆ ಹೇಗೆ ಕೊಡುವುದು? ಕೇಂದ್ರ ಸರ್ಕಾರದವರು ಸಹಾಯವಾಗಿ ಕೊಡುವ ಹಣ, ಖಾದಿ ಕಮಿಷ

ನ್ನಿನವರು ಕೊಡುವ ಹಣ, ಹಾಗೂ ಮೈಸೂರು ಸರ್ಕಾರ ಕೊಡುವ ಹಣ ಇವೆಲ್ಲ ಅಲ್ಲಿರುವ ಒಬ್ಬರೇ ಒಬ್ಬ ವ್ಯಕ್ತಿಗಳಿಂದಾಗಿ ದುರುಪಯೋಗವಾಗುತ್ತಿದರೂ ಅದನ್ನು ಯಾರೂ ಗಮನಿಸುತ್ತಿಲ್ಲ. ಇಷ್ಟು ದುಡ್ಡು ನಷ್ಟವಾಗುತ್ತಿರುವಾಗ ತಾವು ಯಾರಾದರೂ ಹೋಗಿ ನಮ್ಮ ಅರ್ಥಮಂತ್ರಿಗಳಿಗೆ ಸಹಾಯ ಮಾಡಲು ಅದನ್ನು ತಿಳಿದುಕೊಂಡು ಬಂದು ಹೇಳಿದ್ದರೆ ನಾವೂ ಈ ಬೇಡಿಕೆಗಳಿಗೆ ಅಸ್ತು ಎನ್ನಬಹುದಾಗಿತ್ತು. ಈ ತರಹ ದಿವಾಳಿ ಎದ್ದು ದುರುಪಯೋಗವಾಗುತ್ತಿದ್ದರೂ ಇವರನ್ನು ಯಾರೂ ಕೇಳಲು ಯಾವ ನೀತಿ ನಿಯಮಗಳಿಲ್ಲವೇ? ಇವೊತ್ತಿನ ದಿವಸ ಹಣಕಾಸಿನ ಪರಿಸ್ಥಿತಿ ಇಷ್ಟು ಕಠಿಣವಾಗುತ್ತಿರುವಾಗ, ಇಷ್ಟು ಭಯಂಕರವಾಗಿರುವಾಗ ಇಂತಹ ಮುಂಥ್ರ ಕಂಪನಿಗಳಿಗೇಕೆ ಸಹಾಯ ಮಾಡುತ್ತೀರಿ? ಇದು ನ್ಯಾಯವೇ? ನಿಮ್ಮ ಕೈಯ್ಯಲ್ಲಿ ನಾಳೆ ನಾವು ದುಡ್ಡು ಕೊಟ್ಟರೆ ಅದನ್ನು ಸರಿಯಾಗಿ ವಿನಿಯೋಗಿಸುತ್ತೇವೆ ಎಂದು ಉತ್ತರ ಹೇಳುವುದಕ್ಕಾಗುತ್ತದೆಯೇ? ಹಣಕಾಸಿನ ಪರಿಸ್ಥಿತಿ ಏನಾಗಿದೆ ಎನ್ನುವುದನ್ನು ದೇಶದ ಹಿತದೃಷ್ಟಿಯಿಂದ ತಾವು ನೋಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

3-30 P.M.

ನಿನ್ನೆ ಮಾತನಾಡುತ್ತಾ ಮಾನ್ಯ ಮುಖ್ಯ ಮಂತ್ರಿಗಳು, ಎಲೆಕ್ಟ್ರಿಸಿಟಿ ಬೋರ್ಡಿನ ಹಣದ ವಿಷಯದ ಬಗ್ಗೆ ಮಾತನಾಡುತ್ತಾ, ಹಣವನ್ನು ಮೊದಲೇ ತೆಗೆದಿಟ್ಟುಕೊಳ್ಳಬೇಕಾಗುತ್ತದೆ, ತಕ್ಷಣ ಬೇಕು ಎಂದರೆ ಬ್ಯಾಂಕುಗಳಿಂದ ಹಣ ಸಿಗುವುದಿಲ್ಲ, ಹಾಗೆ ಬೇಕಾದಾಗ ಕೇಳುವುದು ಬಿಸಿನೆಸ್ ಲೈನ್ ಡೀಲಿಂಗ್ ಅಲ್ಲ, ಅಂತ ಅಪ್ಪಣೆ ಕೊಡಿಸಿದರು. ಅವರಿಗೆ ಹಣ ಬೇಕು. ಆದರೆ ಅವರು ಎಲ್ಲೆಲ್ಲಿ ತಪ್ಪು ಹಾದಿ ಹಿಡಿದಿದ್ದಾರೆ, ಎಲ್ಲ ಹಣ ಮಾಯವಾಗಿದೆ ಎಂದು ಸರಕಾರವನ್ನು ಕೇಳಬೇಕಾಗಿದೆ. ಅವರು ಸಾರ್ವಜನಿಕರಲ್ಲಿ ಸಾಲ ಮಾಡಿದ್ದಾರೆ, ಸರಕಾರದಲ್ಲಿ ಸಾಲ ಮಾಡುತ್ತಾರೆ. ಇಷ್ಟು ಹಣವನ್ನು ಏನು ಮಾಡುತ್ತಾರೆಂದು ಕೇಳಿದಾಗ, ಡೀಸೆಲ್ ಸೆಟ್ಟುಗಳಿಗೆ ಬೇಕು, ಶರಾವತಿ ಎಲೆಕ್ಟ್ರಿಸಿಟಿ ಹಂಚುವ ವ್ಯವಸ್ಥೆಗೆ ಹಣ ಬೇಕಾಗಿದೆಯೆಂದು ಹೇಳಿದರು. ವರ್ತಕರ ವಂಶದಲ್ಲಿ ಹುಟ್ಟಿರುವ ಶ್ರೀಮಾನ್ ಜತ್ತಿಯವರನ್ನು ಕೇಳುತ್ತೇನೆ: ಇದು ಹಣಕಾಸಿನ ವಿಷಯದಲ್ಲಿ ತಕ್ಕಡಿ ಹಿಡಿಯುವ ಬುದ್ಧಿವಂತಿಕೆಯೇ ಎಂದು. ಇಷ್ಟು ಹಣಕ್ಕೆ ಎಷ್ಟು ಬಡ್ಡಿ ಕೊಡಬೇಕೆಂದು ಯೋಚಿಸಿದ್ದೀರ? ಅವರಾದರೂ ಯೋಚನೆ ಮಾಡಬೇಡವೇ? ಅವರು ಒಳ್ಳೆಯ ವ್ಯಾಪಾರಸ್ತರು ಅಂತ ತಿಳಿದುಕೊಂಡಿದ್ದೆ.

ಶ್ರೀ ಬಿ. ಡಿ. ಜತ್ತಿ.—ಚಿಲ್ಲರೆ ವ್ಯಾಪಾರಸ್ತರು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹೀಗೆ ಚಿಲ್ಲರೆ ಜನರಿಗೆ ಅಧಿಕಾರ ಕೊಟ್ಟು ಹೀಗಾಗಿದೆ ಇದು ಬಹಳ ಪ್ರಾಮುಖ್ಯವಾದ ವಿಚಾರ. ಅದಕ್ಕೋಸ್ಕರವಾಗಿ ಎಲೆಕ್ಟ್ರಿಸಿಟಿ ಬೋರ್ಡಿಗೆ ತಾವು ಏನು ಹೆಚ್ಚುವರಿ ಬೇಡಿಕೆಯಲ್ಲಿ ಹಣ ಬೇಡಿದ್ದೀರೋ ಅದಕ್ಕೆ ತೀವ್ರ ವಿರೋಧವಿದೆ.

ಜನರಲ್ ಅಡ್ಮಿನಿಸ್ಟ್ರೇಟ್ ಹೆಡ್ಡಿನಲ್ಲಿ 1 ಲಕ್ಷ ಚಿಲ್ಲರೆ ರೂಪಾಯಿಯನ್ನು ನಾಲ್ಕು ಕಾರುಗಳನ್ನು ಗೆಸ್ಟ್‌ಗಳಿಗೋಸ್ಕರ ಕೊಂಡುಕೊಳ್ಳಲು ಕೇಳಿದ್ದಾರೆ. ಕಾಂರಾಜ್ ಪ್ಲಾನನ್ನು ಇಂಪ್ಲಿಮೆಂಟ್ ಮಾಡಿದರೆ ಕಾರುಗಳನ್ನು ಹೆಚ್ಚಿಗೆ ಕೊಂಡುಕೊಳ್ಳಬೇಕಾಗುತ್ತದೆಯೇ? ಅಥವ ಮಿನಿಸ್ಟ್ರಿಯನ್ನು ದೊಡ್ಡದು ಮಾಡುವುದಕ್ಕೆ ಹೋಗುತ್ತೀರ? ಹೊಸ ಕಾರುಗಳನ್ನು ಕೊಂಡುಕೊಳ್ಳಬೇಕಾದ ಅವಶ್ಯಕತೆ ಏನು? ಇದಕ್ಕೆ ಹಣ ಕೇಳುವುದು ಸರಿಯಾಗಿ ಕಾಣುವುದಿಲ್ಲ. ಈ ಐಟಮಿನ ಕೈಯನ್ನು ಆರ್ಥಿಕ ಮಂತ್ರಿಗಳು ಬಿಟ್ಟುಬಿಡುವುದು ಒಳ್ಳೆಯದು.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್ (ಮೈಸೂರು ಸಿಟಿ).—ಇವನ್ನು ಸೆಂಟ್ರಲ್ ಅಸಿಸ್ಟೆನ್ಸಿನಿಂದ ಕೇಳುವುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಯಾವ ಅಸಿಸ್ಟೆನ್ಸೂ ಇಲ್ಲ. ನಮ್ಮ ಕಣ್ಣಿಗೆ ಮಣ್ಣು ಎರಚಿ, ನಮ್ಮಿಂದ ಅಸ್ತು ಅನ್ನಿಸಿಕೊಳ್ಳುವುದಕ್ಕೆ ಹಾಗೆ ಹೇಳುತ್ತಾರೆ. ಹೊಸದಾಗಿ ಕಾರುಗಳನ್ನು ಕೊಂಡುಕೊಳ್ಳುವ ಪ್ರಮೇಯವೇನಿತ್ತು. ಇದು ನಿಮಗೆ ನ್ಯಾಯವೇ? ಒಂದು ಸ್ಕೂಲು ಕೊಡಿ, ಆಸ್ಪತ್ರೆ ಕೊಡಿ, ಔಷಧಿ ಒದಗಿಸಿ ಎಂದರೆ ದುಡ್ಡು ಇಲ್ಲ ಅನ್ನುತ್ತೀರ. ಕಾರುಗಳನ್ನು ಕೊಂಡುಕೊಳ್ಳುವುದಕ್ಕೆ ನಿಮ್ಮ ಹತ್ತಿರ ದುಡ್ಡು ಇದೆ. ಕಾಂರಾಜ್ ಪ್ಲಾನನ್ನು ಇಂಪ್ಲಿಮೆಂಟ್ ಮಾಡಿದರೆ 10-15 ಕಾರುಗಳು ಅಧಿಕವಾಗುತ್ತವೆ. ಇಂತಹುದರಲ್ಲಿ ಹೊಸದಾಗಿ ಕಾರುಗಳನ್ನು ಕೊಂಡುಕೊಳ್ಳುವುದರಲ್ಲಿ ವಿವೇಚನೆ ಇದೆಯೇ? ಇಂಥ ಎಕ್ಸ್‌ಪೆಂಡಿಚರ್ ಒಪ್ಪುವುದಕ್ಕೆ ನಾನು ತಯಾರಿಲ್ಲ.

Mr. SPEAKER.—I am sorry, the Hon'ble Member has taken 20 minutes.

Sri C. J. MUCKANNAPPA.—Demand No. 54-page 87-item No. 5:—

"Sanction was accorded in G. O. No. PHS 24 PIH 61, dated 13th March 1963 for the payment of subsidy of Rs. 20,04,069 and a loan of Rs. 22,84,175 to the private employees through the Mysore Housing Board towards the implementation of the Subsidised Industrial Housing Scheme..."

ಸ್ವಾಮಿ ಬಜೆಟ್ ಮಾಡುವಾಗ ಇದು ಗೊತ್ತಾಗಲಿಲ್ಲವೆಂದು ಹೇಳುತ್ತೀರಲ್ಲ. ಇದು ಹೇಗೆ ಸಾಧ್ಯ? ಆಯವ್ಯಯ ಪಟ್ಟಿಯಲ್ಲಿಯೇ ಸೇರಿಸಲು ಅವಕಾಶವಿರುವ ಬಾಬುಗಳನ್ನು ಸಪ್ಲಿಮೆಂಟರಿ ಬೇಡಿಕೆಗಳಲ್ಲಿ ಸೇರಿಸಿ ವರ್ಷದ ಕೊನೆಯಲ್ಲಿ ತಂದು ಈ ಸಭೆಯ ಒಪ್ಪಿಗೆಯನ್ನು ಕೇಳುತ್ತೀರಲ್ಲ, ಇದು ಯಾವ ನ್ಯಾಯವೋ ನನಗಂತೂ ಗೊತ್ತಾಗುವುದಿಲ್ಲ.

ದಿವಾಳಿ ಎದ್ದಿರತಕ್ಕ ಸರ್ಕಾರಕ್ಕೆ, ಒಂದೂ ಕಾಸೂ ಅವರ ಲೆಕ್ಕದಲ್ಲಿಲ್ಲದೆ ಇರತಕ್ಕ ಸರ್ಕಾರಕ್ಕೆ, ಸಪ್ಲಿಮೆಂಟರಿ ಬೇಡಿಕೆಗಳಲ್ಲಿ ಏನು ಕೇಳುತ್ತಾರೆಯೋ ಅದಕ್ಕೂ ಸಹ ಹಣವಿದೆಯೋ ಇಲ್ಲವೋ ಗೊತ್ತಿಲ್ಲ. ಒಟ್ಟಿನಲ್ಲಿ ದೇಶ ಇವತ್ತು ಹಣಕಾಸಿನ ಪರಿಸ್ಥಿತಿಯಲ್ಲಿ ಸುಭದ್ರವಾಗಿಲ್ಲ; ದೇಶ ಎಂದೋ ಹೋಗಿಬಿಡುತ್ತದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಸ್ವಾಮಿ, Supplementary Demands; first instalment ನಮ್ಮ ಮುಂದೆ ಇಟ್ಟಿದ್ದಾರೆ. ಈ ವರ್ಷ ಮುಗಿಯುವ ಹೊತ್ತಿಗೆ ಇಂಥ instalments ಎಷ್ಟು ಬರುತ್ತವೆಯೋ ಗೊತ್ತಿಲ್ಲ. ಇಂಥ instalments ಆಗಿಂದಾಗ್ಗೆ ತಂದು ಚಿಲ್ಲರೆ ಚಿಲ್ಲರೆಯಾಗಿ ಅಂಗೀಕಾರ ಪಡೆಯುವುದಕ್ಕೆ ಬದಲಾಗಿ ವರ್ಷದ ಕೊನೆಯಲ್ಲಿ ಒಂದೇ ಸಲ ಹಣವೆಲ್ಲ ಖರ್ಚಾದ ಮೇಲೆ ನಾಮಕಾವಾಸ್ತೆ ಇಲ್ಲಿ ತಂದು ಸೀಲ್ ಹಾಕಿಸಿಕೊಳ್ಳಬಹುದು ಎಂದು ಹೇಳುತ್ತೇನೆ. ಒಂದು ದಿವಸಕ್ಕೆ ಈ ಸಭೆಗೆ ಹತ್ತು ಸಾವಿರ ರೂಪಾಯಿ ಖರ್ಚಾಗುತ್ತದೆ. ತಮ್ಮ ಕಡೆ ಬಹುಮತವಿದೆ ಎಂದು ಜನಗಳ ದುಡ್ಡನ್ನು ಲಕ್ಷಗಟ್ಟಲೆ ಖರ್ಚು ಮಾಡಿ ಆಮೇಲೆ ಇಂಥ ಬೇಡಿಕೆಗಳನ್ನು ತರುತ್ತೀರಿ. ಹೀಗೆ ಮಾಡುವುದಕ್ಕೆ ಬದಲಾಗಿ ಒಂದೇ ಸಲ ವರ್ಷದ ಕೊನೆಯಲ್ಲಿ ತಂದು ಬಹುಮತವಿರುವುದರಿಂದ ಅದಕ್ಕೆ ಒಪ್ಪಿಗೆಯನ್ನು ಪಡೆದರೆ ದೇಶದ ದುಡ್ಡಾದರೂ ಉಳಿಯುತ್ತದೆ, ಈ ಅರಣ್ಯರೋದನ ತಪ್ಪುತ್ತದೆಂದು ಸಲಹೆ ಕೊಡುತ್ತೇನೆ.

Supplementary Demands, first instalment ಆಗಿರುವುದರಿಂದ ಇದೆಲ್ಲ provisional ಎಂದು ಭಾವಿಸಿಕೊಳ್ಳುತ್ತೇನೆ. ಅನ್ಯಾಯದ ಖರ್ಚು ಬೇಕಾದಷ್ಟಿದೆ. ಖರ್ಚು ಮಾಡಿರುವುದನ್ನು discretionary expenditure ಎಂದು ನಾನು ಹೇಳುತ್ತೇನೆ. ಯಾವ ಮಂತ್ರಿಗಳಿರುತ್ತಾರೆಯೋ ಅವರಿಗೆ ಮನಸ್ಸಿಗೆ ಬಂದಂತೆ, to their whims and fancies ಖರ್ಚು ಮಾಡಿ ಅದನ್ನೆಲ್ಲಾ ಲೆಕ್ಕದಲ್ಲಿ ತೋರಿಸುತ್ತಾರೆ. ನಾವು ಇದನ್ನು ಒಪ್ಪಲೇ ಬೇಕು ಎನ್ನುವುದಿಲ್ಲ. ಅವರ ಕಡೆ ಹೇಗೂ 139 ಜನ ಇದ್ದಾರೆ. ಅವರಿಂದ ಒಪ್ಪಿಗೆ ದೊರೆಯುತ್ತದೆ, concurrence ದೊರೆಯುತ್ತದೆ ಎನ್ನುವ ಧೈರ್ಯ ಅವರಿಗಿದೆ. "ಸತ್ಯಮೇವ ಜಯತೇ" ಎಂದು ಬೋರ್ಡ್ ಹಾಕಿದ್ದಾರೆ. ಏನು ಅನ್ಯಾಯ ಮಾಡಿದರೂ ಕೊನೆಗೆ ಜಯಿಸುವುದು ಸತ್ಯವೇ.

9. Land Revenueನಲ್ಲಿ 20 ಲಕ್ಷ ರೂಪಾಯಿಗಳನ್ನು Village Officersಗಾಗಿ ತೋರಿಸಿದ್ದಾರೆ. Accountant-*cum*-Panchayat Secretaries ಎಂದು ಮಾಡಿದ್ದಾರೆ. Hereditary Village Offices Abolition Act ಎಂದು ಕಾನೂನು ಮಾಡಲಾಗಿದೆ. ಆದಷ್ಟು ಬೇಗನೆ ಗ್ರಾಮಾಧಿಕಾರಿಗಳನ್ನು ಕಳಿಸಬೇಕಾದ್ದು ತಮ್ಮ ಕರ್ತವ್ಯ. ಒಂದು ವೇಳೆ ಹೈ ಕೋರ್ಟ್ ನವರು ಅವರ ಮುಂದಿರುವ ಅರ್ಜಿಗಳನ್ನು ಬೇಗ ಇತ್ಯರ್ಥ ಮಾಡುವಂತೆ ಒತ್ತಾಯ ಮಾಡಬೇಕು. ಮೂರು ಸಾವಿರ ಜನರಿಗೆ ಟ್ರೈನಿಂಗ್ ಕೊಟ್ಟಿದ್ದೀರಿ. ಶ್ಯಾನುಭೋಗ ಪಟೇಲರುಗಳು ಇನ್ನೂ ಕೆಲಸ ಮಾಡುತ್ತಿದ್ದಾರೆ. ಅವರ ಜೊತೆಗೆ ತರಬೇತಿ ಪಡೆದವರನ್ನು ಪಂಚಾಯಿತಿ ಸೆಕ್ರೆಟರಿಗಳಾಗಿ ನೇಮಿಸಿ ಅವರು ಕೆಲಸ ಮಾಡುತ್ತಿದ್ದಾರೆ. ಆದರೆ ಎಷ್ಟೋಜನ ಪಂಚಾಯಿತಿ ಸೆಕ್ರೆಟರಿಗಳು ಕೆಲಸವಿಲ್ಲದೆ Village Officer ಹತ್ತಿರ, ತಹಸೀಲ್ದಾರರ ಹತ್ತಿರ institutional training ತೆಗೆದುಕೊಂಡು ಹಳ್ಳಿಗಳಲ್ಲಿ ಸೇರಿ ಕೀಟಲೆ ಹಚ್ಚುತ್ತಿದ್ದಾರೆ. ಹೀಗೆಯೇ ಬಿಟ್ಟರೆ ಹಳ್ಳಿಗಳು ಹಾಳಾಗುವ ಸಂಭವವಿದೆ. ಇದಲ್ಲದೆ ಈಗ ಶ್ಯಾನುಭೋಗ ಪಟೇಲರಿಗೆ ಒಂದುಕಡೆ, ಪಂಚಾಯಿತಿ ಸೆಕ್ರೆಟರಿಗಳಿಗೆ ಒಂದು ಕಡೆ ಹಣ ಖರ್ಚಾಗುತ್ತಿರುವುದರಿಂದ duplicate payment ಆಗುತ್ತದೆ. ಆದುದರಿಂದ ಸರ್ಕಾರದವರು ಆದಷ್ಟು ಬೇಗನೆ ಹೈ ಕೋರ್ಟಿನ ಸಂಗಡ negotiate ಮಾಡಿ ಈ ಗ್ರಾಮಾಧಿಕಾರಿಗಳನ್ನು ಆದಷ್ಟು ಬೇಗ ಮನೆಗೆ ಕಳಿಸಿ ಅವರ ಸ್ಥಾನಗಳಿಗೆ ತರಬೇತಿ ಹೊಂದಿದವರನ್ನು ನೇಮಿಸುವುದಕ್ಕೆ ಏರ್ಪಾಡು ಮಾಡಬೇಕು.

Mr. SPEAKER.—Negotation is not......

Sri H. R. KESHAVA MURTHY.—It is a request to hasten the matter.

Mr. SPEAKER.—Not negotiation.

ಶ್ರೀ ಎಚ್. ಆರ್. ಕೇಶವಮೂರ್ತಿ.—ರೈಲ್ವೆಗಳ ವಿಷಯದಲ್ಲಿ ಕೆಲವು ಹೊಸ ಮಾರ್ಗಗಳನ್ನು ಹಾಕಬೇಕೆಂದು ಗ್ರಾಂಟ್ ಕೇಳಿದ್ದಾರೆ, ಎಷ್ಟೋ ವರ್ಷಗಳಿಂದ ಹಾಸನ-ಮಂಗಳೂರು ರೈಲ್ವೆ ಮಾರ್ಗ ಆಗಬೇಕೆಂದು ಕೇಳುತ್ತಿದ್ದರೂ ಇನ್ನೂ ಆಗಿಲ್ಲ. ಆದರೆ ಇದಕ್ಕೆ ಪ್ರಯಾರಿಟಿ ಕೊಡದೆ ಬೇರೆ ಕಡೆ ತಮ್ಮ ಮನಸ್ಸಿಗೆ ಬಂದ ಹಾಗೆ ವರ್ತನೆ ಮಾಡುತ್ತಿದ್ದಾರೆ, ಇದು ಧರ್ಮವಲ್ಲ. ಹಾಸನ-ಮಂಗಳೂರು ರೈಲ್ವೆ ಬಹಳ ಮುಖ್ಯವಾದುದು. ಇದನ್ನು ಮಾಡುತ್ತೇವೆಂದು ನಮಗೆ ಕಣ್ಣೊರ ಸುತ್ತ ಅವರಿಗೆ ಬೇಕಾದ ಹಾಗೆ ಬಾಕಿ ಕಡೆ ರೈಲ್ವೆ ಮಾರ್ಗಗಳನ್ನು ಹಾಕಿಸಿಕೊಳ್ಳುತ್ತಿದ್ದಾರೆ.

Mr. SPEAKER.—This is a Central subject. He should come to the point.

Sri H. R. KESHAVA MURTHY.—The State Government, has to recommend to the Central Government, Because they have shown expenditure here. I am entitled to speak. I am not far away from the subject. ಹಾಸನ-ಮಂಗಳೂರು ರೈಲ್ವೆ ವಿಚಾರದಲ್ಲಿ ಮಲತಾಯಿ ಧೋರಣೆಯನ್ನು ತಾಳಬಾರದು. ದೇಶದಲ್ಲಿ ಎಲ್ಲರೂ ಒಂದೇ ಎನ್ನುವ ಭಾವನೆ ಇರಬೇಕು. All are same in the eyes of God. All the subjects are same, all the areas are same ಎನ್ನುವ ದೃಷ್ಟಿಯಿರ ಬೇಕು. ಆದುದರಿಂದ ಹಾಸನ-ಮಂಗಳೂರು ರೈಲು ಮಾರ್ಗಕೆ ಆದ್ಯತೆ ಕೊಟ್ಟು ಆದಷ್ಟು ಆಗು ವಂತೆ ಪ್ರಯತ್ನ ಮಾಡಬೇಕೆಂದು ನಾನು ಅರ್ಥಸಚಿವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

Polytechnics for Women ಮತ್ತು Technical High Schools ಎಂದು ನಮ್ಮ ದೇಶದೊಳಗೆ ಒಂದೆರಡು ಕಡೆ ಮಾಡಿದ್ದಾರೆ. ಇವನ್ನು ಕೂಡ ತಮಗೆ ಇಷ್ಟಬಂದ ಕಡೆ ಮಾಡಿದ್ದಾರೆ. ತಮ್ಮಕಡೆ ಬಹುಮತವಿದೆಯೆಂದು ಹೀಗೆ ಮಾಡಬಾರದು. ನಾವು ದೇವರಿಗೆ ಮತ್ತು ಸತ್ಯಕ್ಕೆ ಹೆದರಬೇಕು. ಯಾವ ಆಧಾರದ ಮೇಲೆ ಎರಡುಕಡೆ ಈ ವಿದ್ಯಾಶಾಲೆಗಳನ್ನು ತೆರೆದಿರುತ್ತಾರೆಂಬುದು ನನಗೆ ಗೊತ್ತಾಗಿಲ್ಲ. ಇವುಗಳನ್ನು ಡಿಸ್ಟ್ರಿಕ್ಟ್‌ಗಳಲ್ಲಿ ಅಥವಾ divisional headquartersನಲ್ಲಿ ಪ್ರಾರಂಭ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ವ್ಯವಸಾಯದ ಬಾಬಿನಲ್ಲಿ fertiliser ಎಂದು ಹಾಕಿದ್ದಾರೆ. State Co-operative Marketing Society ಮತ್ತು Co-operative Societies ಮುಖಾಂತರ ಇದನ್ನು ಮಾರಾಟ ಮಾಡುತ್ತಿದ್ದಾರೆ. ಇದರಲ್ಲಿ pooling price, selling price ಎಂದು ಒಂದು ಟನ್ನಿಗೆ 30 ರೂಪಾಯಿ ವ್ಯತ್ಯಾಸವನ್ನಿಟ್ಟಿದ್ದಾರೆ. ಇದುವರೆಗೂ ಕೂಡ ಈ ಸೊಸೈಟಿಗಳು ಬಹಳ ಅನ್ಯಾಯ ಮಾಡುತ್ತಿವೆ. ತೂಕದಲ್ಲಿ ಬಹಳ ಮೋಸ ಮಾಡುತ್ತಾರೆ. ಅಮೋನಿಯಂ ಸಲ್ಫೇಟ್ ಮುಂತಾದ ರಾಸಾಯನಿಕ ಗೊಬ್ಬರಗಳನ್ನು ಮಾರಬೇಕಾದರೆ ಅದಕ್ಕೆ ಸಾಗಾಣಿಕೆ ಖರ್ಚು ಮುಂತಾದ ಎಷ್ಟೋ ಖರ್ಚುಗಳನ್ನು ಸೇರಿಸುತ್ತಿದ್ದಾರೆ. ತೂಕದಲ್ಲಿ ಸಹ ಮೋಸ ಮಾಡಿ ಒಂದು ಚೀಲಕ್ಕೆ ನಾಲ್ಕು ರೂಪಾಯಿನಿಂದ 20 ರೂಪಾಯಿವರೆಗೆ ಉಳಿಸಿಕೊಳ್ಳುತ್ತಾರೆ.

ಇದನ್ನು ಯಾವ ಸೊಸೈಟಿಯಲ್ಲಿ ಸೀಕ್ರೆಟ್ ಸ್ಟಾಫ್ ಬಿಟ್ಟು ಪರೀಕ್ಷೆ ಮಾಡಿದ್ದೀರಾ ? ತೂಕ ಸರಿಯಾಗಿ ಇದೆಯೇ ? ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಒಂದು ಸೊಸೈಟಿಯು ಸೂಪರ್ ಫಾಸ್ಫೇಟ್ 26 ರೂಪಾಯಿ ದರಕ್ಕೆ ಮಾರುತ್ತದೆ. ಕೆಲವು ಕಡೆ 23, 22, 18 ರೂಪಾಯಿಗೆ ಸಹ ಮಾರುತ್ತಾರೆ. ಇದರ ಅರ್ಥವಾಗುವುದಿಲ್ಲ. ಆದುದರಿಂದ ಯಾವ ರೇಟಿಕ್ಕೆ ಮಾರುತ್ತಾರೆ ಎಂಬುದನ್ನು ಚೆಕ್ ಮಾಡಿಸಬೇಕು. ಇದರಲ್ಲಿ ಸೊಸೈಟಿಗಳಿಗೆ ಅನ್ಯಾಯವಾಗುವುದಕ್ಕೆ ಅವಕಾಶವಿರುವುದಿಲ್ಲ. ಯಾವ ಯಾವ ಸೊಸೈಟಿ ರೈತನ ಕಣ್ಣಿಗೆ ಮಣ್ಣು ಹಾಕುತ್ತವೆ ಎನ್ನುವುದನ್ನು ಕಂಡು ಹಿಡಿಯುವು ದಕ್ಕೆ ಚೆಕ್ಕಿಂಗ್ ಸ್ಟಾಫ್ ಇಡಬೇಕೆಂದು ನಾನು ಹೇಳುತ್ತೇನೆ.

ಇನ್ನು National rural water supply scheme —There is difference between practice and theory. ಸಾಮಾನ್ಯವಾಗಿ ಸರಕಾರದ ದೃಷ್ಟಿ ಬೆಂಗಳೂರು ಸಿಟಿ ಮೇಲೆ ಅಷ್ಟೇ ಇದೆ ಎಂದು ಕಾಣುತ್ತದೆ. ನಮ್ಮ ಮಂತ್ರಿಗಳು ಹಳ್ಳಿಯಿಂದ ದಿಳ್ಳಿ ಎಂಬುದನ್ನು ಮರೆತು ಬಿಟ್ಟಿದ್ದಾರೆ. ಬೇಕಾದಷ್ಟು ಜನ ಸಿಟಿ ನೋಡಿಕೊಳ್ಳುವುದಕ್ಕೆ ಇದ್ದಾರೆ. ಆದರೆ ಹಳ್ಳಿಗಳನ್ನು ನೋಡಿಕೊಳ್ಳುವುದಕ್ಕೆ ಗಮನ ಇರಬೇಕು. ಈ ಯೋಜನೆಯಲ್ಲಿ ಅಧಿಕಾರಿಗಳು ಸಂಬಳ ತೆಗೆದು ಕೊಳ್ಳುತ್ತಾರೆ. ಜೀಪಿನಲ್ಲಿ ತಿರುಗಾಡಿ ಪೆಟ್ರೋಲ್ ಖರ್ಚು ಮಾಡುತ್ತಾರೆ. ಆದರೆ ಯಾವದೇ ಒಂದು ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಸ್ಕೀಂ ಜಾರಿಗೆ ತಂದಿಲ್ಲ. ಯಾವುದಾದರೂ ಜಾರಿಗೆ

(SRI H. R. KESHAVA HHETTY)

ಬಂದಿದ್ದರೂ ಕೂಡ ಅದು ಶೇಕಡ ಒಂದೆರಡರಷ್ಟು ಇರಬಹುದು. ಆದುದರಿಂದ ಹಳ್ಳಿಗಳಿಗೆ ಹೆಚ್ಚು ಗಮನ ಕೊಟ್ಟು ಈ ಯೋಜನೆ ಜಾರಿಗೆ ತರಬೇಕೆಂದು ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಸಭಾಪತಿಗಳೇ, ಈಗ ನಮ್ಮ ಮುಂದೆ ಅರ್ಥ ಸಚಿವರು 1963-64 ನೇ ಸಾಲಿನ ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಮಂಡಿಸಿದ್ದಾರೆ. ಈ ಮೊದಲು ಮಾತನಾಡಿದ ನನ್ನ ಸ್ನೇಹಿತರಾದ ಶ್ರೀಮಾನ್ ಕೇಶವಮೂರ್ತಿಯವರು ಅನೇಕ ವಿಷಯ ಗಳನ್ನು ಹೇಳಿದ್ದಾರೆ. ಕಳೆದ ವರ್ಷ ಎರಡು ಸಾರಿ ಸಪ್ಲಿಮೆಂಟರಿ ಡಿಮ್ಯಾಂಡ್ಸ್ ತಂದದನ್ನು ಅಂಗೀ ಕರಿಸಿದ್ದೇವೆ. ಅನೇಕ ಸಾರಿ ಸಪ್ಲಿಮೆಂಟರಿ ಡಿಮಾಂಡ್ಸ್ ತರುವುದು ಸರಿಯಲ್ಲ. ಬಜೆಟ್ಟನ್ನು ಸರಿ ಯಾದ ರೀತಿಯಲ್ಲಿ ಇಡದೆ ಈ ರೀತಿ ಪೀಸ್‌ಮೀಲಾಗಿ ತರುತ್ತಾ ಬರತಕ್ಕದ್ದು ಸರಿಯಲ್ಲ. ಮೊದಲೇ ವಿಚಕ್ಷಣೆಯಿಂದ ಬಡ್ಜೆಟ್ ತಯಾರು ಮಾಡಿ ಸಭೆಯ ಮುಂದೆ ಇಟ್ಟು ಅಂಗೀಕಾರ ಪಡೆದಿದ್ದರೆ ಚೆನ್ನಾ ಗಿತ್ತು ಎಂದು ವಿಷಾದದಿಂದ ಹೇಳಬೇಕಾಗಿದೆ. ಕೆಲವು ಐಟಮ್ಸ್ ಬಗ್ಗೆ ತಿಳುವಳಿಕೆ ಕೊಡಬೇಕಾ ಗಿತ್ತು. ಬರೀ ಭರವಸೆ ಕೊಡುವುದರಿಂದ ಕೆಲಸವಾಗುವುದಿಲ್ಲ. ಇದನ್ನು ಅರ್ಥಸಚಿವರು ಯೋಚನೆ ಮಾಡಬೇಕು. ನಾವು ಹೇಳತಕ್ಕಂಥಾದ್ದನ್ನು ಸಚಿವರು ನೋಟ್ ಮಾಡಿಕೊಂಡು ಗಮನ ಕೊಡಬೇಕು.

ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನಲ್ಲಿ ಕೆಲವು ಐಟಮ್ಸ್ ಹೊಸದಾಗಿ ಸೇರಿಸಿದ್ದೀರಿ. ಯಾವ ಭಾಗಕ್ಕೆ ಅನುಕೂಲ ಮಾಡಿದ್ದೀರಿ, ಯಾವ ಬೇಸಿಸ್ ಮೇಲೆ ಈ ಕೆಲಸ ಇನ್‌ಕ್ಲೂಡ್ ಮಾಡಿದ್ದೀರಿ, ಇದಕ್ಕೆ ಕಾರಣವೇನು ಎಂಬುದನ್ನು ಸ್ಪಷ್ಟಪಡಿಸಬೇಕಾಗಿತ್ತು. ನೀವು ಪಾರ್ಶಲ್ಲಾಗಿ ಮಾಡುತ್ತೀರಿ ಎಂದು ಹೇಳಬೇಕಾಗಿದೆ. ನೀವು ಕೊಟ್ಟಿರತಕ್ಕಂಥ ಭರವಸೆಗಳನ್ನು ಇಂಪ್ಲಿಮೆಂಟ್ ಮಾಡದೇ ಇದ್ದರೆ ನಿಮಗೂ ಅಗೌರವ, ನಮಗೂ ಅಗೌರವ. ಮೂಲತಾಯಿ ಧೋರಣೆ ಇರುವುದು ಸರಿಯಲ್ಲ. ಕೆಲವು ಡಿವಿಜನ್ನುಗಳಿಗೆ ಸುಮಾರು 30-40 ಲಕ್ಷ ರೂಪಾಯಿ ಗ್ರ್ಯಾಂಟ್ ಕೊಡುತ್ತೀರಿ, ಇನ್ನು ಕೆಲವು ಡಿವಿಜನ್ನುಗಳಿಗೆ 4-5 ಲಕ್ಷ ಸಹ ಗ್ರಾಂಟು ಕೊಟ್ಟಿಲ್ಲ. ಅತ್ತೂ ಕರದೂ ಮಾಡಿದರೆ ಸ್ವಲ್ಪ ಕೊಡು ತ್ತೀರಿ. ನಮ್ಮ ರಾಜ್ಯದ ಎಲ್ಲಾ ಭಾಗದ ಹಿತರಕ್ಷಣೆ ಮಾಡಬೇಕಾದುದು ಸರಕಾರದ ಕರ್ತವ್ಯ. ಮನಸ್ಸಿಗೆ ಬಂದಂತೆ ಮಾಡುವುದು ಸರಿಯಲ್ಲ. ಇದು ತಪ್ಪು. ಕೆಲವು ಎಸ್ಟಿಮೇಟು ಏತಕ್ಕೆ ಸೇರಿಸಿಲ್ಲ? ಅದಕ್ಕೆ ಕಾರಣವೇನು? ಇದಕ್ಕೆ ವಿವರಣೆ ಕೊಡಬೇಕು.

ಇನ್ನು ಡಿಮ್ಯಾಂಡ್ ನಂಬರು 20 ರಲ್ಲಿ 27,10,000 ರೂಪಾಯಿ ಕೇಳಿದ್ದೀರಿ. ಈ ವಿಚಾರ ದಲ್ಲಿ ಶ್ರೀಮಾನ್ ಕೇಶವಮೂರ್ತಿಯವರು ವಿವರಣೆ ಕೊಟ್ಟು ಹೇಳಿದ್ದಾರೆ. ಅಮೋನಿಯಂ ಸಲ್ಫೇಟ್ ಶೇಕಡ 10 ರಷ್ಟು ಶಾರ್ಟೇಜ್ ಬಗ್ಗೆ ವಿವರಣೆ ಕೊಟ್ಟಿದ್ದೀರಿ. ಇಷ್ಟೊಂದು ದೊಡ್ಡ ಮೊತ್ತವನ್ನು ಕೇಳುತ್ತಾ ಇರುವಾಗ್ಗೆ ಅದು ಯಾವ ರೀತಿ ವಿವರಣೆಯಾಗುತ್ತದೆ, ಏನಾದರೂ ಅನ್ಯಾಯವಾಗು ತ್ತಿದೆಯೇ ಎನ್ನುವುದನ್ನು ಮಾನ್ಯ ವ್ಯವಸಾಯ ಸಚಿವರು ಯೋಚನೆ ಮಾಡಬೇಕು. ತೂಕದಲ್ಲಿ ಮೋಸ ಮಾಡುತ್ತಾರೆ. ಆದ್ದರಿಂದ ಈ ಬಗ್ಗೆ ಸೂಕ್ತ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಇಷ್ಟು ಹಣ ಖರ್ಚು ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಇದಲ್ಲದೆ ಸರಕಾರ ಕೊಡತಕ್ಕಂಥ ಹಣ ಸರಿ ಯಾಗಿ ವಿನಿಯೋಗವಾಗುತ್ತದೆಯೇ? ನೇರವಾಗಿ ರೈತನಿಗೆ ದೊರೆಯುತ್ತದೆಯೇ ಎಂಬುದಕ್ಕೆ ತೀವ್ರ ಗಮನ ಕೊಡಬೇಕು. ಇದರಲ್ಲಿ ವ್ಯಾಪಾರದ ದೃಷ್ಟಿ ಇಟ್ಟುಕೊಳ್ಳುವುದು ಒಳ್ಳೆಯದಲ್ಲ. ವ್ಯವಸಾಯ ಮಾಡತಕ್ಕಂಥ ರೈತನಿಗೆ ಸೌಲಭ್ಯ ದೊರೆಯಬೇಕು ಇದರ ಬಗ್ಗೆ ಸರಿಯಾದ ಚೆಕ್ ಇಡಬೇಕೆಂದು ಹೇಳುತ್ತೇನೆ.

ಇನ್ನು ಡಿಮ್ಯಾಂಡ್ ನಂಬರು 24–ಐಟಮ್ಸ್ 46-47 ರಲ್ಲಿ 6 ಲಕ್ಷ ರೂಪಾಯಿ ಕೇಳಿದ್ದೀರಿ. ಈ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಬಗ್ಗೆ ಬಹುಶಃ ಎಲ್ಲರಿಗೂ ಗೊತ್ತಿದೆ. ಹೆಚ್ಚಾಗಿ ಹೇಳಬೇಕಾಗಿಲ್ಲ. ದಕ್ಷತೆ ಇಲ್ಲದ ಅಧಿಕಾರಿಗಳು ಇರತಕ್ಕಂಥಾದ್ದು, ಈ ರೀತಿ ಅನೀತಿ ವ್ಯವಹಾರ ನಡೆಸುವುದು, ಇದ ರಿಂದ ಎಲ್ಲರಿಗೆ ಅವಮಾನ ಬರುತ್ತದೆ. ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳುವುದಾದರೆ ಇವತ್ತು ಬೆಳಿಗ್ಗೆ ಒಂದು ತರಹ ಇದ್ದರೆ ನಾಳೆ ಇನ್ನೊಂದು ತರಹ ಆಗಿರುತ್ತದೆ.

4-00 P.M.

ಈ ತರಹ ವ್ಯವಹಾರ ನಡೆಯುತ್ತಾ ಇದೆ, ಅಧಿಕಾರಿಗಳಲ್ಲಂತೂ ಬಹಳ ತೀರ ಕೆಳಮಟ್ಟದ ವ್ಯವಹಾರ ನಡೆಯುತ್ತಾ ಇದೆ, ಅದನ್ನು ಸರಿಪಡಿಸಬೇಕು. ಈ ವಿಷಯವಾಗಿ ಸಂಬಂಧಪಟ್ಟ ಮಂತ್ರಿಗಳೊಡನೆ ಮಾತನಾಡಿದೆ ಏನು ಮಾಡುವುದು, ಕೆಟ್ಟಿದ್ದರೂ ಕೂಡ ರಾಜಕೀಯ ಒತ್ತಡದಿಂದ ಅಧಿಕಾರಿಗಳನ್ನು ಬದಲಾಯಿಸುವುದಕ್ಕೆ ಕಷ್ಟವಾಗುತ್ತದೆ ಎಂದು ಹೇಳಿದ್ದಾರೆ. ಯಾವ ಜಾತಿ ಆಗಲಿ, ವ್ಯವಹಾರ ಸರಿಯಾಗಿ ನಡೆಯದೇ ಇದ್ದ ಕಾಲದಲ್ಲಿ ಇದು ನಮ್ಮ ನಿಮ್ಮ ಎಲ್ಲರಿಗೂ ಅಗೌರವ ವನ್ನು ತರತಕ್ಕದ್ದು, ಇದರ ಬಗ್ಗೆ ತೀವ್ರವಾದ ಒಂದು ಹಿಡಿತದಲ್ಲಿ ಇಟ್ಟುಕೊಳ್ಳದಿದ್ದರೆ ಎಲ್ಲರಿಗೂ

ಅಗೌರವ ಬರುತ್ತದೆ. ಇದನ್ನು ಏಕೆ ಬಹಳ ವಿಷಾದದಿಂದ ಹೇಳುತ್ತೇನೆ ಎಂದರೆ ಸಂಬಂಧಪಟ್ಟ ಮಂತ್ರಿಗಳೇ ಆ ರೀತಿ ಹೇಳುವುದಾದರೆ, ನನ್ನ ಕೈಯಲ್ಲಿ ಅದು ಶಕ್ತಿ ಮೀರಿ ಹೋಗುತ್ತಾ ಇದೆ ಎಂದು ಅವರು ಹೇಳುವುದಾದರೆ, ಇನ್ನು ಯಾರು ತಾನೆ ಇದನ್ನು ಸರಿಪಡಿಸಬೇಕು ಎಂಬುದನ್ನು ಅವರೇ ಹೇಳಬೇಕು. ಸರ್ಕಾರದ ಆಡಳಿತ ನಡೆಸತಕ್ಕ ಮಂತ್ರಿಗಳೇ ಸರಿಪಡಿಸುವುದಕ್ಕೆ ಆಗುವುದಿಲ್ಲ ಎಂದರೆ ಬಹುಶಃ ಆ ಅಧಿಕಾರಿಗಳಲ್ಲಿರತಕ್ಕ ಅನೀತಿಯುತವಾದ ವ್ಯವಹಾರವನ್ನು ತಪ್ಪಿಸುವುದಕ್ಕೇ ಸಾಧ್ಯವಿಲ್ಲ ಎಂಬ ಭಾವನೆ ಬರುತ್ತದೆ. ಆದ್ದರಿಂದ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಬಗ್ಗೆ 6 ಲಕ್ಷ ರೂಪಾಯಿ ಕೇಳುತ್ತಾ ಇರುವುದನ್ನು ಯಾವ ರೀತಿ ವಿನಿಯೋಗಿಸುತ್ತೀರಿ ಅಥವಾ ವಿನಿಯೋಗಿಸಿದ್ದೀರಿ ಎಂಬುದನ್ನು ಹೇಳಬೇಕು. ಕಚ್ಚಾ ಸಾಮಾನುಗಳ ಹಂಚಿಕೆಯಲ್ಲ ಬಹಳ ಅನ್ಯಾಯವಾಗುತ್ತಾ ಇದೆ. ಲಕ್ಷಾಂತರ ರೂಪಾಯಿ ಇವತ್ತಿನ ದಿವಸ ಅಧಿಕಾರಿ ವರ್ಗದಲ್ಲಿ ವಿಲೇವಾರಿಯಾಗುತ್ತಾ ಇದೆ, ಇದು ಬಹಳ ಅನ್ಯಾಯ, ಹೇಯವಾದುದು. ಎಲ್ಲರಿಗೂ ಅಗೌರವವನ್ನು ತರುತ್ತಾ ಇದ್ದಾರೆ. ಆದ್ದರಿಂದ ಆ ಅಧಿಕಾರಿಗಳ ಬಗ್ಗೆ ಸಾಕಾದಷ್ಟು ತಮ್ಮ ಮನಸ್ಸನ್ನು ಹರಿಸಬೇಕೆಂದು ಹೇಳುತ್ತೇನೆ.

ಇನ್ನು ಪಂಚಾಯ್ತಿ ಸೆಕ್ರೆಟರಿಗಳ ಬಗ್ಗೆ ಶ್ರೀಮಾನ್ ಕೇಶವಮೂರ್ತಿಗಳು ಹೇಳಿದರು. ಆ ವಿಚಾರ ಹೈಕೋರ್ಟಿನಲ್ಲಿವೆ. ಅವರು ತೀರ್ಪು ಕೊಡುವತನಕ ಏನೂ ಮಾಡುವುದಕ್ಕಾಗುವುದಿಲ್ಲ. ಆದರೂ ಕೂಡ ಸರ್ಕಾರದವರು ಸರಿಯಾದ ರೀತಿಯಲ್ಲಿ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಿದ್ದ ಪಕ್ಷದಲ್ಲಿ ಇಷ್ಟಕ್ಕೆಲ್ಲಾ ಕಾರಣವಾಗುತ್ತಾ ಇರಲಿಲ್ಲ. ಈಗ ನೇಮಕ ಮಾಡಿಕೊಂಡಿರತಕ್ಕ ಸೆಕ್ರೆಟರಿಗಳೆಲ್ಲಾ ಕಾಲಹರಣ ಮಾಡುತ್ತಾ ಇದ್ದಾರೆ. ಅವರಿಗೆ ಸುಮ್ಮನೆ ಸಂಬಳ ಕೊಡುತ್ತಾ ಇದ್ದೀರಿ. ಇನ್ನೊಂದು ಕಡೆ ಹಾಲಿ ಸ್ಥಳೀಯ ಅಧಿಕಾರಿಗಳು ಯಾರಿದ್ದಾರೆ ಅವರನ್ನು ನೇಮಕ ಮಾಡಿಕೊಂಡಿದ್ದೀರಿ. ಅವರೂ ಸಹ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಮತ್ತೊಂದು ಕಡೆ ವಿಲೇಜ್ ಅಕೌಂಟ್‌ಟೆಂಟ್‌ಗಳೆಂದು ಅನೇಕರಿಗೆ ಟ್ರೈನಿಂಗ್ ಕೊಟ್ಟಿದ್ದೀರಿ. ಅವರನ್ನೂ ಸಹ ಕೆಲಸವಿಲ್ಲದೆ ನೇಮಕ ಮಾಡಿಕೊಂಡಿದ್ದೀರಿ. ಸ್ವಲ್ಪ ಮುಂದಾಲೋಚನೆ ಮಾಡದೇ ಮಾಡಿರತಕ್ಕ ಒಂದು ಆರ್ಡರ್‌ನಿಂದ ಇಷ್ಟೆಲ್ಲಾ ಪರಿಣಾಮವಾಗಿದೆ.

ಕುಡಿಯುವ ನೀರಿನ ಸೌಕರ್ಯಕ್ಕಾಗಿ 15 ಲಕ್ಷ ರೂಪಾಯಿಗಳನ್ನು ತಾವು ಕೇಳಿದ್ದೀರಿ. ಹತ್ತು ಪರ್ಸೆಂಟ್ ಕಾಂಟ್ರಿಬ್ಯೂಷನ್ ಕೊಡಬೇಕು, ಅದರಲ್ಲಿ 5 ಪರ್ಸೆಂಟ್ ಪಂಚಾಯ್ತಿಯವರು ಕೊಡಬೇಕು, ಇನ್ನು 5 ಪರ್ಸೆಂಟ್ ಅಲ್ಲಿನ ಜನಗಳು ಕೊಡಬೇಕೆಂದು ಹೇಳುತ್ತೀರಿ. ಮಾನ್ಯ ಮುಖ್ಯ ಮಂತ್ರಿಗಳು ಎಲ್ಲೆಲ್ಲಿ ಹೆಚ್ಚು ತೊಂದರೆ ಇದೆ, ಹೆಚ್ಚು ಕಷ್ಟ ಇದೆ, ಅದನ್ನು ನೋಡಿ ಆ 5 ಪರ್ಸೆಂಟ್ ಕೊಡುವುದನ್ನು ವೈವ್ ಮಾಡುತ್ತೇವೆ ಎಂದು ಹೇಳಿದರು. ಅದು ಸ್ವಾಗತಾರ್ಹ. ಆದರೆ ಆ ರೀತಿ ಮಾಡತಕ್ಕ ಕಾಲದಲ್ಲಿ ಯಾವ ಆಧಾರದ ಮೇಲೆ ಮಾಡುತ್ತೀರಿ ಎನ್ನುವುದು ಮುಖ್ಯ. ಏಕೆಂದರೆ ಒಬ್ಬೊಬ್ಬರಿಗೆ ಅನುಕೂಲವಾಗುವಂತಹ ಅಥವಾ ಒಂದು ಊರಿನವರಿಗೆ ಅನುಕೂಲವಾಗುವಂತಹ ರೀತಿಯಲ್ಲಿ ಮಾಡುವುದಾದರೆ ನಾನು ಮೊದಲೇ ಹೇಳಿದ ಹಾಗೆ ಪಿ.ಡಬ್ಲ್ಯೂ.ಡಿ. ಮೇಲೆ ಮಾತನಾಡುತ್ತಾ ಇರುವಾಗ ಎಲ್ಲಿ ಕಷ್ಟ ಇದೆ ಅದನ್ನು ಸರಿಯಾಗಿ ಅಧಿಕಾರಿಗಳಿಂದ ತಿಳಿದುಕೊಂಡು ಒಂದು ಆಧಾರದ ಮೇಲೆ ಹಂಚುವ ವ್ಯವಸ್ಥೆ ಮಾಡಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರು ಮಾತನಾಡುವುದಕ್ಕೆ ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಜೆ. ದೇವಯ್ಯ (ಮಂಡ್ಯ).—ಸ್ವಾಮಿ ತಾವು 1963–64ನೇ ಸಾಲಿನ ಸಪ್ಲಿಮೆಂಟರಿ ಬಡ್ಜೆಟ್ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶಕೊಟ್ಟದ್ದಕ್ಕಾಗಿ ತಮಗೆ ವಂದನೆಗಳನ್ನು ಅರ್ಪಿಸುತ್ತಾ ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ನಾನು ಎರಡು ಸಾರಿ ಬಡ್ಜೆಟ್‌ನಲ್ಲೂ ಮಂಡ್ಯ ಜಿಲ್ಲೆಯ ಉತ್ಪತ್ತಿ ಎಷ್ಟಿದೆ, ಖರ್ಚು ಎಷ್ಟಿದೆ ಎಂಬುದನ್ನು ನೋಡುತ್ತಾ ಇದ್ದೇನೆ. ಮಂಡ್ಯ ಸಕ್ಕರೆ ಕಾರ್ಖಾನೆಯಿಂದ ಸರ್ಕಾರದವರಿಗೆ ಒಂದು ವರ್ಷಕ್ಕೆ ಸುಮಾರು ಒಂದು ಕೋಟಿ ರೂಪಾಯಿನಷ್ಟು ಉತ್ಪತ್ತಿ ಇದೆ ಮತ್ತು ಈ ರಸ್ತೆಗಳಿಗೆ ಮೊದಲು ಸರ್ಕಾರದವರಿಗೆ ಟನ್ ಒಂದಕ್ಕೆ 6 ರೂಪಾಯಿನಂತೆ 27 ಲಕ್ಷ ರೂಪಾಯಿ ಬರುತ್ತಾ ಇತ್ತು. ಆ 27 ಲಕ್ಷ ರೂಪಾಯಿಗಳನ್ನು ಇದುವರೆಗೂ ಯಾವ ಬಾಬಿಗೆ ಖರ್ಚು ಮಾಡುತ್ತಾ ಇದ್ದೀರಿ, ಏನು ಮಾಡಿಕೊಳ್ಳುತ್ತಾ ಇದ್ದೀರಿ, ಎಷ್ಟು ರೂಪಾಯಿಗಳನ್ನು ಈ ರಸ್ತೆ ಬಾಬಿಗೆ ಸೇರಿಸಿದ್ದೀರಿ ಎನ್ನುವುದನ್ನು ಹಣಕಾಸಿನ ಮಂತ್ರಿಗಳು ಹೇಳಬೇಕೆಂದು ಕೇಳುತ್ತೇನೆ.

ವಿಶ್ವೇಶ್ವರಯ್ಯ ನಾಲೆ ಬಂದು ಸುಮಾರು 32 ವರ್ಷ ಆಯಿತು. ಆ ಲಾಗಾಯ್ತಿನಿಂದ ಎಷ್ಟು ನೀರಾವರಿ ಆಗಿದೆ, ಅದರಿಂದ ಎಷ್ಟು ಉತ್ಪನ್ನವಾಗಿದೆ ಎಂಬುದನ್ನು ಆಲೋಚನೆ ಮಾಡಬೇಕು. ಈಗ ವಿಶ್ವೇಶ್ವರಯ್ಯ ನಾಲೆಯಿಂದ ಒಂದು ಲಕ್ಷ ಇಪ್ಪತ್ತು ಸಾವಿರ ಎಕರೆ ನೀರಾವರಿಯಾಗುತ್ತದೆ. ನಮ್ಮ ಸರ್ಕಾರದ ವಿಶ್ವೇಶ್ವರಯ್ಯ ನಾಲೆಯಲ್ಲಿ ಎಷ್ಟು ನೀರು ಹಳ್ಳಕ್ಕೆ ಬಿದ್ದು ಉಪಯೋಗವಿಲ್ಲದೆ ಹೋಗುತ್ತದೆ, ಅದನ್ನೆಲ್ಲಾ ಪಿಕ್‌ಅಪ್ ಮಾಡಿ ಅದನ್ನು ನೀರಾವರಿಗೆ ಕೊಡಬೇಕೆಂದು ಎರಡು ಕೋಟಿ ರೂಪಾಯಿಗಳ ಅಂದಾಜಾಗಿ ಸರ್ಕಾರದವರಿಗೆ ಬಂದಿದೆ ಎಂದು ಹೇಳುತ್ತಾ ಇದ್ದಾರೆ. ಈಗ ವಿಶ್ವೇಶ್ವರಯ್ಯ

(ಶ್ರೀ ಕೆ. ದೇವಯ್ಯ)

ನಾಲಾ ಬಂದಿರುವ ಕಡೆ ಒಂದು ಊರಿನ ಪಕ್ಕದಲ್ಲಿ ಬಂದರೂ ಕೂಡ ಅದರಿಂದ ನೀರಾವರೀ ಆಗಿಲ್ಲ. ಎರಡು ಕೋಟಿ ರೂಪಾಯಿನ ಪಿಕ್‌ಅಪ್ ಚಾನಲ್‌ಗಳನ್ನು ಮಾಡಿ ನೀರನ್ನು ಹಂಚುವಂತೆ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಅವಕಾಶವಿಲ್ಲದೇ ಇರುವ ಕಡೆ ವಿಶ್ವೇಶ್ವರಯ್ಯ ದೊಡ್ಡ ಛಾನಲ್‌ಗಳಲ್ಲಿ ಲಿಫ್ಟ್ ಇರಿಗೇಷನ್‌ಗೆ ಅವಕಾಶ ಮಾಡಿಕೊಡಬೇಕೆಂದು ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಳ್ಳು ತ್ತೇನೆ. ನಮ್ಮ ಮುಖ್ಯ ಮಂತ್ರಿಗಳು ಈ ಒಂದು ಮಾತನ್ನು ದಯವಿಟ್ಟು ಕೇಳಬೇಕಾಗಿದೆ. ಕೆಲವರು ನಾಲೆಗೆ ನೀರು ತೆಗೆದುಕೊಳ್ಳುತ್ತಾರೆ. ನೆಪಮಾತ್ರಕ್ಕೆ ಭಾವಿ ತೆಗೆದುಕೊಂಡು ನಾಲೆಗೆ 100 ಅಡಿ ದೂರದಲ್ಲಿದ್ದು ಭಾವಿಗಳಿಗೆ ಚಾನಲ್ ನೀರು ಬರುವಹಾಗೆ ಮಾಡಿಕೊಂಡು ಅದರಿಂದ ನೀರನ್ನು ತೆಗೆದುಕೊಳ್ಳುತ್ತಾ ಇದ್ದಾರೆ, ಅದಕ್ಕೆ ನಿಮ್ಮ ಇಂಜನಿಯರಿಂಗ್ ಇಲಾಖೆಯವರು ಅವರಿಗೆ ಅವಕಾಶ ವನ್ನು ಕೊಟ್ಟಿದ್ದಾರೆ. ಅದಕ್ಕೆ ಅವರು ಯಾವ ತೆರಿಗೆಯನ್ನೂ ಕೊಡುತ್ತಾ ಇಲ್ಲ. ಇದನ್ನು ನಾನು ಕಣ್ಣಾರೆ ಕಂಡಿದ್ದೇನೆ. ನ್ಯಾಯವಾಗಿ ಲಿಫ್ಟ್ ಇರಿಗೇಷನ್‌ಗೆ ಅವಕಾಶಕೊಡಿ ಎಂದರೆ ಕೊಡುತ್ತಿಲ್ಲ. ಇದನ್ನು ಮಾನ್ಯ ಮುಖ್ಯ ಮಂತ್ರಿಗಳು ಮನಸ್ಸಿನಲ್ಲಿಟ್ಟುಕೊಂಡು ಕದ್ದು ತೆಗೆದುಕೊಳ್ಳುವವರಿಗೆ ಯಾವ ರೀತಿ ಮಾಡಬೇಕೋ ಅದನ್ನು ಮಾಡಬೇಕೆಂದು ಹೇಳಿ ಅವರನ್ನು ಕೇಳಿಕೊಳ್ಳುತ್ತಾ ಇದ್ದೇನೆ.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ಅದು ಯಾವ ಊರಿನ ಹತ್ತಿರ ?

ಶ್ರೀ ಜೆ. ದೇವಯ್ಯ.—ಕರಗೋಡು ಮತ್ತು ಇನ್ನೂ ಇತರ ಕಡೆಗಳಲ್ಲಿ ಆ ರೀತಿ ಆಗುತ್ತಾ ಇದೆ. ಬೇಕಾದರೆ ತಾವೇ ಹೋಗಿ ಪರೀಕ್ಷೆ ಮಾಡಿ ನೋಡಿ. 15–20 ಎಕರೆಗಳಿಗೆ ತೂಬು ಮಾಡಿಕೊಂಡು ನೀರು ತೆಗೆದುಕೊಂಡಿದ್ದಾರೆ. ಅದಕ್ಕೆ ತೆರಿಗೆ ಇಲ್ಲ, ಏನೂ ಇಲ್ಲ. ನಿಮ್ಮನ್ನು ಕರೆದುಕೊಂಡು ಹೋಗೋಣ ಎಂದರೆ ನಿಮ್ಮ ಅಧಿಕಾರಿಗಳು ಅದಕ್ಕೆ ಅವಕಾಶ ಕೊಡುವುದಿಲ್ಲ, ಮಂತ್ರಿಗಳ ಜೊತೆ ಯಲ್ಲಿ ಹೋಗಬಾರದು ಎಂದು ಹೇಳುತ್ತಾರೆ–ಅವರ ಜೊತೆಯಲ್ಲಿ ಊಟ ಮಾಡಬಾರದು, ಟೀ ಕುಡಿಯ ಬಾರದು ಎಂದು ಕಟ್ಟು ಮಾಡಿರತಕ್ಕ ಮುಖಂಡರು ಮಂಡ್ಯ ಡಿಸ್ಟ್ರಿಕ್ಟಿನಲ್ಲಿ ಇದ್ದಾರೆ. ಇದನ್ನು ದಯ ವಿಟ್ಟು ತಾವು ತಪ್ಪಿಸಬೇಕೆಂದು ಹೇಳುತ್ತೇನೆ. ನಮ್ಮ ಕಷ್ಟ ಹೇಳಿಕೊಕೊಳ್ಳೋಣ, ಜನಗಳ ಸೇವೆ ಮಾಡೋಣ ಎಂದು ಹೇಳಿ ನಮಗೆ ಆಶೆ, ಮಿಳಿತವಾಗಿದ್ದರೆ ಒಳ್ಳೆಯದು, ಮಿಳಿತವಾಗಿಲ್ಲದೇ ಇದ್ದರೆ ಏನಾಗುತ್ತದೆ ಎಂಬುದು ನಿಮಗೂ ಗೊತ್ತಿದೆ, ಆದ್ದರಿಂದ ತಾವು ಬಂದಾಗ ಜನಗಳು ತಮ್ಮ ಕಷ್ಟ ಸುಖಗಳನ್ನು ಹೇಳಿಕೊಳ್ಳುವುದಕ್ಕೆ ಅವಕಾಶಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳತ್ತಾ ಇದ್ದೇನೆ.

ಗ್ರಾಮ ಠಾಣ ರಿಸರ್ವ್ 2 ಫರ್ಲಾಂಗು ಕಳೆದಿದೆ ಎಂದು ಇದೆ, ಒಂದು ಫರ್ಲಾಂಗ್‌ವರೆಗೆ ಮಾತ್ರ ನೀರು ಕೊಡಬೇಕೆಂದು ಸರ್ಕಾರಕ್ಕೆ ಶಿಫಾರಸು ಬಂದಿದೆ. ಅಲ್ಲಿಂದ ಆ ಊರಿನಲ್ಲಿ ವಾಸಮಾಡುತ್ತಾ ಇರತಕ್ಕ ಜನ ನೀರು ತೆಗೆದುಕೊಂಡು ಜೀವನ ಮಾಡುತ್ತಾ ಇದ್ದಾರೆ, ಗೋಡೆಯ ಮಗ್ಗುಲಲ್ಲೇ ನೀರು ಬಿಟ್ಟುಕೊಂಡು ತೆಗೆದುಕೊಳ್ಳುತ್ತಾ ಇದ್ದಾರೆ, ತಾವು ಬೇಕಾದರೆ ಇನ್‌ಸ್ಪೆಕ್ಷನ್ ಮಾಡಿ ನೋಡಿ. ಆ ರೀತಿ ನೀರು ಬರಕೂಡದು ಎಂದು ಹೆಲ್ತ್ ಆಫೀಸರು ಅಭಿಪ್ರಾಯ ಕೊಟ್ಟಿದ್ದಾರೆ.

ಇದನ್ನಾದರೂ ಕಟ್ಟುನಿಟ್ಟಾಗಿ ಮಾಡಿದರೆ ಸರ್ಕಾರಕ್ಕೂ ಆದಾಯ ಬರುತ್ತದೆ, ಜನರಿಗೂ ಅನುಕೂಲವಾಗುತ್ತದೆ. ಇದನ್ನು ಸರ್ಕಾರದವರು ದಯವಿಟ್ಟು ಪರಿಶೀಲನೆ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ.

ನಾನೀಗ ಇನ್ನೊಂದು ವಿಚಾರವನ್ನು ಸರ್ಕಾರದವರ ಗಮನಕ್ಕೆ ತರಬೇಕಾಗಿದೆ. ನಮ್ಮ ಮಂಡ್ಯ ಜಿಲ್ಲೆಯಲ್ಲಿ ಕಬ್ಬನ್ನು ಬೆಳೆಯತಕ್ಕ ರೈತರಿಗೆ ಗೊಬ್ಬರ ಇತ್ಯಾದಿ ಬೇಕಾದ ಸಾಮಾನುಗಳನ್ನು ಕಂಪೆನಿ ಯವರು ಸಕಾಲಕ್ಕೆ ಸರಿಯಾಗಿ ಒದಗಿಸುತ್ತಿಲ್ಲ. ಆದರೆ ಈಗ ಅವರು ಯಾವುದೋ ಒಂದು ನಾಟಕ ವನ್ನು ತಯಾರು ಮಾಡಿಸಿದ್ದಾರಂತೆ : ಆ ನಾಟಕಕ್ಕೆ ಯಾರು ಟಿಕೆಟ್ ತೆಗೆದುಕೊಳ್ಳುವುದಿಲ್ಲವೋ ಅವರಿಗೆ ಕಂಪೆನಿಯವರು ಉಪ್ಪು ಬೂದಿಗಳನ್ನು ಸಕಾಲಕ್ಕೆ ಕೊಡುವುದಿಲ್ಲ ಎಂದು ಈಗ ಹೇಳುತ್ತಿ ದ್ದಾರೆ. ಮಂಡ್ಯ ಸಕ್ಕರೆ ಕಂಪನಿಯವರು ಒಬ್ಬ ರೈತನಿಗೆ ಒಂದು ನೂರು ರೂಪಾಯಿಗಳ ಒಂದು ಟಿಕೆ ಟ್ಟನ್ನು ಕೊಟ್ಟಿದ್ದಾರೆ. ಆದರೆ ನಾನು ಹೇಳುವುದು ನಮ್ಮ ಮಂಡ್ಯ ಜಿಲ್ಲೆಯಲ್ಲಿ ದಾನಮಾಡುವು ದಕ್ಕೆ ಜನರು ಸಿದ್ಧವಾಗಿದ್ದಾರೆ. ಈಗ ಇವರು ನಾಟಕ ಆಡಿ ಆ ವಿದ್ಯಾರ್ಥಿನಿಲಯಕ್ಕೇನು ಸಹಾಯ ಮಾಡಬೇಕು ಎಂತ ಇದ್ದಾರೋ ಅದಕ್ಕೇನು ಅಂಥ ತೊಂದರೆ ಬಂದಿದೆ ಎಂಬುದನ್ನು ಜನರಿಗೆ ಊರುಗಳಲ್ಲಿ ಬಂದು ತಿಳಿಸಿದರೆ ಜನರು ದಾನಮಾಡಲು ತಯಾರಾಗಿದ್ದಾರೆ. ಆದರೆ ಇವರು ಹಾಗೆ ಮಾಡುವುದಿಲ್ಲ. ಇವರು ಸುಮ್ಮನೆ ಸಮಾಜಸೇವಕರೆಂದು ಹೇಳಿಕೊಳ್ಳುತ್ತಿದ್ದಾರೆ. ಈಗ್ಗೆ ಮೂರು ವರ್ಷದಲ್ಲಿ ಸಮಾಜ ಸೇವಾಮಂಡಲಿ ನಾಟಕ ಎಂದು ಹೆಸರಿಟ್ಟು ನಾಟಕ ಮಾಡಿದರು. ಈ ನಾಟಕದ ಅಧ್ಯಕ್ಷತೆಯನ್ನು ಶ್ರೀ ಹೊಂಬೇ ಗೌಡರು ವಹಿಸಿದ್ದರು.

ಅಧ್ಯಕ್ಷರು.—ತಾವು ಆ ಅಧ್ಯಕ್ಷರ ಹೆಸರನ್ನು ಹೇಳಬಾರದು.

ಶ್ರೀ ಜೆ. ದೇವಯ್ಯ.—ಇವರು ರೈತರಿಂದ ದುಡ್ಡನ್ನು ಏಕೆ ವಸೂಲು ಮಾಡಿದರು ? ಹಾಗೆ ವಸೂಲು ಮಾಡಿದ ದುಡ್ಡು ಈಗ ಎಲ್ಲಿದೆ ? ಇದನ್ನೆಲ್ಲಾ ಕೇಳತಕ್ಕವರು ಯಾರು ? ಇದೆಲ್ಲ ಸರಿಯಲ್ಲ. ಇವರಿಗೆ ದುಡ್ಡು ಬೇಕಾಗಿದ್ದರೆ ಇವರು ಊರುಗಳಿಗೆ ಬರಲಿ, ಜನರಿಂದ ದುಡ್ಡನ್ನೂ ಎತ್ತಲಿ, ಅದಕ್ಕೆ ಸರಿಯಾದ ಲೆಕ್ಕಗಳನ್ನೂ ಇಡಲಿ, ಇವರು ಕೇವಲ ಜನರಿಂದ ಏಕೆ ದುಡ್ಡೆತ್ತಬೇಕು ? ಹೀಗೆ ಒಂದೇ ಒಂದು ನಾಟಕದ ಹೆಸರಿನಿಂದ ದುಡ್ಡೆತ್ತುವುದೆಂದರೆ ಏನು ಅರ್ಥ ? ಈಗಿನ ಮುಖ್ಯ ಮಂತ್ರಿಗಳ ಕಾಲದಲ್ಲಿ ಇಂಥದನ್ನೆಲ್ಲ ತಪ್ಪಿಸಬೇಕು.

ಇನ್ನು ನಾನು ಪಾಂಡವಪುರದ ಕಬ್ಬಿನ ಫ್ಯಾಕ್ಟರಿಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಅಲ್ಲಿ ಫ್ಯಾಕ್ಟರಿಯೇನೋ ಇದೆ, ಅದರಿಂದ ಸರ್ಕಾರಕ್ಕೂ ಈದಿನ ಆದಾಯ ಬರುತ್ತಿರಬಹುದು. ಆದರೆ ಆ ಕಂಪೆನಿಯಲ್ಲಿ ಒಬ್ಬರಿಗೆ ಕಬ್ಬನ್ನು ಕಂಪೆನಿಗೆ ಕೊಡಲು ಅವಕಾಶ ಕೊಟ್ಟರೆ ಅದೇ ಅವಕಾಶ ವನ್ನು ಇನ್ನೊಬ್ಬರಿಗೆ ಕೊಡುತ್ತಿಲ್ಲ. ಅಲ್ಲಿ ಈ ದಿವಸ ಆ ಕಂಪೆನಿಗೆ ಛೇರ್ಮನ್ನರಾಗಿರತಕ್ಕವರು ಇಲ್ಲಿ ಈ ಸಭೆಯ ಮೆಂಬರೂ ಆಗಿದ್ದಾರೆ. ಹಿಂದೆ ನಾನು ಒಂದಾನೊಂದು ಕಾಲದಲ್ಲಿ ಅಲ್ಲಿ ಡೈರೆಕ್ಟರಾಗಿ ದ್ದಾಗ ಕೆಲವು ನೌಕರರನ್ನು ಕೆಲಸಕ್ಕೆ ನೇಮಿಸಿದ್ದೆವು. ಈಗ ಅವರಿಗೆ ತುಂಬಾ ತೊಂದರೆಯನ್ನು ಕೊಡುತ್ತಿದ್ದಾರಂತೆ. ಆ ಸಕ್ಕರೆ ಕಂಪೆನಿ ಛೇರ್ಮನ್ನರಿಗೆ ಒಂದು ವ್ಯಾನನ್ನು ಕೊಡಲಾಗಿದೆ. ಅದು ಪ್ರತಿನಿತ್ಯ ಈ ಅಸೆಂಬ್ಲಿ ಮುಂದೆ ನಿಂತಿರುತ್ತದೆ. ಆದುದರಿಂದ ಇಂಥ ಅನ್ಯಾಯಗಳು ತಮ್ಮ ಕಾಲ ದಲ್ಲಿ ನಡೆಯಬಾರದು. ಈಗಲಾದರೂ ಆ ಖಾಸಗೀ ಅಧ್ಯಕ್ಷರನ್ನು ಅಲ್ಲಿಂದ ತೆಗೆದು ಹಾಕಿ ಅಲ್ಲಿಗೆ ಒಬ್ಬರು ಐ. ಏ. ಎಸ್. ಆಫೀಸರನ್ನು ಹಾಕಬೇಕೆಂದು ಹೇಳುತ್ತೇನೆ.

ಇನ್ನು ಎಲೆಕ್ಟ್ರಿಸಿಟಿ ಬೋರ್ಡಿನ ವಿಚಾರಕ್ಕೆ ಬಂದರೆ—ಈಗ ರೈತರು ತೆರುತ್ತಿರುವ ರೇಟು ಬಹಳ ದುಬಾರಿ ಆಯಿತು. ಹಾಗೇ ಮುನಿಸಿಪಾಲಿಟಿಯವರಿಗೂ ಹಾಕುತ್ತಿರುವ ದರಗಳು ಬಹಳ ದುಬಾರಿ ಆಯಿತು. ಮೊದಲು ಮುನಿಸಿಪಾಲಿಟಿಗಳಿಗೆ ಬಲ್ಬುಗಳನ್ನು ಇಲಾಖೆಯವರೇ ಒದಗಿಸುತ್ತಿದ್ದರು : ಈಗ ನಾವು ಕೊಡುವುದಿಲ್ಲ ; ನೀವೇ ಹಾಕಿಕೊಳ್ಳಬೇಕು ಎಂದು ಹೇಳಿ ಅಲ್ಲಿ ಒಂದು ವಾರದಿಂದಲೂ ಕತ್ತಲೆಯಲ್ಲೇ ಕಾಲ ಕಳೆಯಬೇಕಾಗಿದೆ. ಈ ಹಿಂದೆ ಆ ಬಲ್ಬುಗಳನ್ನು ಸರ್ಕಾರದವರು ಹಾಕಬೇಕು, ಪಂಚಾಯ್ತಿಯವರು ದುಡ್ಡುಕೊಡಬೇಕು ಎಂತ ಇತ್ತು. ಇದನ್ನು ಸ್ವಲ್ಪ ವಿಚಾರಮಾಡಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ದೇವಯ್ಯ (ಮಲ್ಲೇಶ್ವರಂ).—ಸ್ವಾಮಿ, ನಾನೀಗ ಕೇವಲ ವಿದ್ಯಾಇಲಾಖೆಗೆ ಸಂಬಂಧಪಟ್ಟಹಾಗೆ ಮಾತನಾಡಬೇಕೆಂದಿದ್ದೇನೆ. ಈಗ ನಮ್ಮ ಮೈಸೂರು ಸಂಸ್ಥಾನದಲ್ಲಿ ವಿದ್ಯಾ ಇಲಾಖೆಗೆ ಸಂಬಂಧಪಟ್ಟಹಾಗೆ ಬೇಕಾದಷ್ಟು ಪ್ರೈವೇಟ್ ಹೈಸ್ಕೂಲುಗಳೂ, ಪ್ರೈಮರಿ ಸ್ಕೂಲು ಗಳೂ, ನರ್ಸರಿ ಸ್ಕೂಲುಗಳೂ ಇಲ್ಲದೆ ವಿದ್ಯಾ ಕಲಿಯತಕ್ಕ ಮಕ್ಕಳಿಗೆ ಬಹಳ ತೊಂದರೆಯಾಗಿದೆ. ಮೊನ್ನೆತಾನೆ ತೀರ್ಮಾನವಾದ ಒಂದು ಹೈ ಕೋರ್ಟಿನ ಜಡ್ಜ್ ಮೆಂಟಿನಲ್ಲಿ ಸರ್ಕಾರದವರು ಇನ್ನೂ 25,000 ಮಕ್ಕಳಿಗೆ ಅವಕಾಶ ಕಲ್ಪಿಸಿಕೊಡಬೇಕೆಂದು ಹೇಳಿದ್ದಾರೆ. ಈಗ ಅಷ್ಟು ಜನ ಮಕ್ಕಳಿಗೆ ಅಡಿಷನಲ್ ಅಕಾಮೊಡೇಷನ್ ಒದಗಿಸಿಕೊಡಬೇಕು. ಈದಿವಸ ಹೈಸ್ಕೂಲುಗಳಲ್ಲಿ 7-8 ತರಗತಿಗ ಳಾಗಿ ಮಕ್ಕಳ ಬತ್ತಡ ಜಾಸ್ತಿಯಾಗಿದೆ. ಕಟ್ಟಡಗಳ ಅವಕಾಶವಿಲ್ಲದೆ ಇಷ್ಟೆಲ್ಲಾ ತೊಂದರೆ ಉಂಟಾ ಗಿದೆ. ಹಾಗಿರುವಾಗ ಸರ್ಕಾರದವರು ಈ ಅಡಿಷನಲ್ ಸಪ್ಲಿಮೆಂಟರಿ ಗ್ರಾಂಟಿನಲ್ಲಿ ಈ ಕಟ್ಟಡಗಳಿಗಾಗಿ ಹಣವನ್ನು ತೆಗೆದಿಡದೆ ಇರುವುದು ಬಹಳ ಶೋಚನೀಯ. ಈಗ ಸುಮಾರು ಇಲ್ಲಿ ಸೂಚಿಸಿರತಕ್ಕ 24 ಲಕ್ಷ ರೂಪಾಯಿಗಳೇನಿದೆ ಇದು ಕೇವಲ ಅಲೋಯನ್ಸ್ ಇತ್ಯಾದಿಗಳಿಗಾಗಿ ತೆಗೆದಿಡಲಾಗಿದೆ. ಕಟ್ಟಡ ಗಳ ಬಗ್ಗೆ ಒಂದು ಕಾಸನ್ನೂ ಸೇರಿಸಿಲ್ಲ. ಸರ್ಕಾರದವರು ಈ ಕಟ್ಟಡಗಳು ಬೇಕಾದರೆ ಸಾರ್ವಜನಿಕರು ಅವರಾಗೇ ಮುಂದೆ ಬಂದು ಅವುಗಳನ್ನು ನೋಡಿಕೊಳ್ಳಬೇಕು ಇದು ಸರ್ಕಾರದವರ ಹೊಣೆಯಲ್ಲ ಎಂಬುದಾಗಿ ಅವರೀಗ ಒಂದು ತೀರ್ಮಾನ ತೆಗೆದುಕೊಂಡಿರುವಂತೆ ಕಾಣುತ್ತಿದೆ. ಅವರು ಆ ರೀತಿ ಒಂದು ದೃಢಸಂಕಲ್ಪ ಮಾಡಿರುವಂತೆ ಕಂಡುಬರುತ್ತಿದೆ. ಹೀಗಾಗಿ ಈ ದಿವಸ ಒಂದೊಂದು ತರಗತಿ ಯಲ್ಲೂ 60-75 ಹುಡುಗರು ಸೇರಬೇಕಾದಂಥ ಪರಿಸ್ಥಿತಿ ಬಂದೊದಗಿದೆ. ಸರ್ಕಾರದವರು ಇದನ್ನು ಬೇಗ ಹೋಗಲಾಡಿಸಬೇಕು. ಈ ಕಟ್ಟಡದ ವಿಚಾರದಲ್ಲಿ ಈ ಹಿಂದೆ ಸರ್ಕಾರದವರ ಧೋರಣೆಯೇ ನಿತ್ತು ಅದನ್ನು ಅವರು ಪರಿಶೀಲನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನೂ ಮೊನ್ನೆತಾನೆ ನಮ್ಮ ವಿದ್ಯಾ ಮಂತ್ರಿಗಳು ಪ್ರೈಮರಿ ಉಪಾಧ್ಯಾಯರುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ನೇಮಕ ಮಾಡಿಕೊಳ್ಳಲು ಕೇಂದ್ರದಿಂದ ಅನುಮತಿ ಬರುತ್ತದೆ ಎಂದು ತಿಳಿಸಿದ್ದಾರೆ. ಸಾವಿರಾರು ಜನ ಉಪಾಧ್ಯಾಯರನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಹಾಗೆ ಅವರನ್ನು ಕೆಲಸಕ್ಕೆ ನೇಮಿಸಿಕೊಂಡಮೇಲೆ ಅವರನ್ನು ಯಾವ ಪಾಠಶಾಲೆಗೆ ಹಾಕಲು ಅವಕಾಶವಿದೆ, ಎಲ್ಲಿ ಸ್ಥಳಾವಕಾಶ ವಿದೆ ಎಂಬುದನ್ನೆಲ್ಲ ಅವರು ಪರಿಶೀಲಿಸಬೇಕಾಗಿದೆ. ಅದರೆ ಸರ್ಕಾರದವರು ಈ ವಿಚಾರದಲ್ಲಿ ಬಹಳ ತಪ್ಪು ಮಾಡಿದ್ದಾರೆ. ಈ ದಿವಸ ಯಾವ ಒಂದು ತರಗತಿಯಲ್ಲೂ ಸರಿಯಾಗಿ ವಿದ್ಯಾಭ್ಯಾಸ ಮಾಡಲು ಮಕ್ಕಳಿಗೆ ಅವಕಾಶವಿಲ್ಲ. ಬಡತನದ ಕಡುಬೇಗೆಯಲ್ಲಿ ನೊಂದು ಬಳಲಿದವರ ಮಕ್ಕಳಿಗೆ ವಿದ್ಯಾ

ಶ್ರೀ ಕೆ. ದೇವಯ್ಯ)

ಭ್ಯಾಸಮಾಡಲು ಬಹಳ ತೊಂದರೆಯುಂಟಾಗಿದೆ. ಈ ದಿವಸ ಅಧಿಕಾರಿಗಳ ಮಕ್ಕಳಿಗೂ, ಶ್ರೀಮಂತರ ಮಕ್ಕಳಿಗೂ ಈ ವಿದ್ಯಾಭ್ಯಾಸವನ್ನು ಚೆನ್ನಾಗಿ ಮುಂದುವರಿಸಲು ಅನುಕೂಲವಾಗಿದೆ. ಬೆಳಗಿನಿಂದ ಸಂಜೆಯವರೆಗೆ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುವ ಮಕ್ಕಳಿಗೆ, ಕಾರ್ಪೊರೇಷನ್ನಿನಲ್ಲಿರುವ ಶಾಲೆಗಳಿಗಾಗಿ ಇತರ ಕಡೆಗಳಿಂದ ಬರುವವರ ಮಕ್ಕಳಿಗೆ ಇಲ್ಲಿ ಎಲ್ಲ ಸೌಲಭ್ಯಗಳೂ ದೊರೆಯುತ್ತಿವೆ. ಅಲ್ಲದೆ ನಮ್ಮ ಈ ಬೆಂಗಳೂರು ಪಟ್ಟಣವೂ ದಿನೇ ದಿನೇ ಬೆಳೆಯುತ್ತಲೇ ಬರುತ್ತಿದೆ. ಅನೇಕ ಹಳ್ಳಿಗಳಿಂದ, ಬೇರೆ ಬೇರೆ ತಾಲ್ಲೂಕುಗಳಿಂದ ಪರಿಜನರು ಮತ್ತು ಇನ್ನಿತರ ಜನರ ಮಕ್ಕಳು ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಬಂದಿದ್ದಾರೆ. ಅವರಿಗೆ ಹಾಸ್ಟೆಲುಗಳಿಲ್ಲ, ಬೇರೆ ಕಡೆ ಅವರಿಗೆ ಸ್ಥಳಾವಕಾಶವೂ ಸಿಗುತ್ತಿಲ್ಲ. ಇದರಿಂದಾಗಿ ಅವರಿಗೆ ಸರಿಯಾದ ವಿದ್ಯಾಭ್ಯಾಸದ ಸೌಕರ್ಯಗಳೂ ಸಿಗುತ್ತಿಲ್ಲ.

ನಮ್ಮ ಮಲ್ಲೇಶ್ವರದ ಕಾನ್ಸ್‌ಟಿಟ್ಯುಯೆನ್ಸಿ ನೋಡುವುದಾದರೆ, ಇಡೀ ಬೆಂಗಳೂರು ಸಿಟಿಗೆ ಅರ್ಧಕ್ಕಿಂತ ಮೇಲ್ಪಟ್ಟು ಜನಸಂಖ್ಯೆಯಿರುವ ಕಡೆಗಳಲ್ಲಿ ಹೆಣ್ಣು ಮಕ್ಕಳು ಶಾಲೆ ಎಂದರೆ ಮಲ್ಲೇಶ್ವರಂ ಗೌರ್ನಮೆಂಟ್ ಹೈಸ್ಕೂಲ್ ಫಾರ್ ಗರ್ಲ್ಸ್ ಎನ್ನುವ ಒಂದೇ ಒಂದು ಶಾಲೆಯಲ್ಲಿ ಇಪ್ಪತ್ತೊಂದು ವರ್ಗಗಳಿವೆ, ಇವುಗಳಲ್ಲಿ ಹದಿನಾರು ವರ್ಗಗಳಿಗೆ ರೂಮುಗಳಿವೆ. ಇನ್ನುಳಿದ ಐದು ತರಗತಿಗಳಿಗೆ ಸ್ಥಳವೇ ಇಲ್ಲ. ಅವರೆಲ್ಲ ವಿದ್ಯಾಭ್ಯಾಸ ಮಾಡುವುದಾದರೂ ಹೇಗೆ? ಇವರಿಗೆ ಈಗಲಾದರೂ ರೂಮುಗಳನ್ನು ಸರಕಾರ ಬೇಗ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಯಾರೋ ಒಬ್ಬ ಮಹನೀಯರು ಈಗಿರುವ ಕಟ್ಟಡವನ್ನು ಇಟ್ಟುಕೊಂಡಿದ್ದರು. ಅವರಿಂದ ಸರಕಾರ ಇದನ್ನು ಖರೀದಿಗೆ ಕೊಂಡುಕೊಂಡು ಎಷ್ಟೋ ವರ್ಷಗಳಾದರೂ ಇದನ್ನು ಮುಂದಕ್ಕೆ ಕಟ್ಟಿಸಲು ಪ್ರಯತ್ನ ಮಾಡದಿರುವುದು ಬಹಳ ಶೋಚನೀಯವಾದ ಸಂಗತಿ. ಹೊಸದಾಗಿ ಈಚೆಗೆ ಎರಡು ಮೂರು ರೂಮುಗಳನ್ನೇನೋ ಕಟ್ಟಿದ್ದಾರೆ. 1961-62 ಮತ್ತು ಅದಕ್ಕೆ ಹಿಂದಿನ ಸಾಲಿನಲ್ಲಿ 80,000 ರೂಪಾಯಿಗಳ ಒಂದು ಅಂದಾಜು, ಆಮೇಲೆ 90,000 ರೂಪಾಯಿಗಳ ಅಂದಾಜು ಸ್ಯಾಂಕ್ಷನ್ ಆಗಿದ್ದರೂ ಇನ್ನೂ ಕಟ್ಟಡ ಷುರು ಆಗಿಲ್ಲ. ಅಲ್ಲದೆ ಇನ್ನೂ ಲಕ್ಷಾಂತರ ರೂಪಾಯಿಗಳಷ್ಟು ಎಸ್ಟಿಮೇಟು ಆಗಿದೆ ಎಂದು ಕೇಳುತ್ತೇನೆ. ವಿದ್ಯಾಭ್ಯಾಸದ ದೃಷ್ಟಿಯಿಂದ ಈ ಹೆಣ್ಣುಮಕ್ಕಳ ಹೈಸ್ಕೂಲಿಗೆ ಸ್ವಲ್ಪ ಹೆಚ್ಚು ಗಮನ ಕೊಟ್ಟು ಇಲ್ಲಿ ಕಟ್ಟಡವನ್ನು ಬೇಗನೆ ಹಾಕಿಕೊಡಬೇಕು. ಇದರ ವಿಚಾರದಲ್ಲಿ ಮೊನ್ನೆ ತಾನೇ ನಾನು ಮುಖ್ಯಮಂತ್ರಿಗಳಿಗೆ ಒಂದು ಕಾಗದವನ್ನು ಬರೆದಿದ್ದೆ. ಅದನ್ನು ವಿದ್ಯಾಮಂತ್ರಿಗಳಿಗೆ ಕಳುಹಿಸಿದ್ದಾರೆಂದು ಕೇಳಿದೆ. ಸರಕಾರ ಆ ವಿಚಾರದಲ್ಲಿ ಸೂಕ್ತ ಕಾರ್ಯಕ್ರಮ ತೆಗೆದುಕೊಂಡು ಒಂದು ಫೇಸ್ಡ್ ಪ್ರೋಗ್ರಾಂ ಬೇಕಾದರೂ ಹಾಕಿಕೊಂಡು ಮೂರು ನಾಲ್ಕು ವರ್ಷಗಳೊಳಗಾಗಿ ಈ ಕಟ್ಟಡವನ್ನು ಕಟ್ಟಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇದು ಬಹು ಮುಖ್ಯವಾದ ವಿಚಾರ. ಸರ್ವೇಸಾಧಾರಣವಾಗಿ ಮೈಸೂರು ಸಂಸ್ಥಾನದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗಿರುವ ಕಡೆಗಳಲ್ಲಿ ಕಟ್ಟಡಗಳನ್ನು ಕಟ್ಟಲು ಹಣ ಒದಗಿಸಲು ಸರಕಾರ ಸಹಾಯ ಮಾಡಬೇಕು. ವಿದ್ಯಾಭ್ಯಾಸದ ಪ್ರಸಂಗದಲ್ಲಿ ಈಚೆಗೆ ಪ್ರಶ್ನೆಪತ್ರಿಕೆ ಕಾಗದಗಳು ಔಟಾದಾಗ ಅದರ ಪರಿಣಾಮವಾಗಿ ಲಕ್ಷಾಂತರ ರೂಪಾಯಿಗಳಷ್ಟು ಖರ್ಚು ಮಾಡಲು ಹಣ ಒದಗಿಸಿರುವಾಗ ಅದಕ್ಕೆ ಸರಕಾರದಲ್ಲಿ ಹಣವಿರಲಿಲ್ಲವೇ? ಆದರೆ ಮಕ್ಕಳಿಗಾಗಿ ಹಳ್ಳಿಗಳಿಂದ ಪಟ್ಟಣಗಳಿಗೆ ವಿದ್ಯಾಭ್ಯಾಸಕ್ಕೆ ಬರುವಾಗ ಶಾಲಾ ಕಟ್ಟಡಗಳನ್ನು ಕಟ್ಟಿಸಲು ಹಣ ಒದಗಿಸಬೇಕು. ಸರಕಾರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಎಷ್ಟು ಖರ್ಚು ಬೇಕೋ ಅಷ್ಟನ್ನೂ ಮಾಡಿಯೇ ತೀರಬೇಕು. ಅದರಿಂದ ದೇಶಕ್ಕೂ ಒಳ್ಳೆಯದು. ಇದು ಬಹು ಮುಖ್ಯವಾದ ವಿಷಯಗಳು. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಗೋಪಾಲ ಸಾಲೆನ್ನ (ಮೂಡಬಿದ್ರಿ).—ಸ್ವಾಮೀ ಪುಟ 48 ರಲ್ಲಿ, ಡಿಮ್ಯಾಂಡು 25 ರಲ್ಲಿ ಏಳನೇ ಐಟಂನಲ್ಲಿ "Integrated services for Child Welfare Demonstration Project at Anekal and Sarjapur Blocks and etc .. ಎನ್ನುವುದಕ್ಕಾಗಿ 2,91,800 ರೂಪಾಯಿಗಳಷ್ಟು ಈ ಸ್ಪೆಷಲ್ ಪ್ರಾಜೆಕ್ಟಿಗಾಗಿ ತಂದು, ಇಷ್ಟು ದೊಡ್ಡ ಯೋಜನೆ ಹಾಕಿಕೊಂಡು ಅರವತ್ತು ಹಳ್ಳಿಗಳಲ್ಲಿ ಹನ್ನೆರಡು ಸೆಂಟರುಗಳನ್ನು ತೆರೆಯಬೇಕೆಂದಿದ್ದೇವೆ ಎಂದು ಇದರಲ್ಲಿ ಹೇಳಿದ್ದಾರೆ. ಆನೇಕಲ್‌ನಲ್ಲಿ ಮಾತ್ರವಲ್ಲ. ಇಂತಹ ಯೋಜನೆಯನ್ನು ದೇಶದ ಎಲ್ಲ ಕಡೆಗಳಲ್ಲಿಯೂ ಮಕ್ಕಳ ಅಭಿವೃದ್ಧಿಗಾಗಿ ಇಡೀ ರಾಜ್ಯಕ್ಕೆ ಅನುಸರಿಸುವಂತಹ ಯೋಜನೆ ನಮ್ಮ ಸೋಷಿಯಲ್ ವೆಲ್‌ಫೇರು ಇಲಾಖೆಯಲ್ಲೂ ಇದೆ. ಇಲ್ಲಿ ಒಂದು ವಾಲಂಟರಿ ಮಂಡಲಿಗೆ ವಹಿಸಿಕೊಡಬೇಕೆಂದು ಇದರಲ್ಲಿ ಹೇಳಲಾಗಿದೆ. ಇದಕ್ಕಾಗಿ ಕೇಂದ್ರ ಸರಕಾರ ಹಣ ಒದಗಿಸಬಹುದು.

ಶ್ರೀ ಬಿ. ಡಿ. ಜತ್ತಿ.—ಎಲ್ಲ ಹಣವನ್ನೂ ಸಂಪೂರ್ಣವಾಗಿ ಕೇಂದ್ರ ಸರಕಾರದವರೇ ಕೊಡುತ್ತಾರೆ.

ಶ್ರೀ ಎಸ್. ಗೋಪಾಲ ಸಾಲೆನ್ನ.—ಕೇಂದ್ರ ಸರಕಾರ ಕೊಡಬಹುದು. ಆದರೆ ಮಕ್ಕಳ ಅಭಿವೃದ್ಧಿಗಾಗಿ ಸೋಷಿಯಲ್ ವೆಲ್‌ಫೇರು ಇಲಾಖೆ ಇದೆ. ಇಲ್ಲಿ ಒಂದು ಬೇರೆ ವಾಲಂಟರಿ ಮಂಡಲಿಗೆ ಹಣವನ್ನು ಹಂಚಲಾಗುತ್ತಿದೆ ಎಂದಿದೆ. ಇದಕ್ಕೆ ಬದಲಾಗಿ ಯೋಜನೆಗಳನ್ನು ಮಾಡಿ ಸರಕಾರದ ಮೂಲಕವೇ ಪೂರ್ತಿಯಾಗಿ ಇದರ ಕೆಲಸ ಮಾಡುವುದೊಳ್ಳೆಯದು. ಇಂತಹ ಯೋಜನೆಗಳನ್ನು ದೇಶದ ಎಲ್ಲ ಭಾಗಗಳಿಗೂ ಹಾಕಿಕೊಂಡು ಮಾಡುವುದು ಒಳ್ಳೆಯದು. ಈ ತರಹ ಒಂದೇ ಮಂಡಳಿಗೆ ಕೊಡುವ ರೀತಿಯಲ್ಲಿ ಯೋಜನೆಯಾಗಬಾರದು. ಕೇವಲ ಪಟ್ಟಣಗಳಿಗಾಗಿ ಯೋಜನೆಗಳನ್ನು ಹಾಕುವುದೊಂದೇ ಅಲ್ಲ. ಸಂಸ್ಥಾನದ ಎಲ್ಲ ಮಕ್ಕಳಿಗೂ ಅನುಕೂಲವಾಗುವಂತಹ ಯೋಜನೆಗಳನ್ನು ಮಾಡುವುದು ಸರಿಯಾಗಿರುತ್ತದೆ.

ಇನ್ನು ಸಿಬ್ಬಂದಿ ವಿಚಾರವಾಗಿ ಹೇಳುವಾಗ ಡಿ. ಎ. ಎಂದು ಈಚೆಗೆ ಸರಕಾರ ಕೊಟ್ಟರು. ಅದು 5 ರೂಪಾಯಿ ಎಂದು ಕೊಟ್ಟರು—ಇನ್ನೂ ಎಷ್ಟೋ ಸಿಬ್ಬಂದಿಗೆ ಸಿಕ್ಕಿಲ್ಲ ಎಂದು ಹೇಳುತ್ತೇನೆ. ಸಾಮಾನ್ಯ ಜನರ ಸ್ಥಿತಿ ಎಷ್ಟು ಕಷ್ಟ ಎನ್ನುವುದನ್ನು ತಿಳಿದು ಸರಕಾರ ಸ್ವಲ್ಪ ಮನಸ್ಸಿನಲ್ಲಿಟ್ಟುಕೊಂಡು, ಯೋಜನೆಗಾಗಿ ಲಕ್ಷಾಂತರ ರೂಪಾಯಿಗಳಷ್ಟು ಎಂದು ಮಂಜೂರು ಮಾಡಿದರೂ ಅದು ಕಾರ್ಯಗತವಾಗುವಂತೆ ಮಾಡಬೇಕು. ಇದರಲ್ಲಿ ಸಿಬ್ಬಂದಿಯವರ ಹಿತವನ್ನೂ ಹೆಚ್ಚಾಗಿ ಮನಸ್ಸಿನಲ್ಲಿಟ್ಟುಕೊಂಡು ಯೋಜನೆ ಯಶಸ್ವಿಯಾಗಿ ಕಾರ್ಯಗತವಾಗಲು ಇವರಿಗೆ ಸಹಾಯ ಮಾಡಿದ್ದಾರೆ. ಲಂಚ ಮತ್ತಿತರ ಕಷ್ಟಗಳನ್ನು ಎದುರಿಸಲಿಕ್ಕೆ ಸಾಕು. ಲಂಚ ರುಷುವತ್ತುಗಳನ್ನು ಕಡಿಮೆ ಮಾಡಲಿಕ್ಕೂ ಇದನ್ನು ನೋಡಿ ಮಾಡಬೇಕಾಗಿದೆ.

ಆ ಕಡೆ ಸರಕಾರ ಗಮನ ಕೊಟ್ಟಂತೆ ಕಾಣುವುದಿಲ್ಲ. ಹೀಗೆ ವಿಷಯವನ್ನೆಲ್ಲಾ ಗಮನದಲ್ಲಿಟ್ಟುಕೊಳ್ಳದೆ ವೆಚ್ಚ ಮಾಡುವಂಥಾದ್ದು, ಪ್ರತಿಸಲ ಕೇಳಿಕೆಗಳನ್ನು ಮಂಡಿಸುವಂಥಾದ್ದು ಸರಕಾರ ಆದಷ್ಟು ಕಡಮೆ ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

4-30 P.M.

† ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಸ್ವಾಮಿ, ಈ ಹೆಚ್ಚುವರಿ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ವಾಕ್ಯಗಳನ್ನು ಹೇಳಲು ಇಷ್ಟಪಡುತ್ತೇನೆ.

ಎಂ. ಎಸ್. ಕೆ. ಮಿಲ್ಸಗೆ ಏನು ಹಣ ಕೊಟ್ಟಿದ್ದೀರಿ. ಆ ವಿಷಯದಲ್ಲಿ ಕೆಲವು ತೀವ್ರ ಅನುಮಾನಗಳು ನಮಗೆ ಉಂಟಾಗಿವೆ. ಕೊಡುವುದಕ್ಕೆ ವಿಶೇಷ ಕಾರಣಗಳೇನಿದ್ದವು, ಹಣ ಹೇಗೆ ಖರ್ಚಾಗಿದೆ, ಈ ಮಿಲ್ಲು ಯಾವ ರೀತಿಯಲ್ಲಿ ಕೆಲಸ ಮಾಡುತ್ತಾ ಇದೆ, ಅದರ ಆಸ್ತಿಪಾಸ್ತಿಗಳೇನು ಮತ್ತು ಇದರಿಂದ ರಾಜ್ಯದ ಮಟ್ಟಿಗೆ ಬರಬೇಕಾದ ಲಾಭ ಅಥವ ನಷ್ಟ ಏನು ಅನ್ನುವುದನ್ನು ಸರಕಾರದವರು ಸಭೆಗೆ ಹೇಳಿ ನಂತರ ಹಣವನ್ನು ಪಡೆಯಬಹುದು.

ಅಕ್ಕಸಾಲಿಗರಿಗೆ ಅನೇಕ ಸೌಲಭ್ಯಗಳನ್ನು ಕೊಡುತ್ತಿದ್ದೇವೆ ಅಂತ ಹೇಳಿ ಮಾನ್ಯ ಉಪಮಂತ್ರಿಗಳಾದ ರಾಮಚಂದ್ರರವರು ಭಾಷಣಗಳನ್ನು ಮಾಡಿರುವುದನ್ನು ಕೇಳಿದ್ದೇನೆ, ಪತ್ರಿಕೆಗಳಲ್ಲಿಯೂ ಓದಿದ್ದೇನೆ. ವಾಸ್ತವವಾಗಿ ಅಕ್ಕಸಾಲಿಗರು ಇವತ್ತು ಸುವರ್ಣ ನಿಯಂತ್ರಣದಿಂದ ಬೀದಿ ಪಾಲಾಗಿದ್ದಾರೆ, ಊರು ಊರು ಅಲೆಯುವ ಪರಿಸ್ಥಿತಿಗೆ ಬಂದಿದ್ದಾರೆ. ಅವರಿಗೆ ಭೂಮಿ ಸಿಕ್ಕಿಲ್ಲ ; ಕೈಗಾರಿಕೆಗಳಲ್ಲಿ ಯಾವ ರೀತಿಯ ಕೆಲಸವೂ ಸಿಕ್ಕಿಲ್ಲ. ವಾಸ್ತವವಾಗಿ ಸರಕಾರಕ್ಕೆ ಯಾವ ಒಂದು ಕೆಲಸವನ್ನೂ ಕೊಡುವುದಕ್ಕಾಗುವುದಿಲ್ಲ ಎಂದು ನಾನು ಅನುಭವದಿಂದ ಹೇಳುತ್ತೇನೆ. ಈ ರೀತಿಯ ಒಂದು ಪ್ರಚಾರದಿಂದ ಅಕ್ಕಸಾಲಿಗರು ಹೊಟ್ಟೆ ತುಂಬಿಕೊಳ್ಳುವುದಕ್ಕೆ ಆಗುವುದಿಲ್ಲ. ಪ್ರಚಾರವನ್ನು ಕಡಿಮೆಮಾಡಿ ವಾಸ್ತವವಾಗಿ ಅವರಿಗೆ ಏನಾದರೂ ಸಹಾಯ ಮಾಡುವುದಕ್ಕೆ ಸರಕಾರ ತೀವ್ರ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಅವರ ಪರವಾಗಿ ನಾನು ಕೇಳಿಕೊಳ್ಳುತ್ತೇನೆ.

ವಿದ್ಯುಚ್ಛಕ್ತಿ ಬೋರ್ಡಿಗೆ 124 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಕೇಳಿದ್ದೀರಿ. ಅದನ್ನು ಕೇಂದ್ರದಿಂದ ಪಡೆಯುತ್ತೀರಿ. ಹಳ್ಳಿಗಾಡುಗಳಲ್ಲಿ ದೀಪಗಳನ್ನು ಕೊಡುವುದಕ್ಕೆ, ಮತ್ತಿತರ ನೀರಾವರಿ ಸೌಲಭ್ಯಗಳಿಗಾಗಿರುವ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಈ ಹಣ ಕೇಳಿದ್ದೀರಿ. ವಿದ್ಯುಚ್ಛಕ್ತಿ ಬೋರ್ಡಿಗೆ ಹಣ ಹೇಳುವುದಕ್ಕೆ ಮುಂಚೆ ಅವರಲ್ಲಿರತಕ್ಕಂಥ ಹಣದ ವಿಷಯ, ಅದನ್ನು ಎಲ್ಲೆಲ್ಲಿ ಇಟ್ಟಿದ್ದಾರೆ, ಯಾವ ರೀತಿ ವಿನಿಯೋಗ ಮಾಡಿಕೊಂಡಿದ್ದಾರೆ ಅನ್ನುವುದನ್ನು ಸಾರ್ವಜನಿಕರ ಹಾಗೂ ಈ ಸಭೆಯ ಮುಂದಿಡಬೇಕು. ಇದನ್ನು ಬೇಗನೇ ಸರಕಾರ ಪೂರ್ಣಗೊಳಿಸಿದನಂತರ ಡಿಮ್ಯಾಂಡನ್ನು ಈ ಸಭೆಯ ಮುಂದೆ ತರಬೇಕು.

ಇನ್ನು ಉಪಾಧ್ಯಾಯರುಗಳಿಗೆ ಬಹಳ ದಿವಸ ಸಂಬಳ ಸಾರಿಗೆಗಳನ್ನು ಕೊಡದೆ ಇರತಕ್ಕಂಥ ಕೆಲವು ಸಂದರ್ಭಗಳನ್ನು ಸಾರ್ವಜನಿಕರ ಗಮನಕ್ಕೆ ತಂದಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ ಸ್ಥಳೀಯ ಸಂಸ್ಥೆಗಳ ಅಧೀನದಲ್ಲಿ ಕೆಲಸಮಾಡತಕ್ಕ ಉಪಾಧ್ಯಾಯರು ಅನೇಕ ರೀತಿಯಲ್ಲಿ ಕೇಳಿಕೊಂಡಿದ್ದಾರೆ.

(ಶ್ರೀ ಎಸ್. ಗೋಪಾಲಗೌಡ)

ತಾಲ್ಲೂಕು ಬೋರ್ಡು ಮತ್ತಿತರ ಜಿಲ್ಲಾ ಬೋರ್ಡುಗಳ ಅಧೀನದಲ್ಲಿ ನಡೆಯುತಕ್ಕ ಶಾಲಾ ಉಪಾಧ್ಯಾಯರುಗಳಿಗೆ ಸರಕಾರ ಕೊಟ್ಟಿರತಕ್ಕ ತುಟ್ಟಿಭತ್ಯವಾಗಲಿ, ಹೆಚ್ಚಿನ ಸಂಬಳ ಸಾರಿಗೆ ಸ್ಕೇಲಾಗಲಿ ದೊರೆಯುತ್ತಿಲ್ಲ. ಸರಕಾರದವರು ಅದನ್ನು ಅವರಿಗೆ ಆದಷ್ಟು ಬೇಗನೆ ಪೂರೈಸಬೇಕು.

ಇನ್ನು ಗುಲ್ಬರ್ಗ ಕಡೆಗೆ ಸ್ವಲ್ಪ ಹಣ ಹೆಚ್ಚಾಗಿ ಬೇರೆ ಬೇರೆ ಕಾರ್ಯಗಳಿಗಾಗಿ ಹೋಗುವ ಹಾಗೆ ಕಂಡು ಬರುತ್ತಿದೆ. ಗುಲ್ಬರ್ಗ ಹಿಂದುಳಿದ ಪ್ರದೇಶ ಎಂದು ನಾನು ಒಪ್ಪುತ್ತೇನೆ. ಅಲ್ಲಿ ಅನೇಕ ಕೆಲಸಗಳು, ಕಾಂಗಾರಿಗಳೂ ಆಗಬೇಕು. ಆದರೆ ಮಲೆನಾಡು ಪ್ರದೇಶ, ಕೂರ್ಗ ಅಥವ ಎಳಂದೂರು ಅಥವಾ ಬಿದರೆ ತುದಿ, ಅಥವ ರಾಯಚೂರು ತುದಿ, ಈ ತುದಿಗಳನ್ನು ಬಿಟ್ಟು ಗುಲ್ಬರ್ಗ ಜಿಲ್ಲೆಗೆ ಬೇರೆ ಬೇರೆ ಐಟಮ್‌ಗಳ ಮೂಲಕ ಹಣ ಹೋಗುವುದಾದರೆ, ಅದು ರಾಜ್ಯಕ್ಕೆ ಸ್ವಲ್ಪ ಅನ್ಯಾಯ ಮಾಡಿದಂತೆ ಆಗುತ್ತದೆ. ಆದ್ದರಿಂದ ಗುಲ್ಬರ್ಗದಿಂದ ಬಂದಿರತಕ್ಕಂಥ ಮಾನ್ಯ ಸದಸ್ಯರೂ ಮತ್ತು ಕ್ಯಾಬಿನೆಟ್ಟಿನಲ್ಲಿರತಕ್ಕಂಥ ಮಂತ್ರಿಗಳೂ ಸ್ವಲ್ಪ ಬೇರೆ ಕಡೆಗೂ ಗಮನ ಕೊಡಬೇಕು. ಹಣ ಹಂಚಿಕೆಯಾಗುವಾಗ ಸ್ವಲ್ಪ ಸಮದೃಷ್ಟಿ ಕ್ಯಾಬಿನೆಟ್ಟಿನಲ್ಲಿರಬೇಕು. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಅನೇಕ ಕಾಂಗಾರಿಗಳು ಅರ್ಧಕ್ಕೇ ನಿಂತುಹೋಗಿವೆ. ಕೆಲವು ಸ್ಥಳೀಯವಾದ ಗುಂಪು ರಾಜಕೀಯದಿಂದ ಆಗಬೇಕಾದ ಸೇತುವೆಗಳೂ ಆಗದೆ ನಿಂತಿವೆ: ರಸ್ತೆಗಳೂ ಆಗದೆ ನಿಂತಿವೆ. ಮತ್ತು ಇನ್ನೂ ಅನೇಕ ಕೆಲಸಗಳು ಆಗದೆ ಇರತಕ್ಕ ಉದಾಹರಣೆಗಳಿವೆ. ಆದ್ದರಿಂದ ಮಲೆನಾಡು ಪ್ರದೇಶದ ಕಡೆಗೆ ಮಂತ್ರಿಮಂಡಲದ ದೃಷ್ಟಿ ಹರಿಯಬೇಕಾದ್ದು ಬಹಳ ಅಗತ್ಯ.

ಈ ಸಂದರ್ಭದಲ್ಲಿ ಇಷ್ಟು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ. ಇನ್ನು ನಾನು ಮಂತ್ರಿಗಳ ಮೇಲೆ ಮಾಡಿದ ಕೆಲವು ಆಪಾದನೆಗಳ ಬಗ್ಗೆ ಸಾಕ್ಷ್ಯವನ್ನು ಸಭೆಯ ಮುಂದೆ ಇಡಬೇಕೊ ಅಥವಾ ಅಥವ ಅಧ್ಯಕ್ಷರಿಗೆ ಕೊಡಬೇಕೊ ಗೊತ್ತಾಗಲಿಲ್ಲ. ಸಾಮಾನ್ಯವಾಗಿ ಏನಾದರೂ ವಿಚಾರಣೆ ಸಮಿತಿಯನ್ನು ನೇಮಕ ಮಾಡುವುದಾದರೆ ನಾನು ಅಲ್ಲಿ ಬಂದು ಸಾಕ್ಷ್ಯ ಕೊಡಬೇಕೆನ್ನುವುದು ಸಾಮಾನ್ಯ ನಿಯಮ. ತಾವು ಕೇಳುವುದಾದರೆ ಇವತ್ತು ನನ್ನ ಹತ್ತಿರ ಸಾಕ್ಷ್ಯವಿದೆ. ನಾನು ಕೊಡಲು ತಯಾರು ಇದ್ದೇನೆ. ಅದನ್ನು ಈಗ ಕೊಡುವುದಕ್ಕೆ ಸಿದ್ಧನಿದ್ದೇನೆ. ಆದರೆ ಇನ್ನೂ ಕೆಲವು ಆಧಾರಗಳು ಬೇಕು. ಅವು ಪೂರ್ತಿಯಾಗಬೇಕಾದರೆ ಸ್ವಲ್ಪ ಕಾಲ ಬೇಕು. ಮಾನ್ಯ ಮುಖ್ಯಮಂತ್ರಿಗಳಿಗೆ ಕೊಡಬೇಕೊ, ಯಾರಿಗೆ ಕೊಡಬೇಕೆಂದು ತಿಳಿಸಿದ್ದಲ್ಲಿ ಕೊಡುತ್ತೇನೆ. ಸ್ವಲ್ಪ ಕಾಲಾವಕಾಶ ಕೊಟ್ಟರೆ ಸರಿಯಾಗಿ ಕಾಗದ ಪತ್ರಗಳನ್ನು ಸ್ವಲ್ಪ ಒಳ್ಳೆಯ ರೀತಿಯಲ್ಲಿ ಒದಗಿಸುವುದಕ್ಕೆ ಅವಕಾಶವಾಗುತ್ತದೆ.

Mr. SPEAKER.—Whatever information the member can give it may be sent to the Chief Minister and a copy given to me. I have of course said that it should be given within two days, but the Hon'ble Member may take some more time, if necessary. The member referred to 1 crore and 24 lakhs of the Electricity Board.

ಶ್ರೀ ಎಸ್. ಗೋಪಾಲ ಗೌಡ.—ಇವತ್ತು ಕೊಡಬೇಕು ಎಂದು ಆದೇಶವಿತ್ತು.

Sri B. D. JATTI.—That represents the deduction as assistance from the Government of India. It had to be passed to the Electricity Board for rural electrification.

ಶ್ರೀ ಎಸ್. ಗೋಪಾಲ ಗೌಡ.—ಕೇಂದ್ರವಾಗಲಿ, ನೀವಾಗಲಿ, ಹಣಕೊಡುವ ಮುಂಚೆ, ಅವರ ವ್ಯವಹಾರ ನೋಡಿ ಕೊಡೋಣ ಅಂತ.

† ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸ್ವಾಮಿ, ನಾನು ಡಿಮ್ಯಾಂಡು 20ರ ಮೇಲೆ ಮಾತನಾಡುತ್ತೇನೆ. ವ್ಯವಸಾಯದ ಇಲಾಖೆಯಿಂದ ಮೈಸೂರು ಸ್ಟೇಟ್ ಕೋ-ಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿಗೆ ಗೊಬ್ಬರ ಮುಂತಾದ ವ್ಯವಸಾಯ ಪದಾರ್ಥಗಳನ್ನು ಹಂಚುವ ಕೆಲಸವನ್ನು ವರ್ಗಾಯಿಸಲಾಗಿದೆ. ಇದರಲ್ಲಿ ಶೇಕಡ ಒಂದೂವರೆಯಷ್ಟನ್ನು ಹ್ಯಾಂಡ್ಲಿಂಗ್ ಛಾರ್ಜಿಗಾಗಿ ಅಂತ ಕೊಡುತ್ತಾರೆ. ಅಮೇಲೆ ಟ್ರಾನ್ಸ್‌ಪೋರ್ಟ್ ಚಾರ್ಜು ಅಂತ 1 ಟನ್ನಿಗೆ ರೂಪಾಯಿ 10 ಕೊಡುತ್ತಾರೆ. ಆಮೇಲೆ ಸಬ್‌ಸಿಡಿ 10 ರೂಪಾಯಿ ಕೊಡುತ್ತಾರೆ. ಈ ತರಹ 31ವರೆ ರೂಪಾಯಿ ಕೊಡುತ್ತಾರೆ. ಇವು ವ್ಯವಸಾಯದ ಇಲಾಖೆಗೆ ಸೇರಿರತಕ್ಕಂಥ ಗೊಡೌನುಗಳು; ರೈತನಿಗೆ ಕೊಡತಕ್ಕಂಥ ಗೊಬ್ಬರದ ಮೇಲೆ ಇಷ್ಟು ಸಬ್‌ಸಿಡಿ ಕೊಡುವುದು ಬಹಳ ಅನ್ಯಾಯ. ಇಷ್ಟೊಂದು ಕೊಟ್ಟೂ ಇಲಾಖೆಯಲ್ಲಿ ವಿಪರೀತ ಅನ್ಯಾಯವಾಗಿರುತ್ತದೆ. 30 ಲಕ್ಷ ರೂಪಾಯಿವರೆಗೆ ಹಣ

ದುರ್ವಿನಿಯೋಗವಾಗಿದೆ. ಈ ಒಂದು ಪಕ್ಷದ ಸದಸ್ಯರು ಅಧ್ಯಕ್ಷರಾದ ಮೇಲೆ ಹೀಗಾಗಿದೆ. ಇವರ ಆಸ್ತಿಪಾಸ್ತಿಗಳು ಏನು ?

ಈ ಸೊಸೈಟಿ ಅಧ್ಯಕ್ಷರುಗಳ ಹಿಂದಿನ ಆಸ್ತಿಪಾಸ್ತಿಗಳೇನಿದ್ದುವು. ಇವೊತ್ತು ಏನಿದೆ ಎನ್ನುವುದನ್ನು ಸ್ವಲ್ಪ enquiry ಮಾಡಿದರೆ ಬಹಳ ಚೆನ್ನಾಗಿ ವೇದ್ಯವಾಗುತ್ತದೆ. ವಿವರಗಳನ್ನೂ ಹೇಳು ಎಂದರೆ ಹೇಳುತ್ತೇನೆ ಸ್ವಾಮಿ. ಈ ರೀತಿ ಸುಮಾರು 30-40 ಲಕ್ಷ ರೂಪಾಯಿ ದುರುಪಯೋಗವಾಗಿದೆ ಎಂದು ಕೇಳಿದ್ದೇನೆ. ನಮ್ಮ ಊರಿನಲ್ಲಿ ಪಂಚಾಯಿತಿ ಕಂಟ್ರಾಕ್ಟರಾಗಿ 50 ರೂಪಾಯಿ, ನೂರು ರೂಪಾಯಿ ಒಳಗೆ ಬಿಲ್ ತೆಗೆದುಕೊಳ್ಳುತ್ತಿದ್ದರು. ಈಗ ಒಂದು ದೊಡ್ಡ ಸಂಸ್ಥೆಯನ್ನು ಅವರ ಕೈಗೆ ಕೊಟ್ಟಿದ್ದಾರೆ. ರೈತರಿಗೆ ನ್ಯಾಯವಾಗಿ ಸಲ್ಲಬೇಕಾದ ಗೊಬ್ಬರ ಮತ್ತು ಇತರ ವಸ್ತುಗಳು ಇಂಥವರಿಗೆ ಹೋಗಿ ಹಣ ದುರುಪಯೋಗವಾಗುತ್ತಿದೆ. ನಿನ್ನೆಯ ದಿವಸ ಮುಖ್ಯ ಮಂತ್ರಿಗಳು ಯಾರೂ ರಾಜಕೀಯವನ್ನೂ ಉಪಯೋಗಿಸಿಕೊಳ್ಳುವುದಿಲ್ಲವೆಂದು ಹೇಳಿದರು. ಈ ಒಂದು ವಿಷಯವನ್ನು ನೋಡಿದರೆ ಯಾರು ರಾಜಕೀಯವನ್ನೂ ಉಪಯೋಗಿಸಿಕೊಂಡಿದ್ದಾರೆ ಎನ್ನುವುದು ಅಧ್ಯಕ್ಷರ ಮನಸ್ಸಿಗೆ ಚೆನ್ನಾಗಿ ಗೊತ್ತಾಗುತ್ತದೆ. ಇದನ್ನು ಮಾನ್ಯ ಮಂತ್ರಿಗಳು ಗಮನಕ್ಕೆ ತೆಗೆದುಕೊಳ್ಳಬೇಕು ಮತ್ತು ಸಹಕಾರ ಮಂತ್ರಿಗಳು ಗಮನಕೊಡಬೇಕು.

ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಸಿಬ್ಬಂಧಿಗಾಗಿ ಕೆಲವು ಹಣವನ್ನು ಕೇಳಿದ್ದಾರೆ, ಕೆಲವು ಸರ್ಕಲ್‌ಗಳನ್ನು ಹೊಸದಾಗಿ ತೆಗೆಯುವುದಕ್ಕಾಗಿ ಇರುವ ಇಂಜಿನಿಯರುಗಳಿಗೇ ಕೆಲಸವಿಲ್ಲದಿರುವಾಗ ಹೊಸದಾಗಿ ಸರ್ಕಲ್ ಮಾಡಲು ಹಣ ಕೇಳಿದ್ದಾರೆ. ಕೆಲಸಕ್ಕೆ ಖರ್ಚಾಗವುದಕ್ಕಿಂತ ಹೆಚ್ಚಾಗಿ ಸಿಬ್ಬಂದಿಗೆ ಖರ್ಚು ಮಾಡುತ್ತಿದ್ದಾರೆ. ಈ ಇಲಾಖೆಯಲ್ಲಿ ಕೆಲಸಕ್ಕೆ ಸೇರಿ ಮೂರು ನಾಲ್ಕು ತಿಂಗಳಾಗಿದ್ದರೂ ಒಬ್ಬ ಶಾಸನ ಸಭಾಸದಸ್ಯರನ್ನು ಅಥವಾ ಬೇರೆ ಯಾರನ್ನಾರೂ ಹಿಡಿದುಕೊಂಡು ಬೆಂಗಳೂರಿಗೆ ಸುತ್ತುತ್ತಿರುತ್ತಾರೆ. ಅನ್ಯಾಯವಾಗಿ ಹಣ ಖರ್ಚಾಗುತ್ತಿದೆ ಎಂದರೂ ಗಮನ ಕೊಡುವುದಿಲ್ಲ. ಈಗ ನಾವು ಹಾಸನದಿಂದ ಮಂಗಳೂರುವರೆಗೆ ಹೋಗಿ ನೋಡಿದರೆ ಯಾವ ಮೈಲಿಯಲ್ಲಿಯೂ ಅಸಿಸ್ಟೆಂಟ್ ಇಂಜಿನಿಯರುಗಳಾಗಲೀ, ಎಕ್ಸಿಕ್ಯೂಟಿವ್ ಇಂಜಿನಿಯರಾಗಲಿ ಇರುವುದಿಲ್ಲ. 125 ಜನ ಜೂನಿಯರ್ ಇಂಜಿನಿಯರುಗಳು, 25 ಜನ ಅಸಿಸ್ಟೆಂಟ್ ಇಂಜಿನಿಯರುಗಳು ಮೂರು ಜನ ಎಕ್ಸಿಕ್ಯೂಟೀವ್ ಇಂಜಿನಿಯರುಗಳು ಮತ್ತು ಇತರ ಸಹಾಯಕ ಸಿಬ್ಬಂದಿಯನ್ನು ಒಂದು ರಸ್ತೆಗಾಗಿ ಹಾಕಿದ್ದಾರೆ. ಏಕೆ ಹೀಗೆ ಹಾಕಿದ್ದಾರೆ, ಅವರಿಗೆ ಕೆಲಸವಿದೆಯೋ ಎಂದರೆ ಒಂದೊಂದು ಡಿವಿಜನ್ನಿನಲ್ಲಿ ಇಬ್ಬರು ಮಾಡುವ ಕೆಲಸವೂ ಇಲ್ಲ. ಅಲ್ಲಿ ಅವರಿಗೆ ಮೂರುಕಾಸಿನ ಕೆಲಸ ಸಹ ಇಲ್ಲ. ಅಂಥ ಕಡೆ ಹೆಚ್ಚಾಗಿರುವ ಜನರನ್ನು ಏಕೆ ತೆಗೆಯಲಿಲ್ಲವೆಂದರೆ ಬೇರೆ ಎಲ್ಲಿಗೆ ಹಾಕೋಣ ಎಂದು ಕೇಳುತ್ತಾರೆ ಹೀಗಿದ್ದರೂ ಹೊಸದಾಗಿ ಹಣ ಕೇಳುವುದು ಏಕೆ ?

'A' ಕ್ಲಾಸ್ ಕಂಟ್ರಾಕ್ಟರುಗಳು ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿದ್ದಾರೆ. ಒಂದು ಕೆಲಸಕ್ಕೆ ಒಬ್ಬ 70 ರೂಪಾಯಿ ಟೆಂಡರ್ ಕೊಡುತ್ತಾನೆ, ಮತ್ತೊಬ್ಬ 50 ರೂಪಾಯಿಗೆ ಕೊಡುತ್ತಾನೆ. ಇದರಲ್ಲಿ 70 ರೂಪಾಯಿ ಕೊಟ್ಟಿರುವವನಿಗೇ ಏನಾದರೂ ಮಾಡಿ ಕೊಡಿಸಬೇಕು ಎಂದು ಪ್ರಯತ್ನ ಪಡುತ್ತಾರೆ. ಅದೇ 50 ರೂಪಾಯಿಗೆ 70 ರೂಪಾಯಿ ಕೊಟ್ಟಿದ್ದವನಿಗೆ ಕೆಲಸ ವಹಿಸಿ ಪುನಃ ರೀ-ಟೆಂಡರ್ ಕರೆಯುತ್ತಾರೆ. ಯಾರಿಗೆ favouritism ತೋರಿಸಬೇಕು ಎಂದು ಅದನ್ನೇ ಯೋಚನೆ ಮಾಡುತ್ತಾರೆ. ಟೆಂಡರುಗಳನ್ನು ಕರೆಯುವಾಗ samples ತರಿಸಿ ತಮ್ಮ ಆಫೀಸಿನಲ್ಲಿಟ್ಟುಕೊಂಡು ಅಂಥ quality ಇರುವ ಪದಾರ್ಥಗಳನ್ನೇ ಉಪಯೋಗಿಸಬೇಕು.

ಅದರ ಶಕ್ತಿ ಹೇಗಿರಬೇಕು, ಏನು ಎಂಬುದನ್ನೆಲ್ಲ ವ್ಯವಸ್ಥೆ ಮಾಡಿ ತಹಬಂದಿಗೆ ತಂದರೆ ಕೆಲಸಗಳು ಚೆನ್ನಾಗಿ ನಡೆಯುತ್ತವೆ. ಈರೀತಿ ಮಾಡಿದರೆ ಇಂಜಿನಿಯರಿಂಗ್ ಇಲಾಖೆಯಲ್ಲಿ ಕಾಲು ಭಾಗ ಹಣವನ್ನು ಉಳಿಸಬಹುದು. ಹಣಕಾಸಿನ ಮಂತ್ರಿಗಳು ನನಗೂ ಅದಕ್ಕೂ ಸಂಬಂಧವಿಲ್ಲವೆಂದು ಹೇಳುತ್ತಾರೆ. ನ್ಯಾಯವಾದ ರೀತಿಯಲ್ಲಿ ಖರ್ಚು ಮಾಡಿದರೆ ಸರಿ. ಅನ್ಯಾಯ ನಡೆಯುತ್ತಿದೆ ಎಂದು ಹೇಳಿದರೆ ಏಕೆ ಕಣ್ಣು ಬಿಟ್ಟು ನೋಡಬಾರದು ? ಅನ್ಯಾಯವಾಗುತ್ತಿದ್ದರೆ ಅದಾಗದಂತೆ ಮಾಡಬೇಕು ಎಂದು ಇವರ ಹತ್ತಿರ ಹೇಳಿದರೆ, ಕೆಲವೊಂದು facts ಸಹಿತ ಹೇಳಿದರೂ ಕೂಡ ನೀವು ಮುಖ್ಯಮಂತ್ರಿಗಳನ್ನು ನೋಡಿ, ಅವರನ್ನು ನೋಡಿ ಎಂದು ಹೇಳುತ್ತಾರೆ. ಅವರಿವರನ್ನು ನೋಡುವುದಕ್ಕೆ 3-4 ದಿವಸ ಟೈಂ ಸಿಕ್ಕುವುದಿಲ್ಲ.

ಶ್ರೀ ಬಿ. ಡಿ. ಜತ್ತಿ.—ಅವರು ನನ್ನ ಹತ್ತಿರ ಇಂಥ ಕೇಸೊಂದನ್ನು ತಂದು ಕೊಟ್ಟಿದ್ದರು. ಅದರಲ್ಲಿ ಸರ್ಕಾರಕ್ಕೆ ಹಾನಿಯಾಗದಂತೆ ನೋಡಿಕೊಂಡೆ. ಅದನ್ನು ಒಪ್ಪುತ್ತಾರೆಯೋ ಇಲ್ಲವೋ ?

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನ್ಯಾಯವಾದವನಿಗೆ ಕೆಲಸಮಾಡಲು ಅವಕಾಶ ಕೊಡಲಿಲ್ಲ ದೊಡ್ಡ ಕಂಟ್ರಾಕ್ಟರುಗಳನ್ನು ಹೇಗೆ ನೋಡುತ್ತೀರೋ ಹಾಗೆಯೇ ಸಣ್ಣ ಕಂಟ್ರಾಕ್ಟರುಗಳನ್ನು ಕಾಪಾಡಬೇಕಾದ್ದು ನಿಮ್ಮ ಕರ್ತವ್ಯವಲ್ಲವೇ ? ಅದುದರಿಂದ 'A' ದರ್ಜೆ ಕಂಟ್ರಾಕ್ಟ್‌ದಾರರನ್ನು ನಿರ್ಮೂಲ ಮಾಡಿಬಿಡಿ. ನೀವು ಕೊಡತಕ್ಕ ಪದಾರ್ಥದ ಮಟ್ಟಕ್ಕೆ ದುಡ್ಡು ಎಂದು ಹೇಳಿ

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ಯಾರಾದರೂ ಕೆಲಸಮಾಡಲಿ, ಇಂಥ ನೇರವಾದ ಮಾರ್ಗವನ್ನು ಹಿಡಿಯಿರಿ ಆಗ ಬೇಕಾದಷ್ಟು ಜನ ಕೆಲಸ ಮಾಡಲು ಮುಂದೆ ಬರುತ್ತಾರೆ.

† ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಹಣಕಾಸಿನ ಮಂತ್ರಿಗಳು ಸಭೆಯ ಮುಂದೆ ಸುಮಾರು 2 ಕೋಟಿ 30 ಲಕ್ಷ ರೂಪಾಯಿಗಳ ಸಪ್ಲಿಮೆಂಟರಿ ಬೇಡಿಕೆಯನ್ನಿಟ್ಟಿರುವುದನ್ನು ಸಂಪೂರ್ಣವಾಗಿ ಸ್ವಾಗತಿಸುತ್ತ ನನಗೆ ಗೊತ್ತಿರುವ ಮಟ್ಟಿಗೆ ಕೆಲವು ವಿಷಯಗಳನ್ನು ಈ ಸಭೆಯ ಮುಂದೆ ಇಡಬೇಕೆಂದು ಪ್ರಯತ್ನಪಡುತ್ತೇನೆ, ಸ್ವಾಮಿ.

ವಿರೋಧಪಕ್ಷದ ಅನೇಕ ಸದಸ್ಯರು ಅನೇಕ ಸಲಹೆಗಳನ್ನು ಮಾಡಿದ್ದಾರೆ. ಒಬ್ಬ ಸದಸ್ಯರು ಈ ಪುಸ್ತಕವನ್ನು ನೋಡಿದರೆ ಬಹುಶಃ ಇದು ಬಡ್ಜೆಟ್ಟಾಗಿದೆ. ಸಪ್ಲಿಮೆಂಟರಿ ಗ್ರಾಂಟ್ ಆಗಿರಲಾರದು ಎನ್ನುವ ಅಭಿಪ್ರಾಯವನ್ನು ಹೇಳಿದರು. ಈ ಸಪ್ಲಿಮೆಂಟರಿ ಎಸ್ಟಿಮೇಟಿನಲ್ಲಿ 12ಕ್ಕಿಂತ ಜಾಸ್ತಿ ಡಿಮಾಂಡ್‌ಗಳಿವೆ. ಈ ವರ್ಷದ ಬಡ್ಜೆಟ್ ವೇಳೆಯಲ್ಲಿ ಹಣಕಾಸಿನ ಮಂತ್ರಿಗಳು ತುಟ್ಟಿ ಭತ್ಯವನ್ನು ಜಾಸ್ತಿಮಾಡುವುದಾಗಿ ಏನೊಂದು ವಾಗ್ದಾನ ಮಾಡಿದ್ದರೋ ಅದರ ಪರಿಣಾಮವಾಗಿ ಬಡ್ಜೆಟ್ಟಿನಲ್ಲಿ ಅದಕ್ಕೆ ಅವಕಾಶವನ್ನು ಮಾಡಿಕೊಳ್ಳದೆ ಇದ್ದಂಥ ಅನಿವಾರ್ಯವಾದ ಒಂದು ಖರ್ಚನ್ನು ಈ ಸಭೆಯ ಒಪ್ಪಿಗೆಗಾಗಿ ನಮ್ಮ ಮುಂದೆ ಇಟ್ಟಿದ್ದಾರೆ.

ಮತ್ತೆ ಎರಡನೆಯ ತಕರಾರು ಹೇಳಿದ್ದೇನೆಂದರೆ ಈ ವರ್ಷ ಸಭೆಯ ಮುಂದೆ ಜೋತಾ ಬಡ್ಜೆಟ್ಟನ್ನಿಟ್ಟು ಈಗ ಪುನಃ ಎರಡುವರೆ ಕೋಟಿ ರೂಪಾಯಿಗಳನ್ನು ಕೇಳುತ್ತಿದ್ದಾರೆ. ಇದಕ್ಕೆ ಕಾರಣವೇನು ? ಇದನ್ನು ಹೇಗೆ ಖರ್ಚುಮಾಡುತ್ತಾರೆ ಎಂಬುದನ್ನೆಲ್ಲ ತಿಳಿಸಬೇಕಾಗಿತ್ತು ಎಂಬುದು. ನಾವು ನಮ್ಮ ಮುಂದಿರುವ ಡಿಮಾಂಡುಗಳನ್ನು ಒಂದೊಂದಾಗಿ ಪರಿಶೀಲನೆ ಮಾಡಿದರೆ ನಮಗೆ ಚೆನ್ನಾಗಿ ಗೊತ್ತಾಗುತ್ತದೆ. ರಾಜ್ಯಾಂಗದ 205ನೆಯ ವಿಧಿಪ್ರಕಾರವಾಗಿ ಸಪ್ಲಿಮೆಂಟರಿ ಬೇಡಿಕೆಗಳನ್ನು ಸಭೆಯ ಮುಂದೆ ಇಡುವುದಕ್ಕೆ ಅವಕಾಶವಿದೆ. ಅಷ್ಟು ಹಣವನ್ನು ಅದಕ್ಕೆ ಕೇಳಿರುವುದರಲ್ಲಿ ಅವರು ಕೊಟ್ಟಿರತಕ್ಕ ವಿವರಗಳನ್ನು ನಾವು ಓದಿದರೆ ಹೆಚ್ಚಿಗೆ ಹಣ ಕೇಂದ್ರ ಸರ್ಕಾರದಿಂದ ಬರುತ್ತದೆಂದಾಗುತ್ತದೆ. ಉದಾಹರಣೆಗೆ ತೆಗೆದುಕೊಳ್ಳುವುದಾದರೆ ಸೇಲಂ-ಬೆಂಗಳೂರು ರೈಲ್ವೆ ಲೈನ್ ಅಕ್ವಿಜಿಷನ್, ಹಾಸನ-ಮಂಗಳೂರು ರೈಲ್ವೆ ಲೈನ, ಮಂಗಳೂರು ಬಂದರು, ವಿದ್ಯುಚ್ಛಕ್ತಿ ಬೋರ್ಡಿಗೆ ಕೊಟ್ಟಿರತಕ್ಕ 1,24,00,000 ರೂಪಾಯಿ, ಅದೂ ಅಲ್ಲದೆ ನಾನಾ ಇಲಾಖೆಗಳಲ್ಲಿ ಪಂಚವಾರ್ಷಿಕ ಯೋಜನೆಯಲ್ಲಿ ಅಡಕವಾಗಿ ಕೇಂದ್ರ ಸರ್ಕಾರದಿಂದ ನಮಗೆ ಬರಬಹುದಾದ ಹಣವನ್ನು ಅವರು ಕೊಡುತ್ತಾರೆ. ಬಹುಶಃ ಕಾಲಕ್ಕೆ ಸರಿಯಾಗಿ ಕೇಂದ್ರ ಸರ್ಕಾರದಿಂದ ಅವರ ಮಂಜೂರಾತಿ ಹಾಗೂ ವಿವರಗಳು ನಮ್ಮ ಸರ್ಕಾರಕ್ಕೆ ಗೊತ್ತಾಗಿದ್ದ ಪಕ್ಷದಲ್ಲಿ ಇದೆಲ್ಲವನ್ನೂ ಕೂಡ ಆಯವ್ಯಯ ಪಟ್ಟಿಯಲ್ಲಿಯೇ ಸೇರಿಸಿ ಸಭೆಯ ಮುಂದೆ ಇಡಬಹುದಾಗಿತ್ತು. ಅನಿವಾರ್ಯವಾಗಿ ಆಗ ಮಂಜೂರಾತಿ ಪಡೆಯಲು ಆಗಲಿಲ್ಲವಾದ್ದರಿಂದ ಮಂಜೂರಾತಿಗಾಗಿ ಸಭೆಯ ಮುಂದೆ ಸಪ್ಲಿಮೆಂಟರಿ ಡಿಮ್ಯಾಂಡ್ ಮೂಲಕವಾಗಿ ತಂದಿದ್ದಾರೆ.

ಸರ್ಕಾರ ಈ ಸಭೆಯ ಹತೋಟಿಯಲ್ಲಿ ನಡೆಯಬೇಕಾದ ಖರ್ಚಿನ ವ್ಯವಹಾರದಲ್ಲಿ ವರ್ಷದಲ್ಲಿ ನಾಲ್ಕೈದು ಬಾರಿ ಅಥವಾ ಮೂರು ಬಾರಿ ಸಪ್ಲಿಮೆಂಟರಿ ಗ್ರಾಂಟ್ ಕೊಡಿ ಎಂದು ಬಂದರೆ ಆಯವ್ಯಯದ ವಿಚಾರದಲ್ಲಿ ಈ ಸಭೆಗೆ ಏನೊಂದು ಹತೋಟಿ ಇದೆ ಅದು ಬಹುಶಃ ಸಡಿಲವಾಗುತ್ತದೆಂದು ಒಂದು ಅಭಿಪ್ರಾಯವನ್ನು ಹೇಳಬಹುದು—ನಿಜವಾಗಿಯೂ ಅದು ಸತ್ಯವಾದುದು. ಆದರೆ ಅನಿವಾರ್ಯವಾಗಿ ಅನೇಕ ಸಂದರ್ಭಗಳಲ್ಲಿ ಸಭೆಯ ಮುಂದೆ ಸಪ್ಲಿಮೆಂಟರಿ ಬೇಡಿಕೆಗಳನ್ನು ತೆಗೆದುಕೊಂಡು ಬರಲೇಬೇಕಾಗುತ್ತದೆ. ಸಪ್ಲಿಮೆಂಟರಿ ಗ್ರಾಂಟಿಗಾಗಿ ಸಭೆಯ ಮುಂದೆ ತರುವುದು ಹೊಸದೇನೂ ಅಲ್ಲ. ನಾವು ಮಾಡತಕ್ಕ ರೀತಿ ನೀತಿಗಳಲ್ಲಿ ಅನೇಕ ವ್ಯತ್ಯಾಸಗಳಾಗುತ್ತವೆ. ಹೊಸ ಯೋಜನೆಗಳು ಕಾರ್ಯರೂಪಕ್ಕೆ ಬರುತ್ತವೆ. ಅದೆಲ್ಲವನ್ನೂ ಕೂಡ ಈಗ ನಮ್ಮ ಮುಂದೆ ಇಟ್ಟಿದ್ದಾರೆ. ಅದಕ್ಕೆ ವಿವರಗಳನ್ನು ಕೊಟ್ಟಿದ್ದಾರೆ. ಆದರೆ ಎರಡು ಮೂರು ಡಿಮ್ಯಾಂಡ್‌ಗಳ ವಿಚಾರದಲ್ಲಿ ಹಣಕಾಸಿನ ಮಂತ್ರಿಗಳು ವಿವರಣೆಯನ್ನು ಕೊಡಬೇಕೆಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ.

ಒಂದು ಮುಖ್ಯವಾದ ಅಂಶ ಅಂದರೆ ಕೆಲವು ಡಿಮಾಂಡ್ಸ್ ವಿಚಾರದಲ್ಲಿ ಆಯವ್ಯಯ ಪಟ್ಟಿ ತಯಾರ್‌ಮಾಡಿ ಸಭೆಯ ಮಂಜೂರಾತಿ ಪಡೆಯುವುದಕ್ಕೆ ಮುಂಚಿತವಾಗಿಯೇ ಇಲಾಖೆಯವರು ಸರಿಯಾಗಿ ಯೋಚನೆಮಾಡಿ ಸಕಾಲದಲ್ಲಿ ಇವುಗಳನ್ನು ಆಯವ್ಯಯ ಪಟ್ಟಿಯಲ್ಲಿ ಸೇರಿಸಿದ್ದರೆ ಈಗ ಪುನಃ ಸಭೆಯ ಮುಂದೆ ಬರತಕ್ಕದ್ದು ಅನಾವಶ್ಯಕವಾಗಿತ್ತು. ಡಿಮ್ಯಾಂಡ್ 18ರಲ್ಲಿ ಐಟಂ 41ರ ಬಗ್ಗೆ ಹೇಳುವುದಾದರೆ ಹೈದರಾಬಾದಿನಲ್ಲಿರುವ ಉಸ್ಮಾನಿಯಾ ಮೆಡಿಕಲ್ ಕಾಲೇಜಿನಲ್ಲಿ ನಮ್ಮ ಭಾಗದಿಂದ ಹೋಗತಕ್ಕಂಥ ವಿದ್ಯಾರ್ಥಿಗಳಿಗೆ ಅವಕಾಶ ಕೊಡಬೇಕು, ನಮ್ಮ ಸರಕಾರ ಸ್ವಲ್ಪ ಭಾಗ ಖರ್ಚು ವಹಿಸಬೇಕು ಎಂದಿದೆ, ಇದು ಆಕ್ಟ್‌ನಲ್ಲಿದೆ. ಪ್ರತಿ ವರ್ಷ ಆಯವ್ಯಯ ಪಟ್ಟಿಯಲ್ಲಿ ಹಣ ಮಂಜೂರು

ಮಾಡುತ್ತಾ ಬಂದಿದ್ದೀರಿ. ಒಟ್ಟು ಎಷ್ಟು ಹಣ ಕೊಡಬೇಕಾಗುತ್ತದೆ ಎಂಬುದನ್ನು ಮೊದಲೇ ಸರಿಯಾಗಿ ತಿಳಿದುಕೊಂಡು ಹಣ ಒದಗಿಸಿದ್ದರೆ ಸಪ್ಲಿಮೆಂಟರಿ ಗ್ರಾಂಟ್ಸ್‌ನಲ್ಲಿ ಇಡುವುದು ಅನಾವಶ್ಯಕವಾಗುತ್ತಿತ್ತು. ಲೆಕ್ಕ ಪತ್ರ ಸರಿಯಾಗಿ ವಿಚಕ್ಷಣೆಯಿಂದ ಮಾಡಲಿಲ್ಲ ಎಂದು ನಾನು ಅಭಿಪ್ರಾಯ ಪಡುತ್ತೇನೆ.

ಇನ್ನು ವ್ಯವಸಾಯ ಇಲಾಖೆ ಮತ್ತು ಸಹಕಾರ ಇಲಾಖೆಗೆ ಸಂಬಂಧಪಟ್ಟ ಡಿಮ್ಯಾಂಡ್ ನಂಬರು 20ರಲ್ಲಿ ಸುಮಾರು 30 ಲಕ್ಷ ರೂಪಾಯಿ ಕೇಳುತ್ತಾ ಇದ್ದೀರಿ. ರಾಸಾಯನಿಕ ಗೊಬ್ಬರ, ಬೀಜ ಮುಂತಾದ ವಸ್ತುಗಳನ್ನು ರೈತನಿಗೆ ಸಹಕಾರ ಸಂಘಗಳ ಮುಖಾಂತರ ಒದಗಿಸಬೇಕು ಎಂದಿವೆ. ಇದಕ್ಕೆ ತಗಲತಕ್ಕಂಥ ಖರ್ಚನ್ನು ಸಹಕಾರ ಸಂಘಗಳಿಗೆ ಕೊಡುತ್ತಾ ಇದ್ದಿರಿ. ಸಹಕಾರ ಸಂಘಗಳಿಗೆ ವಹಿಸಿಕೊಡತಕ್ಕಂಥಾದ್ದು ಸಹಜ. ಇದು ಸರಕಾರ ಒಪ್ಪಿಕೊಂಡ ನೀತಿ. 28ನೇ ಏಪ್ರಿಲ್ 1960 ಆರ್ಡರ್ ಸಹ ಮಾಡಿದ್ದೀರಿ. ಆದರೆ ರಿಯಾಯತಿ ದೊರೆಯದೆ ಹಣಕಾಸಿನ ವಿಚಾರದಲ್ಲಿ ನಾನಾ ತೊಂದರೆಗಳನ್ನು ಅನುಭವಿಸಬೇಕಾಗಿದೆ. ಇದರ ಬಗ್ಗೆ ಅಧಿಕಾರಿಗಳು ಸರಿಯಾಗಿ ಯೋಚನೆ ಮಾಡಿ ತಿಳುವಳಿಕೆ ಮಾಡಿಕೊಟ್ಟಿದ್ದರೆ ಸಪ್ಲಿಮೆಂಟರಿ ಗ್ರಾಂಟಿನಲ್ಲಿ ಬರುವುದು ಅವಶ್ಯಕತೆ ಇರಲಿಲ್ಲ. ತೊಂದರೆ ತಪ್ಪಿಸಬಹುದಾಗಿತ್ತು.

ಇನ್ನು ಐಟಂ ನಂಬರ್ 2 ಮತ್ತು 3ರಲ್ಲಿ ಟೋಕನ್ ಗ್ರಾಂಟ್ ಕೇಳಿದ್ದೀರಿ. ಇದರ ಅರ್ಥ ಏನು ಅಂದರೆ ಹೆಚ್ಚಿನ ಹಣ ಈಗ ಬೇಕಾಗಿಲ್ಲ, ಮಂಜೂರಾತಿ ಮಾತ್ರ ಬೇಕು ಎಂದು. ಆಯವ್ಯಯ ಪಟ್ಟಿಯಲ್ಲಿ ಪ್ರತಿಯೊಂದು ಸ್ಕಿಂ ಬಗ್ಗೆ ಮಂಜೂರಾತಿ ಪಡೆದಿರುತ್ತೀರಿ. ಸಪ್ಲಿಮೆಂಟರಿ ಗ್ರಾಂಟ್ಸ್ ಸಮಯದಲ್ಲಿ ಪ್ರತಿಯೊಂದು ಸ್ಕೀಂ ಬಗ್ಗೆ ವಿವರವಾಗಿ ತಿಳುವಳಿಕೆ ಕೊಡುವುದಿಲ್ಲ. ನಮಗೆ ಡೀಟೇಲ್ಸ್ ನೋಡಲು ಸಾಧ್ಯವಾಗುವುದಿಲ್ಲ. ಈ ರೀತಿ ಇರುವುದರಿಂದ ಮುಖ್ಯ ವಿಚಾರ ಬಿಟ್ಟು ಹೋಗುತ್ತದೋ ಏನೋ ಎಂಬ ಶಂಕೆ ಬರುತ್ತದೆ. ಇದಕ್ಕೆ ಇಲಾಖೆಯವರು ಸಾಕಷ್ಟು ನಿಗಾ ಕೊಡಬೇಕು ಎಂದು ಹೇಳುತ್ತೇನೆ. ಕೊನೆಯದಾಗಿ ಈಗ ತಂದಿರತಕ್ಕಂಥ ಸಪ್ಲಿಮೆಂಟರಿ ಬೇಡಿಕೆಗಳಿಗೆ ಸಂಪೂರ್ಣ ಅನುಮೋದನೆ ಸೂಚಿಸುತ್ತೇನೆ. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† **Sri K. S. SURYANARAYANA RAO.**—Mr. Speaker, Sir, I would like to support the Supplementary Estimates and while doing so, I would like to offer a few comments for the Consideration of the Finance Minister.

Sir, at the outset, I would like to refer to one item which my friend Sri Basappa already referred to and that is about co-operative societies. Sir, anything and everything could be said of the co-operative societies these days without looking into facts or without knowing more about individuals, let alone the administration of a particular organisation which he administers. It is rather unfortunate that our friend has made certain caustic remarks. I only wish that he had confined himself to the administration of the organisation rather than making personal references. Making such personal references, if I may say so, is rather out of tune and is far from truth. If our friend had taken pains to know things, I believe he would never have made comments personally on the organisation which he has administered. So far as that particular item of payment is concerned, Sri Basappa has already explained. The whole point is that this was being worked up and construction was being carried out by the Agricultural Department. Sir, Government will possibly explain the position that by entrusting this to the co-operative societies, Government has stood to gain and to not lose. Because the Government had to spend on administration besides granting subsidy. They were spending something like Rs 10-15 lakhs on administration. Sir, this amount they are going to save. After a long-drawn discussion between the societies and the Agricultural Department who were administering it from the beginning, they have come to

(SRI K. S. SURYANARAYANA RAO)

this arrangement. There is little to comment upon it. All that could be said is they have everything to gain by it and not lose by it. The Department, when they were administering it had to spend what the societies arespending plus about Rs. 15 lakhs. So Rs. 15 lakhs are saved for the State and to the Exchequer and not wasted. Our friend will possibly know more details before making comments. So far as this partioular item is concerned, it should not become a fashion to say anything and everything about every organisation.

5-00 P.M.

So far as the Supplementary Demands are concerned, I wish to draw the attention of this House to the fact that the Appropriation Accounts that the Accountant General has placed before us disclose that we do not spend all the amount that we provide under the supplementary grants because we could find from the figures as much as Rs. 6 crores is not utilised, of the funds provided for. Only in 2-3 items, if I could recollect correctly, there has been excess expenditure, and taking the overall expenditure, there has been lapse of nearly Rs. 4 crores for the year under report, I believe it is 62-63. If that is the position, in many cases, the supplementary grant becomes superfluous. In 96 per cent of cases, there have been lapses. If I could recollect, except in P. W. D. and perhaps in the Electricity Department and one other department, every other Department has some money to surrender to the State Exchequer. So far so good, if it is a means of economy; but it is not a means of economy; it is not spending the money provided for. If the Finance Minister presents the budget, he knows that this is the money that he needs. If he does not spend it, it only means that possibly the Finance Minister is too liberal in making estimates. That is all I would like to say so far as the general pattern of supplementary grants is concerned.

I would like to refer one item now and then say a few words about some other items. On page 78, there is demand asked for restoration of Bandahalli Chikkere Tank, K. R. Nagar Taluk. The point is this. This is a tank which was sanctioned; this is a tank for which after the work was started, stay order was issued. The matter as to whether the work should continue or not went to the High Court. Subsequently the stay order was vacated. I hear that at the time of completion of this very tank and water being let out, orders are being issued to breach the tank. If this is the way of doing things, I am sorry. This ought not to be the way of doing things. If that is not the tank, this tank that they are providing for is an alternative to the tank they are going to breach. The waste-weir is about to be put up and water let out. At that stage, the stay order is issued. It is disclosed that orders are under issuef or breaching the tank. This Government has spent nearly Rs. one lakh and they want to breach, I do not know for what purpose. If

that is the case, I am extremely sorry. I have to tell the Honourable Finance Minister to have a second thought about it before asking for supplementary grant for it.

Mr. SPEAKER.—The great difficulty is, that the Hon'ble Member himself is not sure about it.

Sri K. S. SURYANARAYANA RAO.—Whatever correspondence that I have with me I will pass it on to you so that......

Mr. SPEAKER.—I am seriously requesting the member to pass it on to the Finance Minister. He may proceed to the next point.

Sri K. S. SURYANARAYANA RAO.—The other point I would like to mention is about M. S. K. Mills. It is to be admitted that this is an industry that has to be stablised. There is half-hearted affair in this matter.

Sri B. D. JATTI.—Full hearted.

Sri K. S. SURYANARAYANA RAO.—When they were in difficulty Government advanced money to get over the difficulty and they wanted to run the Mills or allow them to do so. They come in at the last hour to run them. Why so half-hearted ? They come in after having accounted themselves to the extent of Rs. 16 lakhs and more; they come in only when the Mills closed down completely. It is only when the Mills closed down down they come with a demand for Rs. 45 lakhs so that they could put the Mills into a working condition. You come to their assistance only after the Mill is closed, not before. You had committed yourself to help them before the Mills was closed. You please read your own explanatory statement.

Sri B. D. JATTI.—This explanatory statement is given for supplementary amount. If the Honourable Member reads the previous budget speech, he will not comment at all.

Sri K. S. SURYANARAYANA RAO.—I will read the paragraph.

"For want of adequate fianances, the Mills had stopped working from the early part of December 1962..." I ask the Government, if they had assisted the Mills before December 1962.

> "...and the employees ware thrown out of employment. Since the Mehaboob Shahi Kulbarga Mills, Limited, Gulbarga is the only big industry in a backward area, there was no possibility of alternative employment for the labourers...The National Industrial Development Corporation who have been approached for financial assistance have said that the proposal would be considered only if the Mills are in working condition and therefore, it was considered necessary to restart the working of the Mills in order to get the loan assistance from the National Dsvelopment Corporation..."

It is a Mill which had assisted prior to closure, but you did not anticipate a position because with 30-40 years experience in the Industries Department, this State had failed to foresee a position of running an

(SRI K. S. SURYANARAYANA RAO)

industry. The Mills had stopped working and the employees were thrown out of employment. It is good at last Government have come to their rescue and the industry is set on foot. Another industry I would like to refer to is the Electric Factory. I am given to understand that the schedule is not kept up, the progress is not up to the mark. The German experts who are supposed to have come at the proper time, have arrived. I do not know if their services are being used; I know their services are being used elsewhere.

Sri B. D. JATTI.—You are wrongly informed.

Sri K. S. SURYANARAYANA RAO.—But not for the purpose for which they have come, because the buildings and other things which should have come up to a particular point in a particular time have not come up to that standard.

Smt. VIJAYADEVI RAGHAVENDRA RAO (Chitapur).—Mr. Speaker, I have heard many of the Hon'ble Members offering valuable and broad suggestions and also making a few criticisms. I would like to refer to a couple of points raised by some of the Hon'ble Members. At the outset, I want to congratulate the Finance Minister for handling the very alarming problem of goldsmiths very tactfully and very cleverly. On page 54, details relating to the training scheme for goldsmiths are given. Due to the gold control order of Government of India, so many goldsmiths were turned out of jobs and therefore, Government have thought of the orientation trainig for those people. In this connection, I would request the Government to ask some of the Managements of the Private Sector, wherever there are industries and they may be asked to start such orientation training centres so that these people are behefitted. I believe, the Government will take this aspect into consideration and will do the needful.

Sir, on Demand No. 39, Sri G. V. Gowda and Sri Gopala Gowda spoke about the development works in the Karnatak area that have come to the erstwhile Mysore State but they were not for writing off certain amounts. I believe, these Hon'ble Members do not know the plight of the Gulbarga people before Police Action. They were under the Nawabshahi rule and there was practically no facility extended to the raiyats there. On the contrary, they were harassed and suppressed. About 50 per cent of this harassment vanished after the police action by Government of India and those people expected a sympathetic outlook from others. That was achieved after the Re-organisation of the State and our joy knew no bounds for our wishes were fulfilled as the bud would come out as a flower.

As regards the arrears which have already been longstanding about the purchase of tractors, I wish that those arrears will also be written off so that the people of that area will be benefitted more than what they are benefitted now. I am making this suggestion for the consideration of the Government.

Sir, the whole of Gulbarga Division is very happy to know that the Government has advanced 60 lakhs of rupees to the M.S.K. Mills, Gulbarga. It being the only textile mill in Gulbarga, it was vear necessary for the Government to revive it. There were about three thousand workers that were thrown out of job and because Government have now come forward to help these people, they have come back. One thing I would like to bring to the notice of the Government is, although most of the debts have been cleared, I believe payment has not been made. I request the Government to ask the office-bearers to look into this matter.

As regards the Medical Demand one, very, convincing point was raised by Sri M.C. Basappa, *i.e.*, admission of students to the Medical Colleges which are now in Hyderabad-Oosmania and the Gandhi Medical College. I do agree that there was an agreement between the Mysore Government and the Andhra Pradesh Government that 50 per cent of the seats should be reserved for the medical students, *i.e.*, for Gulbarga Division students. Sri Basappa's point was, why no expenditure was shown for all these years. I would like to inform that those students who were admitted in 1957 completed their courses in 1962. So, the actual expenditure that came up before this Government was for the year 1962–63. This will go on for five years.

SRI M. C. BASAPPA.—That was not the point Sir. For all the three years, it has been paid now.

SMT. VIJAYADEVI RAGHAVENDRA RAO.—We have to bear the expenditure for another five years. That is another point. With these few words I conclude my speech and thank the Chair.

† ಶ್ರೀ ಎಸ್. ಎಂ. ಗುರ್ರೆಡ್ಡಿ (ಮುದ್ದೇಬಿಹಾಳ).—ಮಾನ್ಯ ಸಭಾಪತಿಗಳೇ : ನಮ್ಮ ಹಣಕಾಸಿನ ಸಚಿವರು ಸಭೆಯಮುಂದೆ ಇಟ್ಟಿರತಕ್ಕ ಅಡಿಷನಲ್ ಸಪ್ಲಿಮೆಂಟರಿ ಗ್ರ್ಯಾಂಟಿನ ಮೇಲೆ ಮಾತನಾಡುತ್ತ ಕೆಲವೊಂದು ಮಾಹಿತಿಗಳನ್ನು ಮಾನ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಆದರೆ ಈ ಹಿಂದೆ ಮಾನ್ಯ ವಿದ್ಯಾಮಂತ್ರಿಗಳಲ್ಲಿ ಒಂದು ವಿಚಾರವನ್ನು ತಿಳಿಸಿದ್ದೆನು. ಆದರೆ ಅದರ ಬಗ್ಗೆ ಇದರಲ್ಲಿ ಏನೂ ಹೇಳಿಲ್ಲ. ಹಿಂದೆಯೇ ನಾನೊಮ್ಮೆ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೂ ಮತ್ತು ಪಾಠ ಹೇಳತಕ್ಕ ಉಪಾಧ್ಯಾಯರ ಸಂಖ್ಯೆಗೂ ಸಂಬಧವೇ ಇರುವುದಿಲ್ಲ; ಈ ವ್ಯತ್ಯಾಸವನ್ನು ತೊಡೆದು ಹಾಕಬೇಕು ಎಂದು ಹೇಳಿದ್ದೆನು. ಮುಂದೆ ಕಂಪಲ್ಸರಿ ಎಜುಕೇಷನ್ನನ್ನು ಜಾರಿಗೆ ತರೋ ಕಾಲಕ್ಕೆ ಅದನ್ನು ಸರಿಪಡಿಸಲಾಗುತ್ತದೆ ಎಂದು ಹೇಳಿದ್ದರು. ಈಗ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ 45-50 ಇದೆ, ಇದನ್ನು 40ಕ್ಕೆ-ಇಳಿಸಲು ಪ್ರಯತ್ನ ಮಾಡುತ್ತೇವೆಂದೂ ಇದಕ್ಕಾಗಿ ಕೇಂದ್ರ ಸರ್ಕಾರದಿಂದ ಹೆಚ್ಚಿಗೆ ಗ್ರ್ಯಾಂಟ್ ದೊರೆಯುತ್ತದೆಂದೂ ಹೇಳಿದ್ದರು. ಆದರೆ ಈಗ ನಮ್ಮ ಮುಂದಿರತಕ್ಕ ಸಪ್ಲಿಮೆಂಟರಿ ಗ್ರ್ಯಾಂಟಿನಲ್ಲಿ ಅದೊಂದೂ ಗೊತ್ತಾಗುವುದಿಲ್ಲ. ಆ ವಿಚಾರವನ್ನು ಈಗಲಾದರೂ ವಿಶದೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ. ವಿದ್ಯಾ ಖಾತೆಯ ಮೇಲೆ ಸಾಕಷ್ಟು ಆಗಲೇ ಇಲ್ಲಿ ಮಾತನಾಡಿದ್ದಾರೆ. ಅದರ ಬಗ್ಗೆ ಮಾನ್ಯ ಫೈನಾನ್ಸ್ ಮಿನಿಸ್ಟರವರೂ ಪರಿಶೀಲನೆ ಮಾಡಿ ಹೇಳುತ್ತಾರೆ ಎಂದು ನಂಬಿದ್ದೇನೆ.

ಇನ್ನು ಡಿಮ್ಯಾಂಡು 20ರಲ್ಲಿ ನಾಲ್ಕು ಸಾವಿರದಷ್ಟು Half field Demonstration. ಮಾಡಬೇಕು ಮತ್ತು ಸಂಬಂದಪಟ್ಟ ರೈತರಿಗೆ 25 ರೂಪಾಯಿಗಳಂತೆ ಸಬ್‌ಸಿಡಿ ಕೊಡಬೇಕು ಎಂದು ಹೇಳಿ, ಅದಕ್ಕಾಗಿ ಸುಮಾರು ಒಂದು ಲಕ್ಷ ಬೇಕಾಗುತ್ತದೆ ಎಂದು ಇಲ್ಲಿ ಹಣ ಕೇಳಿದ್ದಾರೆ. ಈ ರೀತಿಯಾದ Half field Demonstration ಎನ್ನುವುದನ್ನು ಜುಲೈ ತಿಂಗಳಿನಲ್ಲೇ ಮಾಡಬೇಕಾಗಿತ್ತು. ಆದುದರಿಂದ ಈಗ ಈ Half field Demonstration ಎನ್ನುವುದನ್ನು ಯಾವಾಗ ಮಾಡುತ್ತಾರೆನ್ನುವುದನ್ನು ಸ್ಪಷ್ಟ ಪಡಿಸಬೇಕು, ಇನ್ನು ಇಂಪ್ಲಿಮೆಂಟುಗಳನ್ನು ಕೊಳ್ಳುವುದಕ್ಕಾಗಿ 1.25 ಲಕ್ಷ ಹಣ ಬೇಕೆಂದು ಕೇಳಿದ್ದಾರೆ. ಈಗಾಗಲೇ ಹೊಲಗಳಲ್ಲಿ ಬೀಜವನ್ನು ಬಿತ್ತಿದ್ದಾಗಿದೆ. ಈಗ ಇವನ್ನು ಹಂಚಿದರೆ ಅಷ್ಟು ಅನುಕೂಲವಾಗುವುದಿಲ್ಲ. ವಕ್ಕಲಿಗರ ಸಲುವಾಗಿ ಹೀಗೆ ಸಬ್‌ಸಿಡಿಕೊಟ್ಟು ಒಂದು ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಬದಲಾಗಿ ಅವರಿಗೆ ಒಳ್ಳೆಯ ಗೊಬ್ಬರ

(ಶ್ರೀ ಎಸ್. ಎಂ. ಗುರ್ರೆಡ್ಡಿ)

ವನ್ನು ಕೊಟ್ಟು ಸಹಾಯ ಮಾಡುವುದಾದರೆ ಒಳ್ಳೆಯದಾದೀತು. Half field Demonstration ಎನ್ನುವುದನ್ನು ಒಕ್ಕಲಿಗರು ಮಾಡುವುದಿಲ್ಲ. ಇದನ್ನು ಇಲಾಖೆಯವರು ಬಂದು ತೋರಿಸಬೇಕು. ಈಗಾಗಲೇ ಸಾಕಷ್ಟು ಜನ ಮಾತನಾಡಿದ ಹಾಗೆ ಇರಿಗೇಷನ್ನು ಫೆಸಿಲಿಟೀಸ್‌ಗಳಿಗಾಗಿ ನಮ್ಮಲ್ಲಿ ಎಷ್ಟೋ ಟ್ರಾಕ್ಟರುಗಳು ಮತ್ತು ಬುಲ್ ಡೋಜರುಗಳು ರಿಪೇರಿಯಾಗದೆ ಹಾಗೇ ಉಳಿದಿವೆ. ಇವನ್ನೆಲ್ಲಾ ರಿಪೇರಿ ಮಾಡಿದ್ದಿದ್ದರೆ ಇದರಿಂದ ಹೆಚ್ಚು ಅನುಕೂಲಗಳಾಗುತ್ತಿತ್ತು, ರಷ್ಯಾ ಮತ್ತು ಇತರ ಹೊರ ದೇಶಗಳಿಗೆ ಹಣವನ್ನು ಕೊಟ್ಟು ಖರ್ಚು ಮಾಡುವುದನ್ನೂ ತಪ್ಪಿಸಬಹುದಾಗಿತ್ತು ಎಂದು ನನಗೆ ಕಾಣುತ್ತದೆ.

ರೂರಲ್ ಡೆವಲಪ್‌ಮೆಂಟಿಗಾಗಿ ಸಾಕಷ್ಟು ಹಣವನ್ನು ಕೊಡಬೇಕಾಗಿದೆ. ನಮ್ಮ ಮೂರನೇ ಯೋಜನೆಯ ಪ್ರಕಾರ 50 ಲಕ್ಷ ರೂಪಾಯಿ ಪರಿಮಿತಿಯನ್ನು ಈಗ 100 ಲಕ್ಷಕ್ಕೆ ಏರಿಸಲಾಗಿದೆ. ಜನರು ಕೊಡುವ ವಂತಿಗೆಯನ್ನು ತೆಗೆದರೆ ಸುಮಾರು 20 ಲಕ್ಷ ಈ ಸಾಲಿಗೆ ಬೇಕಾಗುತ್ತದೆ. ಅದರಲ್ಲಿ ಈಗ ಒದಗಿಸಿರುವ 9 ಲಕ್ಷ ತೆಗೆದರೆ ಇನ್ನೂ 11 ಲಕ್ಷದಷ್ಟು ಹಣ ಬೇಕಾಗಿದೆ ಎಂದು ಇದರಲ್ಲಿ ಕೇಳಿದ್ದಾರೆ. ಕುಡಿಯುವ ನೀರಿನ ಬಾವಿಗಳಿಗೆ ಈಗ ಡಿಮ್ಯಾಂಡು ಹೆಚ್ಚಾಗಿದೆ, ಇದರ ಸಲುವಾಗಿ ಜನರ ಸಹಾಯವನ್ನು ಕೇಳುವುದಾದರೆ ಜನ ಇಂದು ಸಾವಿರ ರೂಪಾಯಿಗಳಷ್ಟು ಹಣವನ್ನು ಕೊಡುವುದಕ್ಕೂ ಸಿದ್ಧರಾಗಿದ್ದಾರೆ, ಆರೀತಿ ಮುಂದಾದರೂ ಯೋಜನಾ ಮಾಡಿ ಇದನ್ನು ಉಪಯೋಗಿಸಿಕೊಳ್ಳಬಹುದು ಎಂದು ಸಲಹೆ ಮಾಡುತ್ತೇನೆ.

